# ವಿಷ್ಣುಸೂಕ್ತಭಾಷ್ಯ

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
2000

# ಅಧ್ಯಾತ್ಮಪ್ರಕಾಶ ಕಾರ್ಯಾಲಯ,

ಹೊಳೆನರಸೀಪುರ - 573211 ಸ್ಥಾಪನೆ : 1920 ✆ 08175 - 73820

## ಓದಲೇಬೇಕಾದ ಇದೇ ಗ್ರಂಥಕರ್ತರ ಕೆಲವು ಪುಸ್ತಕಗಳು

### I. ವೇದಸಾಹಿತ್ಯ ಪ್ರಿಯರಿಗೆ : (ಕರ್ಮಕಾಂಡದಲ್ಲಿ ಶ್ರದ್ಧಾವಂತರಿಗೆ)

| | ಪುಟಗಳು |
|---|---|
| 1. **ರುದ್ರಭಾಷ್ಯ ಪ್ರಕಾಶ :** (ನಮಸ್ತೇ ರುದ್ರ - ಎಂಬ ವೇದ ಭಾಗದ ಲಲಿತವಾದ ಕನ್ನಡ ವಿವರಣೆ) | 156 |
| 2. **ಚಮಕಾಧ್ಯಾಯ ಭಾಷ್ಯ :** (ಚ ಮೇ-ಎಂಬ ವೇದಭಾಗದ ಸರಳ ವ್ಯಾಖ್ಯಾನ) | 82 |
| 3. **ಪುರುಷಸೂಕ್ತ ಭಾಷ್ಯ :** (ಸಹಸ್ರಶೀರ್ಷಾ - ಎಂಬ ಸೂಕ್ತದ ಅರ್ಥವಿವರಣೆ) | 107 |
| 4. **ಶ್ರೀಸೂಕ್ತ ಭಾಷ್ಯ :** (ಹಿರಣ್ಯವರ್ಣಾಂ - ಎಂಬ ಸೂಕ್ತದ ಅರ್ಥ) | 62 |
| 5. **ವಿಷ್ಣುಸೂಕ್ತಭಾಷ್ಯ :** (ಋಗ್ವೇದದ ವಿಷ್ಣುಸೂಕ್ತದ 45 ಋಕ್ಕುಗಳ ಅರ್ಥ ವಿವರಣೆ, -ನಾರಾಯಣ ಸೂಕ್ತಭಾಷ್ಯಸಮೇತ | 107 |
| 6. **ಸೌರಸೂಕ್ತ ಭಾಷ್ಯ :** (ಋಗ್ವೇದದ ಸೌರಸೂಕ್ತದ 64 ಋಕ್ಕುಗಳ- ಅರ್ಥವಿವರಣೆ) | 104 |

### II. ಪುರಾಣ ಸ್ತೋತ್ರಪ್ರಿಯರಿಗೆ (ಭಕ್ತಿ ಪ್ರಧಾನರಾದ ಸಾಧಕರಿಗೆ)

| | |
|---|---|
| 7. **ಅಧ್ಯಾತ್ಮರಾಮಾಯಣ :** (ಸಂಪೂರ್ಣ ಮೂಲ, ಭಾವಾರ್ಥ ಸಹಿತ) | 612 |
| 8. **ಅಧ್ಯಾತ್ಮ ಶಂಕರವಿಜಯ :** (ಶಂಕರರ ಜೀವನಚರಿತ್ರೆ) | 188 |
| 9. **ಶ್ರೀ ಗುರುಚರಿತಾಮೃತ :** (ಶ್ರೀಶ್ರೀ ಗಳವರ ಜೀವನ ಚರಿತ್ರೆ ಮತ್ತು ಕಾರ್ಯಾಲಯದ ಇತಿಹಾಸ) | 234 |
| 10. **ಸ್ತೋತ್ರಮಾಲಾ - ಭಾಗ ೧, ಪಂಚರತ್ನಗಳು :** (1) ಭೀಷ್ಮಸ್ತವರಾಜ, (೨) ಹರಿಶರಣಾಷ್ಟಕ, (3) ಅನುಸ್ಮೃತಿ, (4) ಗಜೇಂದ್ರಮೋಕ್ಷ, (5)ಆದಿತ್ಯಹೃದಯ | 103 |
| 11. **ಸ್ತೋತ್ರಮಾಲಾ - ಭಾಗ ೨ :** 4 ಗಣಪತಿ ಸ್ತೋತ್ರಗಳು, 11 ಶಿವ ಸ್ತೋತ್ರಗಳು, 2 ವಿಷ್ಣುಸ್ತೋತ್ರಗಳು - ಪಾಂಡವಗೀತೆ ಸಹಿತ) | 84 |
| 12. **ಶಿವಾಪರಾಧಕ್ಷಮಾಪಣ ಸ್ತೋತ್ರ :** (ವಿವರಣೆ ಸಹಿತ) | 38 |
| 13. **ಭಗವನ್ನಾಮಚಂದ್ರಿಕೆ :** (ಅಷ್ಟೋತ್ತರಗಳ ಸಂಗ್ರಹ) | 52 |
| 14. **ಸನತ್ಸುಜಾತೀಯಮ್** (ಪ್ರಕರಣಗಳು ಸಂಪುಟ 7) (ಮಹಾಭಾರತಾಂತರ್ಗತ ಸನತ್ಸುಜಾತೀಯ ಶಾಂಕರಭಾಷ್ಯ ಅನುವಾದ ಸಹಿತ) | 254 |

ಅಧ್ಯಾತ್ಮ ಗ್ರಂಥಾವಳಿ

ನಾರಾಯಣಸೂಕ್ತಭಾಷ್ಯಸಮೇತ

# ವಿಷ್ಣುಸೂಕ್ತಭಾಷ್ಯ

(ಕನ್ನಡ ವಿವರಣೆ)

ಬರೆದವರು :

ಅಧ್ಯಾತ್ಮವಿದ್ಯಾಪ್ರವೀಣ, ವೇದವಿದ್ಯಾಭೂಷಣ

**ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ**

ಕ್ರಮಾಂಕ ೧೯೨

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ,

ಹೊಳೆನರಸೀಪುರ.

2000

ಮೊದಲನೆಯ ಸಂಸ್ಕರಣ : 1986 ( 1000 ಪ್ರತಿಗಳು)
ಎರಡನೆಯ ಸಂಸ್ಕರಣ : 2000 ( 2000 ಪ್ರತಿಗಳು)

*All Rights Reserved*
ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು

ಅಕ್ಷರ ಜೋಡಣೆ :
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. 213, ಬಾಲಾಜಿ ರಸ್ತೆ
ತ್ಯಾಗರಾಜನಗರ, ಬೆಂಗಳೂರು - 560 028
ದೂರವಾಣಿ : 676701 6

ಮುದ್ರಣ ಸ್ಥಾನ :
**ಶ್ರೀ ಗಣೇಶಮಾರುತಿ ಪ್ರಿಂಟರ್ಸ್**
ನಂ. 76, 3ನೇ ಬ್ಲಾಕ್, 6ನೇ ಮುಖ್ಯರಸ್ತೆ.
ತ್ಯಾಗರಾಜನಗರ, ಬೆಂಗಳೂರು - 560 028
ದೂರವಾಣಿ : 6528542

# ಪೀಠಿಕೆ

ವೈದಿಕಸಾಹಿತ್ಯದಲ್ಲಿ ಋಗ್ವೇದಾಂತರ್ಗತವಾದ ವಿಷ್ಣುಸೂಕ್ತವು ೪೫ ಋಕ್ಕುಗಳಿಂದ ಕೂಡಿದೆ. ನಾರಾಯಣಸೂಕ್ತವು ೧೨ ಋಕ್ಕುಗಳುಳ್ಳದ್ದಾಗಿದೆ. ಈ ಎರಡು ಸೂಕ್ತಗಳನ್ನೂ ವೈದಿಕವಿದ್ವಾಂಸರುಗಳು ಪಾರಾಯಣ, ಪೂಜೆ, ಮಂತ್ರ-ಪುಷ್ಪ ಮುಂತಾದ ಸಂದರ್ಭಗಳಲ್ಲಿ ಬಳಸುತ್ತಾರೆ. ಈ ಎರಡು ಸೂಕ್ತಗಳಿಗೂ ಶ್ರೀ ಸಾಯಣಾಚಾರ್ಯರ ಭಾಷ್ಯವಿದೆ. ವೈದಿಕವಾಙ್ಮಯದಲ್ಲಿರುವ ಈ ಸೂಕ್ತಗಳು ಜನಪ್ರಿಯವಾಗಿದ್ದು ಅದ್ವೈತ, ವಿಶಿಷ್ಟಾದ್ವೈತ, ದ್ವೈತ- ಮತಾವಲಂಬಿಗಳಾದ ಆಸ್ತಿಕರೆಲ್ಲರೂ ಇವುಗಳನ್ನು ಪಠಿಸುತ್ತಾರೆ. ಆದ್ದರಿಂದ ಈ ಸೂಕ್ತಗಳ ಅರ್ಥಾನುಸಂಧಾನವನ್ನು ಮಾಡಲು ಅನುಕೂಲವಾಗಲೆಂಬ ಉದ್ದೇಶದಿಂದ ಇವುಗಳಿಗೆ ಸಾಯಣಭಾಷ್ಯಾನುಸಾರವಾಗಿ ವಿವರಣೆಯನ್ನು ಬರೆದು ವಾಚಕರಿಗೆ ಸಮರ್ಪಿಸಿದ್ದೇನೆ.

ವೇದಾಂತಪ್ರತಿಪಾದ್ಯವಾದ ಪರಬ್ರಹ್ಮವನ್ನೇ ಇಲ್ಲಿ ನಾರಾಯಣ, ವಿಷ್ಣು ಎಂಬ ಶಬ್ದಗಳಿಂದ ಸ್ತುತಿಮಾಡಲಾಗಿದೆ. ಈ ಹೆಸರುಗಳು ತ್ರಿಮೂರ್ತಿಗಳಲ್ಲಿ ಒಬ್ಬನಾದ ಸ್ಥಿತಿಕಾರಕನಾದ ಶ್ರೀ ಮಹಾವಿಷ್ಣುವಿನ ಪಾರಮ್ಯವನ್ನು ಸೂಚಿಸುತ್ತದೆ . ಆದರೂ ಸನಾತನವೈದಿಕಧರ್ಮದ ಉಪದೇಶದಂತೆ ದೇವರು ಒಬ್ಬನೇ ಆಗಿದ್ದು ಅವನನ್ನೇ ತ್ರಿಮೂರ್ತಿಗಳ ರೂಪದಿಂದಲೂ ಆಯಾ ಸೃಷ್ಟಿಸ್ಥಿತಿಸಂಹಾರ ರೂಪವಾದ ಕಾರ್ಯಗಳಿಗೆ ತಕ್ಕಂತೆಯೂ ಸ್ತುತಿಸಿರುವದೇ ಉದ್ದೇಶವಾಗಿದೆ. ಈಗ ಜಗತ್ತಿನ ಸ್ಥಿತಿಕಾಲವಾದ್ದರಿಂದ ಈ ಕಾಲಕ್ಕೆ ಅಧಿಪತಿಯಾದ ಪರಮಾತ್ಮನನ್ನು ವಿಷ್ಣುವೆಂದು ಕರೆಯಲಾಗಿದೆ. ಈ ವಿಷ್ಣುಶಬ್ದವೂ ಮುಖ್ಯಾರ್ಥದಲ್ಲಿ ಸರ್ವ ವ್ಯಾಪಕನೆಂಬುದನ್ನೇ ಇಲ್ಲಿ ತಿಳಿಸಲಾಗಿದೆ. ತತ್ತ್ವ ದೃಷ್ಟಿಯಿಂದ ವಿಚಾರಮಾಡಿದಾಗ ಬ್ರಹ್ಮನೆಂದರೆ (ಬೃಹತ್) ಎಲ್ಲಕ್ಕಿಂತಲೂ ದೊಡ್ಡವನೆಂದೂ ವಿಷ್ಣುವೆಂದರೆ ಸರ್ವವ್ಯಾಪಕನೆಂದೂ ಶಿವನೆಂದರೆ ಮಂಗಳಸ್ವರೂಪನೆಂದೂ ಅರ್ಥಮಾಡಿದಾಗ ತ್ರಿಮೂರ್ತಿಗಳ ಸಮನ್ವಯವೂ ಸಿದ್ಧವಾಗುತ್ತದೆ.

ವೇದಕಾಲದಲ್ಲಿ ಭಗವಂತನನ್ನು ಪರಬ್ರಹ್ಮ, ಆತ್ಮಾ, ಸತ್ಯ, ದೇವತೆ - ಇತ್ಯಾದಿಶಬ್ದಗಳಿಂದ ಋಷಿಗಳು ಕರೆದಿದ್ದಾರೆ. ಇತಿಹಾಸಪುರಾಣಗಳ ಕಾಲಕ್ಕೆ ವಿಷ್ಣು-ಪಾರಮ್ಯ, ಶಿವಪಾರಮ್ಯಗಳ ಭೇದವು ಉಂಟಾಯಿತು. ಆದರೆ ಪರಬ್ರಹ್ಮ

ತತ್ತ್ವವೇನೂ ಬದಲಾಗಿಲ್ಲ. ಭಕ್ತರು ತಮ್ಮ ಇಷ್ಟಾನುಸಾರವಾಗಿ ಭಗವಂತನನ್ನು ವರ್ಣಿಸಿರುತ್ತಾರೆ. ಆದ್ದರಿಂದ ಯಾವ ನಾಮರೂಪಗಳಿಂದ ಆರಾಧಿಸಿದರೂ ಮಾನವನು ಕೃತಾರ್ಥನಾಗುವದರಲ್ಲಿ ಸಂಶಯವಿಲ್ಲ.

ಪ್ರಕೃತ ಈ ಗ್ರಂಥವು ೧೯೮೬ರಲ್ಲಿ ಮೊದಲನೆಯ ಬಾರಿಗೆ ಪ್ರಕಟವಾಗಿದ್ದು ಈಗ ಎರಡನೆಯ ಬಾರಿಗೆ ಮತ್ತೆ ಹೊರಬಂದಿದೆ. ಆಸ್ತಿಕಮಹಾಶಯರು ಈ ಗ್ರಂಥವನ್ನು ಸ್ವೀಕರಿಸಿ ಪಠನಮಾಡಿ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ. ಅಧ್ಯಾತ್ಮ ಪ್ರಕಾಶಕಾರ್ಯಾಲಯದವರು ಈ ಗ್ರಂಥವನ್ನು ಎರಡನೆಯ ಬಾರಿಗೆ ಮುದ್ರಿಸಿ ಪ್ರಚಾರ ಮಾಡುತ್ತಿರುವ ಸ್ತುತ್ಯಕಾರ್ಯಕ್ಕೆ ನಾನು ಕೃತಜ್ಞನಾಗಿರುತ್ತೇನೆ.

ಇತಿ
**ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ**
ಗ್ರಂಥಕರ್ತ

ಹೊಳೆನರಸೀಪುರ,
ವಿಕ್ರಮ ಸಂವತ್ಸರ,
ಚೈತ್ರ ಶುಕ್ಲ ಪಾಡ್ಯ,
5-4-2000

|| ಓಂ ||

# ೧. ನಾರಾಯಣಸೂಕ್ತಭಾಷ್ಯ

''ಸಹಸ್ರಶೀರ್ಷಂ ದೇವಮ್'' ಎಂದು ಆರಂಭವಾಗುವ ಈ ಸೂಕ್ತವು ದ್ರಾವಿಡಪಾಠಾನುಸಾರವಾಗಿ ಕೇವಲ ಹನ್ನೆರಡು ಋಕ್ಕುಗಳುಳ್ಳದ್ದಾಗಿದೆ. ಇದು ತೈತ್ತಿರೀಯೋಪನಿಷತ್ತುಗಳಲ್ಲಿ ಮಹಾನಾರಾಯಣೋಪನಿಷತ್ತೆಂದು ಪ್ರಸಿದ್ಧವಾಗಿರುವ 'ಅಂಭಸಿ' ಎಂಬ ಪ್ರಶ್ನದಲ್ಲಿ ಬರುತ್ತದೆ. ವೇದಭಾಷ್ಯಕಾರರಾದ ಶ್ರೀಸಾಯಣಾಚಾರ್ಯರು ಈ ಉಪನಿಷತ್ತನ್ನು 'ಯಾಜ್ಞಿಕೀ' ಎಂದು ಕರೆದಿರುತ್ತಾರೆ. ಅವರ ಪ್ರಕಾರ ಶೀಕ್ಷಾವಲ್ಲಿಯು 'ಸಾಂಹಿತೀ' ಎಂದೂ ಆನಂದಭೃಗುವಲ್ಲಿಗಳು 'ವಾರುಣೀ' ಎಂದೂ ಈ ಭಾಗವು 'ಯಾಜ್ಞಿಕೀ' ಎಂದೂ ಹೆಸರಿಸಲ್ಪಟ್ಟಿರುತ್ತದೆ. ಮೊದಲನೆಯ ಶೀಕ್ಷಾವಲ್ಲಿಯಲ್ಲಿ ಜ್ಞಾನಕ್ಕೆ ಅವಶ್ಯವಾದ ಅಂತರಂಗಶುದ್ಧಿಗೆ ಸಾಧನವಾದ ಕರ್ಮಗಳನ್ನು ಹೆಚ್ಚಾಗಿ ಹೇಳಿರುವದರಿಂದ ಅದು ಸಾಂಹಿತೀ ಎಂದೂ, ಎರಡು- ಮೂರನೆಯ ಬ್ರಹ್ಮ- ಭೃಗುವಲ್ಲಿಗಳಲ್ಲಿ ಬ್ರಹ್ಮವಿದ್ಯೆಯನ್ನು ಉಪದೇಶಿಸಿದ್ದು, ಇದಕ್ಕೆ ವರುಣನೇ ಆಚಾರ್ಯನಾದ್ದರಿಂದ ವಾರುಣೀ - ಎಂದೂ ಹೆಸರು ಬಂದಿದೆಯಾಗಿ ಕಾರಣವನ್ನೂ ತಿಳಿಸಿರುತ್ತಾರೆ. ನಾಲ್ಕನೆಯ 'ಅಂಭಸಿ'ಯಲ್ಲಿ ಕರ್ಮೋಪಾಸನಾಜ್ಞಾನವಿಚಾರಗಳೆಲ್ಲವೂ ಸಂಕೀರ್ಣವಾಗಿ ಬಂದಿದ್ದು ಪ್ರಧಾನವಾಗಿ ಕರ್ಮಗಳ ವಿಚಾರವೇ ಹೆಚ್ಚಾಗಿರುವದರಿಂದ 'ಯಾಜ್ಞಿಕೀ' ಎಂಬ ಹೆಸರು ಇದಕ್ಕೆ ಪ್ರಸಿದ್ಧವಾಗಿದೆ-ಎಂದು ಅಭಿಪ್ರಾಯಪಡುತ್ತಾರೆ. ಹೇಗೆಂದರೆ : 'ಅಂಭಸ್ಯಪಾರೇ' 'ಸಹಸ್ರಶೀರ್ಷಂ ದೇವಮ್' - ಮುಂತಾದ ಮಂತ್ರಗಳು ಬ್ರಹ್ಮಸ್ವರೂಪವನ್ನು ತಿಳಿಸಿಕೊಡುತ್ತವೆ. 'ಆದಿತ್ಯೋ ವಾ ಏಷಃ' ಮುಂತಾದ ಅನುವಾಕಗಳು ಉಪಾಸನೆಯನ್ನು ತಿಳಿಸುತ್ತವೆ. 'ಭೂರನ್ನ ಮಗ್ನಯೇ........ ಸ್ವಾಹಾ' ಮುಂತಾದ ಮಂತ್ರಗಳು ಕರ್ಮಪ್ರತಿಪಾದಕವಾಗಿವೆ. ಹೀಗೆ ಎಲ್ಲಾ ವಿಷಯಗಳೂ ಇಲ್ಲಿ ಇದ್ದುಕೊಂಡಿದ್ದು ಒಂದು ರೀತಿಯಲ್ಲಿ-ಶುಕ್ಲಯಜುರ್ವೇದೀಯ ಬೃಹದಾರಣ್ಯಕೋಪನಿಷತ್ತಿಗೆ ಅದರ ಕೊನೆಯ ಎರಡು ಅಧ್ಯಾಯಗಳು 'ಖಿಲಕಾಂಡ'ವೆನಿಸಿರುವಂತೆ- ತೈತ್ತಿರೀಯೋಪನಿಷತ್ತಿಗೆ ಈ ಪ್ರಶ್ನವು 'ಖಿಲಕಾಂಡ'ದ ಸ್ಥಾನದಲ್ಲಿದೆ- ಎಂದೂ ಸಾಯಣಾಚಾರ್ಯರು ತಿಳಿಸಿದ್ದಾರೆ. ಶ್ರೀಶಂಕರಭಗವತ್ಪಾದರು ಈ ಮಂತ್ರ

ಭಾಗದಿಂದ ಕೆಲವು ಆಯ್ದ ಪ್ರಮಾಣವಚನಗಳನ್ನು ತಮ್ಮ ಭಾಷ್ಯಗ್ರಂಥಗಳಲ್ಲಿ ಉದಾಹರಿಸಿರುತ್ತಾರಾದರೂ ಅದೇಕೊ, ಈ ಉಪನಿಷತ್ತಿಗೆ ಭಾಷ್ಯವನ್ನು ರಚಿಸಿರುವ ದಿಲ್ಲ. ಆದ್ದರಿಂದ ಸಾಯಣಭಾಷ್ಯವನ್ನು ಆಧಾರವಾಗಿಟ್ಟುಕೊಂಡೇ ಮಂತ್ರಾರ್ಥ ಗಳನ್ನು ತಿಳಿಯಬೇಕಾಗಿದೆ.

ಈ ಭಾಗವು ಕರ್ಮಪ್ರಧಾನವಾಗಿದ್ದರೂ ಉಪನಿಷತ್ತು-ಎಂದೇಕೆ ಕರೆಯಲ್ಪಡುತ್ತದೆ ?- ಎಂದರೆ ಬ್ರಹ್ಮವಿದ್ಯೆಯನ್ನೂ ಅದಕ್ಕೆ ಅಗತ್ಯವಾಗಿರುವ ಸತ್ಯ, ಧರ್ಮ, ಸಂನ್ಯಾಸಾದಿ-ಸಾಧನಗಳನ್ನೂ ಇಲ್ಲಿ ವಿವರವಾಗಿ ತಿಳಿಸಲಾಗಿದೆ. ಆದ್ದರಿಂದ ಉಪನಿಷತ್ತು ಎಂಬ ಹೆಸರೇನೋ ಇದಕ್ಕೆ ಒಪ್ಪಾಗಿದೆ. ಶಾಖಾಭೇದಗಳಿಂದ ಇದರಲ್ಲಿ ಅನೇಕ ಪಾಠಕ್ರಮಗಳು ಬಳಕೆಯಲ್ಲಿದ್ದು ಎಲ್ಲಾ ಪಾಠಗಳೂ ಆದೃತವೇ ಆಗಿರುತ್ತವೆ. ಗಾತ್ರದೃಷ್ಟಿಯಿಂದ ನೋಡಿದಾಗ ೬೪ ಅನುವಾಕಗಳುಳ್ಳ ದ್ರಾವಿಡ ಪಾಠವೇ ಚಿಕ್ಕದು. ಆಂಧ್ರಪಾಠದಂತೆ ೮೦ ಅನುವಾಕಗಳು. ಕರ್ನಾಟಕ ಪಾಠದಂತೆ ಕೆಲವರಿಗೆ ೭೪ ಅನುವಾಕಗಳು ಮಾತ್ರ. ಇನ್ನೊಂದು ಪಾಠದಂತೆ ೮೯ ಅನುವಾಕ ಗಳು. ಹೀಗಿರುವದರಿಂದ ಈ ಉಪನಿಷತ್ತಿನ ಗಾತ್ರನಿರ್ಣಯವು ಅವರವರ ಸಂಪ್ರದಾಯದಂತೆ ಮಾತ್ರ ನಿಶ್ಚಿತವಾಗಿರುತ್ತದೆ. ಆದರೆ ಎಲ್ಲಾ ಪಾಠಗಳಲ್ಲಿಯೂ ನಾರಾಯಣಸೂಕ್ತವು ಮಾತ್ರ ಸೇರಿಯೇ ಇರುತ್ತದೆ. ಸಾಯಣಾಚಾರ್ಯರು ೬೪ ಅನುವಾಕಗಳ ದ್ರಾವಿಡಪಾಠಾನುಸಾರವಾಗಿಯೇ ಭಾಷ್ಯವನ್ನು ರಚಿಸಿರುತ್ತಾರೆ.

ಉಪನಿಷತ್ತುಗಳ ಅಭಿಪ್ರಾಯದಂತೆ ಮಹೇಶ್ವರ, ನಾರಾಯಣ, ಬ್ರಹ್ಮ-ಮುಂತಾದ ಹೆಸರುಗಳಿಗೆಲ್ಲ ವಾಚ್ಯವಾಗಿರುವದು ಒಂದೇ ವಸ್ತು. ಈ ನಾಮಗಳಿಗೆ ಗುಣಸಂಬಂಧದಿಂದ ಹೊಂದಬಹುದಾದ ಅರ್ಥವೇ ಪ್ರಧಾನವೇ ಹೊರತು ರೂಢ್ಯರ್ಥವು ಪ್ರಕೃತವಾಗಿರುವದಿಲ್ಲ. ಆದ್ದರಿಂದ ಪುರಾಣಗಳ ಕಾಲಕ್ಕೆ ಶಿವ, ನಾರಾಯಣ- ಮುಂತಾದ ನಾಮಗಳಿಗೆ ಆಯಾ ದೇವತಾಪರವಾದ ರೂಢ್ಯರ್ಥ ವನ್ನು ಗ್ರಹಿಸಿ ಶಿವನಿಗಿಂತ ನಾರಾಯಣನೊ, ನಾರಾಯಣನಿಗಿಂತ ಶಿವನೊ, ಹೆಚ್ಚು-ಎಂಬ ವಾದಗಳುಂಟಾಗಿರುವಂತೆ ಉಪನಿಷತ್ತುಗಳಲ್ಲಿ ಇರುವದಿಲ್ಲ. ಯಾವದೇ ಉಪನಿಷತ್ತನ್ನು ಅಧ್ಯಯನಮಾಡಿದರೂ ಈ ಸಮನ್ವಯವು ಕಂಡುಬಂದೇ ಬರುತ್ತದೆ. ಆದರೂ ಮತಪಕ್ಷಪಾತಿಗಳು ತಮಗೆ ಬೇಕಾದ ನಾಮಕ್ಕೆ ಪ್ರಾಧಾನ್ಯ ವನ್ನು ಕೊಟ್ಟು ಅಂಥ ಉಪನಿಷದ್ವಾಕ್ಯಗಳನ್ನೇ ಆರಿಸಿಕೊಂಡು ತಮ್ಮ ತಮ್ಮ ದೇವತಾಪಾರಮ್ಯವು ಉಪನಿಷತ್ ಪ್ರತಿಪಾದ್ಯವೆಂದು ಹಟವನ್ನು ಮಾಡುತ್ತಾರೆ.

ಆದರೆ ಬ್ರಹ್ಮವಿದ್ಯೆಯ ಅಧ್ಯಯನದೃಷ್ಟಿಯಿಂದ ಈ ಪಕ್ಷಪಾತವು ತ್ಯಾಜ್ಯವಾಗಿರುತ್ತದೆ. ಪ್ರಕೃತವಾದ ಈ ನಾರಾಯಣೋಪನಿಷತ್ತಿಗೆ ಹಿಂದೆಯೇ ಇರುವ ಅನುವಾಕದ ಕಡೆಯ ಮಂತ್ರದಲ್ಲಿ ತತ್ತ್ವವನ್ನು ''ಮಹೇಶ್ವರ''ನೆಂದೇ ಹೆಸರಿಸಿದೆ. ಮುಂದಿನ ಅನುವಾಕದಲ್ಲಿ ಅದೇ ತತ್ತ್ವವನ್ನು ''ನಾರಾಯಣ''ನೆಂದೇ ಹೆಸರಿಸಿದೆ. ಆದ್ದರಿಂದ ಶ್ರುತಿಮಾತೆಯ ದೃಷ್ಟಿಯಿಂದ ನಾರಾಯಣ-ಮಹೇಶ್ವರರು ಬೇರೆಬೇರೆಯಲ್ಲ. ನಾರಾಯಣೋಪನಿಷತ್ತಿಗೆ ಭಾಷ್ಯವನ್ನು ಬರೆಯಲಾರಂಭಿಸಿರುವ ಸಾಯಣ ಆಚಾರ್ಯರು ಹೀಗೆಂದಿರುತ್ತಾರೆ :- 'ಹಿಂದಿನ ಅನುವಾಕದ ಕಡೆಯಲ್ಲಿ ಗೊತ್ತುಪಡಿಸಿ ತಿಳಿಸಿರುವ, ಹೃದಯಪುಂಡರೀಕದಲ್ಲಿ ಉಪಾಸ್ಯವಾಗಿರುವ ಮಹೇಶ್ವರರೂಪವುಂಟಲ್ಲ, ಅದರ ಉಪಾಸ್ಯಗುಣವಿಶೇಷಗಳನ್ನು ಈ ಅನುವಾಕ ದಲ್ಲಿ ವಿಸ್ತರಿಸಿ ತಿಳಿಸಲಾಗುವದು.' ಈ ವಾಕ್ಯವನ್ನು ನೋಡಿದಾಗ ಹಿಂದಿನ ಅನುವಾಕದ ಕಡೆಯ ಮಂತ್ರವನ್ನು ಒಮ್ಮೆ ಅನುಸಂಧಾನಮಾಡಿಕೊಂಡೇ ನಾರಾಯಣಸೂಕ್ತವನ್ನು ವ್ಯಾಖ್ಯಾನಮಾಡುವದು ಉಚಿತವೆಂದು ಸಿದ್ಧವಾಗುತ್ತದೆ. ಆ ಮಂತ್ರವು ಹೀಗಿದೆ :

**ಯೋ ವೇದಾದೌ ಸ್ವರಃ ಪ್ರೋಕ್ತೋ ವೇದಾಂತೇ ಚ ಪ್ರತಿಷ್ಠಿತಃ ।**
**ತಸ್ಯ ಪ್ರಕೃತಿಲೀನಸ್ಯ ಯಃ ಪರಃ ಸ ಮಹೇಶ್ವರಃ ॥**

''ವೇದದ ಆದಿಯಲ್ಲಿಯೂ ಅಂತದಲ್ಲಿಯೂ ಯಾವ ವರ್ಣವು ಪ್ರತಿಷ್ಠಿತವಾಗಿದೆಯೋ ಅದು ಪ್ರಕೃತಿಯಲ್ಲಿ ಲೀನವಾದಾಗ ಅದಕ್ಕಿಂತ ವಿಲಕ್ಷಣನಾಗಿ ಯಾವನು ಉಳಿದುಕೊಳ್ಳುವನಾಗಿ ಕಂಡುಬರುವನೋ ಅವನು ಮಹೇಶ್ವರನು'' ಎಂಬಿದು ಈ ಮಂತ್ರದ ಸಾಮಾನ್ಯವಾದ ಅರ್ಥವು. ಇದರ ವಿವರವು ಹೀಗಿದೆ. ವೇದಾರಂಭಮಾಡುವಾಗಲೂ ಪೂರೈಸುವಾಗಲೂ ಸಾಂಪ್ರದಾಯಿಕರು 'ಓಂ' ಎಂದು ಉಚ್ಚರಿಸುವರು. ಇದೇ ವೇದಗಳ ಸಾರವೆಂದು ತಾತ್ಪರ್ಯ. ಈ ಪ್ರಣವವು ಛಂದಸ್ಸುಗಳಿಗೆಲ್ಲ ಋಷಭದಂತೆ ಪ್ರಧಾನವಾಗಿದೆ. ಇದರ ಮಾತ್ರೆಗಳಾದ ಅ-ಉ-ಮ-ಕಾರಗಳು ಕ್ರಮವಾಗಿ ಒಂದರಲ್ಲೊಂದು ಲಯವಾಗುವವು. ಹೇಗೆಂದರೆ ಅಕಾರವು ಉಕಾರದಲ್ಲಿ ಉಕಾರವು ಮಕಾರದಲ್ಲಿ ಒಂದಾಗುವದು. ಇದೇ ಪ್ರಕೃತಿಲೀನತ್ವವು. ಅನಂತರ ಮಕಾರವು ತಾನೂ ಲಯವಾದಾಗ ನಿರ್ವಿಶೇಷ ವಾದ ಬ್ರಹ್ಮವೊಂದೇ ಉಳಿಯುವದು. ಏಕೆಂದರೆ ಪ್ರಕೃತಿಯ ಸ್ಥಾನದಲ್ಲಿರುವ ಮಕಾರವು ಲಯವಾದದ್ದನ್ನೂ ಹುಟ್ಟಿಬಂದದ್ದನ್ನೂ ನೋಡುವ ಸಾಕ್ಷಿಯು

ಮಾತ್ರಾರಹಿತವೂ ಅವ್ಯವಹಾರ್ಯವೂ ಆಗಿರುವದು. ಅದಿಲ್ಲದೆ ಪ್ರಕೃತಿಯ ಆವಿರ್ಭಾವ- ತಿರೋಭಾವಗಳನ್ನು ತಿಳಿಯಲಾಗುವದಿಲ್ಲ. ಆದ್ದರಿಂದ ಅದು ಪ್ರಕೃತಿವಿಲಕ್ಷಣವು. ಅದನ್ನೇ ಮಹೇಶ್ವರನೆನ್ನುವರು. ಈ ತತ್ತ್ವವೇ ಹೃದಯ ಪುಂಡರೀಕದಲ್ಲಿ ಉಪಾಸ್ಯವಾಗಿಯೂ ನಿರ್ದೇಶಿಸಲ್ಪಟ್ಟಿದೆ. ಇದನ್ನು ದಹರೋಪಾಸನೆ- ಎಂದು ಕರೆಯುವರು. ಆದರೆ ಇದು ಸಾಮಾನ್ಯಸಾಧಕರಿಗೆ ದಕ್ಕತಕ್ಕದ್ದಲ್ಲ. ವೇದಾಂತವಿಜ್ಞಾನಸುನಿಶ್ಚಿತಾರ್ಥರೂ ಸಂನ್ಯಾಸಯೋಗಗಳಿಂದ ಶುದ್ಧಸತ್ವರೂ ಆಗಿರುವ ನಿವೃತ್ತಿಧರ್ಮನಿಷ್ಠರಿಗೆ ಮಾತ್ರ ಈ ಹಾರ್ದಬ್ರಹ್ಮದ ಉಪಾಸನೆಯು ಸಾಧ್ಯವಾಗಬಹುದಾಗಿದೆ. ಸಾಮಾನ್ಯರು ಕೇವಲ ಕುತೂಹಲನಿವೃತ್ತಿಗಾಗಿ ವಿಷಯವನ್ನು ತಿಳಿದುಕೊಂಡಿರಬಹುದು. ಹೇಗೆ ಕೋಹಿನೂರ್ ಎಂಬ ವಜ್ರವನ್ನು ನಾವು ಪಡೆಯುವದಕ್ಕಾಗಲಿ, ನೋಡುವದಕ್ಕಾಗಲಿ, ಸಾಧ್ಯವಾಗದ್ದೋ ಆದರೆ ಅದರ ವಿಷಯವಾದ ಲೇಖನಗಳನ್ನು ಪತ್ರಿಕೆಗಳಲ್ಲಿ ಓದಿರಬಹುದೋ ಹಾಗೆಯೇ ಹಾರ್ದಬ್ರಹ್ಮೋಪಾಸನೆಯ ವಿಷಯವನ್ನೂ ಕೇಳಿ ಮನನಮಾಡಿಕೊಳ್ಳಬಹುದಾಗಿದೆ. ಇಷ್ಟೊಂದು ಮಹಿಮಾನ್ವಿತವಾಗಿರುವ ಮಹೇಶ್ವರತತ್ತ್ವವು ಈ ನಾರಾಯಣ ಸೂಕ್ತದಲ್ಲಿ ವ್ಯಾಖ್ಯಾನಮಾಡಲ್ಪಡುತ್ತದೆ. ವೈದಿಕರಂತೂ ತಪ್ಪದೆ ಈಗಲೂ ದೇವರಿಗೆ ಮಂಗಳಾರತಿಯಾದ ಅನಂತರ ಮಂತ್ರಪುಷ್ಪವೆಂಬ ಉಪಚಾರದಲ್ಲಿ ನಾರಾಯಣ ಸೂಕ್ತವನ್ನೂ ಮೇಲ್ಕಂಡ ಮಂತ್ರವನ್ನೂ ಪಠಿಸಿಯೇ ತೀರುತ್ತಾರೆ. ವೇದಗಳನ್ನೆಲ್ಲ ಅಭ್ಯಾಸಮಾಡಲಾಗದಿದ್ದರೂ ಭಾರತಸಂಸ್ಕೃತಿಯನ್ನು ಪ್ರೀತಿಸುವ ಪ್ರತಿಯೊಬ್ಬ ವ್ಯಕ್ತಿಯೂ ನಾರಾಯಣಸೂಕ್ತವನ್ನಾದರೂ ಅಧ್ಯಯನಮಾಡಬೇಕು. ಏಕೆಂದರೆ ಇದು ವೇದಾಂತದ ರಹಸ್ಯಗಳನ್ನೆಲ್ಲ ಒಳಗೊಂಡಿರುವ ರತ್ನಗನಿಯಾಗಿರುತ್ತದೆ.

ಈಗ ನಾರಾಯಣಸೂಕ್ತದ ಮೊದಲನೆಯ ಮಂತ್ರವನ್ನು ನೋಡೋಣ :-

**ಓಂ ಸಹಸ್ರಶೀರ್ಷಂ ದೇವಂ ವಿಶ್ವಾಕ್ಷಂ ವಿಶ್ವಶಂಭುವಮ್ ।**
**ವಿಶ್ವಂ ನಾರಾಯಣಂ ದೇವಮಕ್ಷರಂ ಪರಮಂ ಪದಮ್ ॥೧॥**

''ಸಹಸ್ರಶಿರಸ್ಸುಗಳುಳ್ಳವನೂ ಎಲ್ಲೆಲ್ಲೂ ಕಣ್ಣುಳ್ಳವನೂ ಎಲ್ಲರಿಗೂ ಸುಖವನ್ನುಂಟುಮಾಡುವವನೂ ಎಲ್ಲವೂ ತಾನೇ ಆಗಿರುವವನೂ, ಪ್ರಕಾಶಸ್ವರೂಪನೂ ನಾಶರಹಿತನೂ ಪರಮಸ್ಥಾನವೂ ಆಗಿರುವ ದೇವನಾದ ನಾರಾಯಣನನ್ನು (ಧ್ಯಾನಿಸಬೇಕು)''.

ಈ ಮಂತ್ರದಲ್ಲಿರುವ ಒಂದೊಂದು ವಿಶೇಷಣವನ್ನೂ ಅನುಸಂಧಾನ ಮಾಡುವದರಿಂದ ಲಾಭವಿದೆ. ಮೊದಲನೆಯದಾಗಿ ಈ ದೇವನು ಸಹಸ್ರ ಶೀರ್ಷನು- ಎಂದರೆ ಅಪರಿಮಿತವಾದ ತಲೆಗಳುಳ್ಳವನು. ಪುರುಷಸೂಕ್ತ ದಲ್ಲಿಯೂ ಇದೇ ನಾಮದಿಂದ ಪ್ರಪ್ರಥಮವಾಗಿ ಭಗವಂತನನ್ನು ಸ್ತೋತ್ರಮಾಡಲಾಗಿದೆ. ಈ ಸೃಷ್ಟಿಯಲ್ಲಿರುವ ಬ್ರಹ್ಮನಿಂದ ಹಿಡಿದು ಒಂದು ಹುಳುವಿನವರೆಗಿನ ಎಲ್ಲಾ ಜೀವರುಗಳ ತಲೆಗಳೂ ಈ ಪುರುಷನ ತಲೆಗಳೇ ಆಗಿದ್ದು ಭಗವಂತನು ಸಹಸ್ರಶೀರ್ಷನಾಗಿರುವನು. ಗೀತೆಯಲ್ಲಿರುವ ''ಸರ್ವತೋಕ್ಷಿ ಶಿರೋಮುಖಮ್'' ಎಂಬ ಮಾತನ್ನು ನೆನೆಸಿಕೊಳ್ಳಿರಿ. ಮತ್ತು ಅರ್ಜುನನು ಕಂಡ ವಿಶ್ವರೂಪದಲ್ಲಿಯೂ ಹೀಗೆಯೇ ಸಹಸ್ರಾರುಶಿರಸ್ಸುಗಳಿದ್ದವು. ನಾವು ಕೂಡ ಭಾರಿಯ ಜನರ ಗುಂಪನ್ನಾಗಲೀ ಶಿಸ್ತಿನಿಂದ ಕವಾಯತ್ತು ಮಾಡುವ ಸ್ವಯಂಸೇವಕರು, ವಿದ್ಯಾರ್ಥಿಗಳು, ಮಿಲಿಟರಿಯವರನ್ನಾಗಲೀ ಕಂಡಾಗ ಒಮ್ಮೆ 'ಸಹಸ್ರಶೀರ್ಷಂ ದೇವಮ್' ಎಂದು ಅನುಸಂಧಾನಮಾಡಿಕೊಳ್ಳಬಹುದು. 'ಈಗಿನ ಕಾಲಕ್ಕಂತೂ ರೈಲು, ಬಸ್ಸುಗಳ ನಿಲ್ದಾಣಗಳು, ಮಾರ್ಕೆಟ್‌ಗಳು, ಸರ್ಕಲ್‌ಗಳು, ಸಿನೆಮ ಮಂದಿರಗಳು, ಶಾಲಾಕಾಲೇಜುಗಳು ಮುಂತಾದ ಸ್ಥಳಗಳಲ್ಲಿ ನಿರ್ದಿಷ್ಟಸಮಯ ದಲ್ಲಿ ಪ್ರತಿದಿನವೂ ಸಹಸ್ರಶೀರ್ಷನಾರಾಯಣನ ದರ್ಶನವನ್ನು ತಪ್ಪದೆ ಮಾಡ ಬಹುದಾಗಿದೆ. ಉಪಾಧಿಗಳು ಏನೇ ಇರಲಿ, ಉಪಹಿತವಾದ ಚೈತನ್ಯವು ಮಾತ್ರ ತಾನೊಂದೇ ಆಗಿ ಅಖಂಡವಾಗಿ ಎಲ್ಲಾ ಶರೀರಗಳನ್ನೂ ವ್ಯಾಪಿಸಿಕೊಂಡಿರುವದನ್ನು ಇಂಥ ದೃಶ್ಯಗಳನ್ನು ನೋಡಿದಾಗ ಮನಸ್ಸಿಗೆ ತಂದುಕೊಳ್ಳಬೇಕು. ತಲೆಗಳನ್ನು ಕಂಡಂತೆಯೇ ಕಣ್ಣುಗಳ ಸಹಸ್ರತೆಯನ್ನೂ ಜ್ಞಾಪಿಸಿಕೊಳ್ಳಬೇಕು. ಭಗವಂತನು ವಿಶ್ವಾಕ್ಷನೆಂಬುದು ಇದರಿಂದ ಸಿದ್ಧವಾಗುವದು.

ಈಗ ವಿಶ್ವಶಂಭುವ-ನೆಂಬ ವಿಶೇಷಣವನ್ನು ವಿಚಾರಿಸೋಣ. ಶಂ ಎಂದರೆ ಸುಖವನ್ನು ಜಗತ್ತಿಗೆ ದಯಪಾಲಿಸುವವನೇ ಶಂಭುವು. ಭಗವಂತನು ವಿಶ್ವಶಂಭುವಾಗಿರುತ್ತಾನೆ. ಆಮುಷ್ಮಿಕಸುಖವನ್ನು ವೇದದಲ್ಲಿ 'ಮಯ' ಎಂಬ ಶಬ್ದದಿಂದಲೂ ಹೇಳುವದರಿಂದ ಶಂ-ಎಂಬಿದಕ್ಕೆ ಐಹಿಕಸುಖಗಳೆಂದು ವಿಶೇಷಾರ್ಥವನ್ನು ಇಲ್ಲಿ ಮಾಡಬಹುದಾಗಿದೆ. ಆದ್ದರಿಂದ ಯಾರುಯಾರು ಈ ಪ್ರಪಂಚದಲ್ಲಿ ನಮ್ಮ ಕಣ್ಣಿಗೆ ಕಾಣುವಂತೆ ಧನ-ಕನಕ-ಗೃಹ-ಪತ್ನಿಪುತ್ರ- -ಬಂಧು-ಮಿತ್ರವರ್ಗವೇ ಮುಂತಾದ ಸುಖಗಳನ್ನು ಹೊಂದಿರುತ್ತಾರೋ

ಅವರೆಲ್ಲರಿಗೂ ಎಲ್ಲವನ್ನೂ ದಯಪಾಲಿಸಿರುವವನು ನಾರಾಯಣನೇ. ಇದಕ್ಕೆ ಗುರುತೇನೆಂದರೆ : ಯಾವ ಸುಖಿಗಳನ್ನು ನೀವು ಕೇಳಿದರೂ 'ಇವೆಲ್ಲವೂ ನಮಗೆ ಭಗವಂತನೇ ಕೊಟ್ಟದ್ದು' ಎಂದೇ ಹೇಳುತ್ತಾರೆ. ಹಾಗೆ ಹೇಳದೆ ಇರುವವರೂ ಇರಬಹುದಾದರೂ ಒಮ್ಮೆಯಾದರೂ ಅಂಥವರಿಗೂ ಈ ಭಾವನೆಯು ಬಂದೇ ಬರುತ್ತದೆ. ಅಂತೂ ಹೀಗೆ ವಿಶ್ವಶಂಭುವಾಗಿ ನಾರಾಯಣನು ವಿರಾಜಮಾನನಾಗಿರುವನು.

ಈಗ ವಿಶ್ವನೂ ಆಗಿರುವ ನಾರಾಯಣನನ್ನು ಅನುಸಂಧಾನಮಾಡೋಣ. ಮಣ್ಣೊಂದೇ ಮಡಕೆ-ಕುಡಿಕೆಗಳಾಗಿರುವಂತೆ ಪ್ರಪಂಚಕ್ಕೆ ಉಪಾದಾನಕಾರಣನಾಗಿರುವ ಭಗವಂತನು ತಾನೇ ಎಲ್ಲವೂ ಆಗಿರುತ್ತಾನೆಂಬುದು ನಿತ್ಯಸತ್ಯವಾದ ತತ್ತ್ವವಾಗಿದೆ. ಹೀಗೆ ಕಾರ್ಯರೂಪವಾಗಿ ಆತನು ತೋರಿಕೊಂಡಮೇಲೂ ಅಕ್ಷರನಾಗಿಯೇ-ಎಂದರೆ ನಾಶರಹಿತನಾಗಿಯೇ ಉಳಿದುಕೊಂಡಿರುತ್ತಾನೆ. ಮತ್ತು ಎಲ್ಲರಿಗೂ ಪರಮವಾಗಿ ಪಡೆಯಬೇಕಾಗಿರುವ ಸ್ಥಾನನೂ ಆಗಿರುತ್ತಾನೆ. ಜ್ಞಾನಿಗಳು ಪಡೆಯುವ ಈ ಭಗವಂತನ ಸ್ಥಾನವನ್ನು ವಿಷ್ಣುವಿನ ಪರಮಪದವೆಂದೇ ಕರೆಯುತ್ತಾರೆ. ವಿಷ್ಣುವೇ ಪರಮಪದವೆಂದು ಅಭೇದದಿಂದಲೇ ಇಲ್ಲಿ ಅರ್ಥವನ್ನು ಸ್ವೀಕರಿಸಬೇಕು. ಏಕೆಂದರೆ ಬ್ರಹ್ಮವನ್ನರಿತವನು ಬ್ರಹ್ಮವೇ ಆಗುತ್ತಾನೆಂದು ಬೇರೊಂದು ಶ್ರುತಿಯಲ್ಲಿದೆ. ಹೀಗೆ ಪರಮಪದವೆಂಬ ಹೆಸರಿನಿಂದಲೂ ಪ್ರಸಿದ್ಧನಾಗಿರುವ ಭಗವಂತನು ನಾರಾಯಣನೂ ಆಗಿರುತ್ತಾನೆ. ನಾರಾಯಣ ಎಂಬಿದಕ್ಕೆ ಎರಡು ಅರ್ಥಗಳನ್ನು ಭಾಷ್ಯಕಾರರು ಸೂಚಿಸಿದ್ದಾರೆ. (೧) ನಾರಾಃ ಎಂದರೆ ನೀರು. ಇದೇ ಜೀವರುಗಳ ಉತ್ಪತ್ತಿಗೆ ಮೂಲವು. ಇದು ನರನಿಂದ (ವಿರಾಟ್‌ಪುರುಷನಿಂದ) ಹುಟ್ಟಿರುವದು. ನೀರು ಎಂಬುದನ್ನು ಉಪಲಕ್ಷಣವಾಗಿಟ್ಟುಕೊಂಡು ಪಂಚಮಹಾಭೂತಗಳನ್ನೂ ತೆಗೆದುಕೊಳ್ಳಬೇಕು. ಅವುಗಳೆಲ್ಲಕ್ಕೂ ಅಯನ- ಎಂದರೆ ಆಶ್ರಯನೂ ಸ್ಥಾನನೂ ಆಗಿರುವವನೇ ನಾರಾಯಣನು. ಪುರುಷನಿಗೂ ಆಶ್ರಯನಾದ ಪರಮಪುರುಷನು ಎಂದರ್ಥ. (೨) ಪ್ರಕೃತಿಯ ಯಜಮಾನನು ನರನೆನಿಸುವನು. ಅವನಿಂದುಂಟಾದ ಜಗತ್ತೆಲ್ಲವೂ 'ನಾರ'ವೆನಿಸುವದು. ಅದಕ್ಕೆಲ್ಲ ಆಧಾರಭೂತನಾದವನೇ ನಾರಾಯಣನು. ಅವನೇ ಇಂದ್ರ-ಮಿತ್ರ- ವರುಣಾದಿದೇವತೆಗಳ ರೂಪದಿಂದಲೂ ಇದ್ದುಕೊಂಡಿರುವನು. ಹೀಗೆ ನಾರಾಯಣಶಬ್ದವಾಚ್ಯನಾಗಿರುವ ಭಗವಂತನು ಜನರಿಗೆ ನಾರ ಎಂದರೆ ಜ್ಞಾನವನ್ನು ದಯಪಾಲಿಸುವ ಆದಿಗುರುವೂ ಆಗಿರುವದರಿಂದ ಜ್ಞಾನಾಶ್ರಯ

ನೆಂದೂ ಆಗಬಹುದಾಗಿದೆ. ಇಂಥ ನಾರಾಯಣನನ್ನು ಹೃದಯಪುಂಡರೀಕದಲ್ಲಿ ಉಪಾಸನೆಮಾಡಬೇಕು- ಎಂದಭಿಪ್ರಾಯ.

**ವಿಶ್ವತಃ ಪರಮಾಂ ನಿತ್ಯಂ ವಿಶ್ವಂ ನಾರಾಯಣಂ ಹರಿಮ್ ।**
**ವಿಶ್ವಮೇವೇದಂ ಪುರುಷಸ್ತದ್ವಿಶ್ವಮುಪಜೀವತಿ ॥ ೨ ॥**

'ಜಗತ್ತಿಗಿಂತ ಉತ್ಕೃಷ್ಟನೂ ನಿತ್ಯನೂ ವಿಶ್ವನೂ ನಾರಾಯಣನೂ ಹರಿಯೂ ಆಗಿರುವ, ಪುರುಷನೇ ಈ ವಿಶ್ವವೆಲ್ಲವೂ ಆಗಿರುವನು. ಅವನು ವಿಶ್ವವನ್ನು ಉಪಜೀವಿಸಿಕೊಂಡಿರುವನು.'

ಈ ಮಂತ್ರದಲ್ಲಿ ನಾರಾಯಣನ ಸ್ವರೂಪವನ್ನು ಎರಡುಬಗೆಯಾಗಿ ವರ್ಣಿಸಿದೆ. ಒಂದನೆಯದು ವಿಶ್ವರೂಪವು. ಎರಡನೆಯದು ಸ್ವಸ್ವರೂಪವು. ಆದರೆ ಸ್ವಸ್ವರೂಪವೇ ಪರಮಾರ್ಥವಾದುದು. ಜಗದ್ರೂಪವು ಕೇವಲ ಮಹಿಮೆಯಾಗಿರುವದು. ಆದ್ದರಿಂದಲೇ ಜಗತ್ತಿಗಿಂತ ಉತ್ಕೃಷ್ಟನೆಂದೂ ನಿತ್ಯನೆಂದೂ ಸ್ತುತಿಸಲಾಗಿದೆ. ಕಾರ್ಯಕಾರಣರೂಪವಾಗಿರುವ ಈ ಜಗತ್ತೆಲ್ಲವೂ ದೇಶಕಾಲಕ್ರಿಯಾಫಲಾಶ್ರಯವಾಗಿಯೂ ನಾಮರೂಪಗಳಿಂದ ಬಿಡಿಬಿಡಿಯಾಗಿಯೂ ಅನೇಕಕರ್ತೃಭೋಕ್ತೃಗಳಿಂದ ತುಂಬಿರುವದಾಗಿಯೂ ಆಯಾ ದೇಶಕಾಲಗಳಲ್ಲಿ ಮಾಡಿದ್ದಕ್ಕೆ ತಕ್ಕಂತೆ ಫಲವನ್ನುಂಟುಮಾಡುವದಾಗಿಯೂ ಆಗಿರುತ್ತದೆ-ಎಂದು ಶ್ರೀಶಂಕರಾಚಾರ್ಯರು ತಿಳಿಸಿದ್ದಾರೆ. ಇಂಥ ಜಗತ್ತಿನ ಸೃಷ್ಟಿಕಾರ್ಯವು ಮಾತ್ರ ಎಂಥ ಜಾಣನಿಗೂ ಬಿಡಿಸಲಾಗದ ಒಗಟಾಗಿದೆ. ಇದೆಲ್ಲವನ್ನೂ ಇಷ್ಟೊಂದು ಅದ್ಭುತವಾಗಿ ಹೆಣೆದಿಟ್ಟಿರುವ ಶಿಲ್ಪಿ ಯಾರು ?- ಎಂದು ವಿಚಾರಕರಿಗೆ ಚಿಂತನೆಗೆ ಅವಕಾಶವಾಗಿದೆ. ಎಷ್ಟೋ ಜನರು ದಾರ್ಶನಿಕರೆನಿಸಿಕೊಂಡವರು ಕೂಡ ಈ ವಿಶ್ವದ ರಚನಾಕೌಶಲ್ಯವನ್ನೂ ಇದರ ಕರ್ತೃವೂ ಸರ್ವಜ್ಞನೂ ಸರ್ವಶಕ್ತನೂ ಆದ ನಾರಾಯಣನನ್ನೂ ಅರಿಯಲಾರದೆ ತಮ್ಮ ತಮ್ಮ ಮೂಗಿನ ನೇರಕ್ಕೆ ತಕ್ಕ ತೀರ್ಮಾನಗಳನ್ನು ಕೈಗೊಂಡು ಮೋಸಹೋಗಿರುತ್ತಾರೆ. ಈಗಿನ ಕಾಲದ ವಿಜ್ಞಾನಿಗಳು ಸಂಶೋಧಕರು ಕೂಡ ಈ ವಿಷಯಕ್ಕೆ ಹೊರತಲ್ಲ. ಆದ್ದರಿಂದ ಶ್ರುತಿಯು ತಿಳಿಸುವಂತೆ ನಾರಾಯಣತತ್ತ್ವವು ಜಗತ್ತಿಗೆ ಕಾರಣವಾಗಿದ್ದರೂ ಜಗತ್ತಿಗಿಂತ ವಿಲಕ್ಷಣವೂ ಉತ್ಕೃಷ್ಟವೂ ಆಗಿದೆ. ಅದನ್ನೇ 'ವಿಶ್ವತಃ ಪರಮಾಮ್' ಎಂದು ಇಲ್ಲಿ ತಿಳಿಸಲಾಗಿದೆ.

ಇನ್ನು ನಾರಾಯಣನು ನಿತ್ಯನೂ ಹರಿಯೂ ಪುರುಷನೂ ಆಗಿರುತ್ತಾನೆಂಬು ದನ್ನು ವಿಚಾರಮಾಡೋಣ. ನಿತ್ಯನೆಂದರೆ ಶಾಶ್ವತನು, ಸತ್ಯನು -ಎಂದು ಪರ್ಯಾಯ ಪದಗಳನ್ನು ಹೇಳಿ ಅರ್ಥಮಾಡಬಹುದು. ಆದರೆ ಆ ನಿತ್ಯಸ್ವರೂಪವನ್ನು ಅನುಭವ ದಿಂದ ಕಂಡುಕೊಳ್ಳಬೇಕಾದರೆ ಹೀಗೆ ತಿಳಿಯಬೇಕು. ಎಲ್ಲವೂ ವಿಕಾರವಾಗು ತ್ತಿದ್ದರೂ ತಾನು ವಿಕಾರವಾಗದೆ ವಿಕಾರಗಳನ್ನೆಲ್ಲ ನೋಡುವವನಾಗಿದ್ದು ಕೊಂಡಿರುವದೇ ಕೂಟಸ್ಥನಿತ್ಯತ್ವವು. ನಾವು ಮಗುವಾಗಿದ್ದಾಗಿನಿಂದ ಈವರೆಗೂ ಮತ್ತು ಎಚ್ಚರಕನಸುನಿದ್ರೆಗಳಲ್ಲಿಯೂ ನಾನು-ನಾನು ಎಂದೇ ಸ್ವರೂಪವನ್ನು ಗುರುತಿಸುತ್ತಾ ಇದ್ದುಕೊಂಡಿರುವಲ್ಲಿ ದೇಹಾದಿಗಳು ಬದಲಾಗಿರುವದು ಸ್ಪಷ್ಟವಾಗಿ ಗೊತ್ತಾಗುವದು. ಆದರೆ ಯಾವದು ತಾನು ಬದಲಾಗದೆ ಬದಲಾಯಿಸುವವು ಗಳನ್ನೆಲ್ಲ ನೋಡುತ್ತಿರುವದೋ ಅದೇ ನಾರಾಯಣನು, ಅದೇ ನಮ್ಮ ಆತ್ಮನು- ಎಂದು ತಿಳಿಯುವದೇ ನಿತ್ಯತ್ವಾನುಸಂಧಾನವು. ಇನ್ನು ಹರಿಯೆಂದರೆ ಸಕಲ ಪಾಪಗಳನ್ನೂ ಪರಿಹರಿಸುವ ನಿತ್ಯಶುದ್ಧಬುದ್ಧಮುಕ್ತನಾದ ಭಗವಂತನೆಂದು ಅಭಿಪ್ರಾಯ. ಪುರುಷನೆಂದರೆ ಎಲ್ಲಾ ಪುರ(ಶರೀರ)ಗಳಲ್ಲಿಯೂ ಇದ್ದುಕೊಂಡಿರು- ವವನು. ಆದರೆ ಆಯಾ ಶರೀರನಿಮಿತ್ತವಾದ ಸುಖದುಃಖಜನ್ಮಮರಣಾದಿಗಳ ಸಂಬಂಧವಿಲ್ಲದವನು. ಇಂಥ ಶ್ರೀಹರಿಯೂ ಪುರುಷನೂ ಆದ ನಾರಾಯಣನೇ ಈ ವಿಶ್ವವೆಲ್ಲವೂ ಆಗಿರುವನು. ವಿಶ್ವವು ಅವನ ಆಭಾಸಮಾತ್ರವು. ಆದರೂ ಅದು ನಾರಾಯಣನನ್ನು ಅರಿಯಲು ಸಹಾಯಕವಾಗಿರುವದು. ನೆರಳು ಪದಾರ್ಥ ವಲ್ಲದಿದ್ದರೂ ಮನುಷ್ಯನನ್ನು ಗುರುತಿಸಲು ಸಹಾಯವಾಗುವಂತೆ ವಿಶ್ವವು ನಾರಾಯಣನ ಸಾನ್ನಿಧ್ಯವನ್ನು ಪ್ರಕಟಿಸುವ ಉಪಾಧಿಯಾಗಿರುತ್ತದೆ. ಆದ್ದರಿಂದಲೇ ನಾರಾಯಣನು ವಿಶ್ವವನ್ನು ಉಪಜೀವಿಸಿಕೊಂಡಿರುತ್ತಾನೆ -ಎಂದು ಶ್ರುತಿಯಲ್ಲಿ ಹೇಳಿದೆ. ಇಲ್ಲಿ ಉಪಜೀವನವೆಂದರೆ ಅಧೀನತೆ- ಎಂದರ್ಥವಲ್ಲ. ಮತ್ತೇನೆಂದರೆ ಬೆಂಕಿಯು ತಾನು ತೋರಿಕೊಳ್ಳಲು ಕಟ್ಟಿಗೆಯನ್ನಾಶ್ರಯಿಸಿಕೊಂಡಿದೆ ಎಂದರೆ ಹೇಗೋ ಹಾಗೆ ಅರ್ಥಮಾಡಬೇಕು. ಕಟ್ಟಿಗೆಗೆ ಎಂದಿಗೂ ಸುಡುವ ಶಕ್ತಿಯಾಗಲಿ ಪ್ರಕಾಶಸಾಮರ್ಥ್ಯವಾಗಲಿ ಇರಲಾರದು. ಹಾಗೆಯೇ ಈ ವಿಶ್ವಕ್ಕೂ ಚೈತನ್ಯವಾಗಲಿ ಚಲನಾದಿಗಳಾಗಲಿ ಇಲ್ಲ. ಅವೆಲ್ಲವೂ ನಾರಾಯಣನ ಕೊಡುಗೆಯೇ. ಆದ್ದರಿಂದ ವಿಶ್ವದ ಮೂಲಕ ಪ್ರಕಟವಾಗುತ್ತಿರುವ ನಾರಾಯಣನನ್ನು ವಿಶ್ವೋಪಜೀವ್ಯನೆಂದು ಸ್ತುತಿಸಲಾಗಿದೆ. ವಿಚಾರಮಾಡುತ್ತಾ ಹೋದರೆ ನಾರಾಯಣನನ್ನು ಬಿಟ್ಟು

ವಿಶ್ವವನ್ನಾಗಲಿ ವಿಶ್ವವನ್ನು ಬಿಟ್ಟು ನಾರಾಯಣನನ್ನಾಗಲೀ ವ್ಯವಹರಿಸಲು ಬರುವದಿಲ್ಲ.

**ಪತಿಂ ವಿಶ್ವಸ್ಯಾತ್ಮೇಶ್ವರಂ ಶಾಶ್ವತಂ ಶಿವಮಚ್ಯುತಮ್ ।**
**ನಾರಾಯಣಂ ಮಹಾಜ್ಞೇಯಂ ವಿಶ್ವಾತ್ಮಾನಂ ಪರಾಯಣಮ್ ॥ ೩ ॥**

''ಜಗತ್ತಿಗೆಲ್ಲ ಪತಿಯೂ ಆತ್ಮನೂ ಈಶ್ವರನೂ ಶಾಶ್ವತನೂ ಶಿವನೂ ನಾಶರಹಿತನೂ ಆದ ನಾರಾಯಣನು ಮಹಾಜ್ಞೇಯನಾಗಿರುವನು. ವಿಶ್ವಾತ್ಮನೂ ಪರಾಯಣನೂ ಆಗಿರುವನು.''

ಈ ಮಂತ್ರವೂ ನಾರಾಯಣನನ್ನು ಸುಂದರವಾಗಿ ಚಿತ್ರಿಸುತ್ತಿದೆ. ನಾಮರೂಪರಹಿತನಾದ ಆ ನಾರಾಯಣನನ್ನೇ ಈ ಜಗತ್ತಿಗೆಲ್ಲ ಪತಿಯೆಂದೂ ಆತ್ಮನೆಂದೂ ಈಶ್ವರನೆಂದೂ ತಿಳಿಸಲಾಗಿದೆ. ಇದು ಹೇಗೆ ಸರಿ ? ಎಂದು ಶಂಕಿಸಬಾರದು. ವ್ಯವಹಾರದೃಷ್ಟಿಯಲ್ಲಿ ಮಾತ್ರವೇ ನಾರಾಯಣನನ್ನು ಹೀಗೆ ಸ್ತುತಿಸಲು ಸಾಧ್ಯ. ಪತಿ ಎಂದರೆ ಒಡೆಯನೆಂದರ್ಥ. ಇದು ಸಾಪೇಕ್ಷವು. ಏಕೆಂದರೆ ಆತನ ಒಡೆತನಕ್ಕೆ ಒಳಪಟ್ಟಿರುವ ಜಗತ್ತಿನ ದೃಷ್ಟಿಯಿಂದ ಮಾತ್ರವೇ ಆತನನ್ನು ಪತಿಯೆನ್ನಬೇಕು. ಆದರೆ ಜಗತ್ತು ಇಲ್ಲವಾದಾಗಲೂ ಪತಿತ್ವವು ಉಳಿಯಬೇಕಾದರೆ ಅದು ಅವನ ಸ್ವರೂಪವೇ ಆಗಬೇಕಷ್ಟೆ ? ಸ್ವರೂಪವನ್ನು ಏನೆಲ್ಲ ಶಬ್ದಗಳಿಂದ ಕರೆದರೂ ಆ ಶಬ್ದಗಳನ್ನು ಹೊರತುಪಡಿಸಿಯೇ ತತ್ತ್ವವನ್ನು ಅರಿಯಬೇಕಾಗಿರುವದರಿಂದ ನಾರಾಯಣನು ನಾಮರೂಪರಹಿತನೆಂದೇ ಮತ್ತೆ ಪ್ರಾಪ್ತವಾಗುವದು. ಇದೇನೂ ದೋಷವಲ್ಲ. ಭಗವಂತನು ತನ್ನ ಸ್ವರೂಪದಲ್ಲಿರುವಾಗ ಆ ದೃಷ್ಟಿಯಿಂದ ಯಾವ ಜಗತ್ತಾಗಲಿ, ಸೃಷ್ಟಿಸ್ಥಿತಿಪ್ರಲಯಗಳಾಗಲಿ, ಈಶ್ವರ-ಈಶಿತವ್ಯಭಾವವಾಗಲಿ ಇರುವದೇ ಇಲ್ಲ. ಈ ಶ್ರುತಿಗೆ ನಾರಾಯಣನ ನಿಜರೂಪವನ್ನು ತಿಳಿಸುವದರಲ್ಲಿ ತಾತ್ಪರ್ಯವೇ ಹೊರತು ಜಗತ್ಪತಿತ್ವವನ್ನೂ ಅವಧಾರಣೆಮಾಡುವದರಲ್ಲಲ್ಲ. ಹೀಗಿದ್ದರೂ ಜನಸಾಮಾನ್ಯರ ದೃಷ್ಟಿಯಿಂದ ಅವನನ್ನು ಆತ್ಮಾ, ಬ್ರಹ್ಮ- ಎಂದು ನಿರ್ದೇಶಿಸುವದಕ್ಕಿಂತಲೂ ಪತಿ, ಈಶ್ವರ- ಎಂದು ಹೇಳುವದೇ ಯುಕ್ತವಾಗಿರುತ್ತದೆ. ಹೀಗೆ ವಿಶ್ವಕ್ಕೆಲ್ಲ ಪತಿಯಾದ ಹಾಗೂ ಈಶ್ವರನಾದ ನಾರಾಯಣನು ಉಪಾಸ್ಯನಾಗಿರುವನು. ಇವನು ಶಾಶ್ವತನೂ ಶಿವನೂ ಆಗಿರುವನು. ಶಿವನೆಂದೆರ ಮಂಗಳಸ್ವರೂಪನು. ಅಚ್ಯುತನೆಂದರೆ ತನ್ನ ಸ್ವರೂಪದಿಂದ ಜಾರದೆ ಇರುವವನು. ಪರಾಯಣನೆಂದರೆ

ಪರಮಗತಿಯು. ಇಷ್ಟು ವರ್ಣನೆಗಳ ಅನಂತರ ಇದೇ ಮಂತ್ರದಲ್ಲಿ ಎರಡು ಬಾರಿ ಬಂದಿರುವ ಆತ್ಮಶಬ್ದವನ್ನು ನೋಡೋಣ. ತಾತ್ಪರ್ಯವುಳ್ಳ ವಿಷಯವನ್ನು ಮತ್ತೆ ಮತ್ತೆ ಹೇಳುವದು ರೂಢಿ. ಹಾಗೆಯೇ ಇಲ್ಲಿ ನಾರಾಯಣನು ಜಗದಾತ್ಮನೇ-ಎಂಬಲ್ಲಿ ತಾತ್ಪರ್ಯವಿದೆ. ಈ ಶಬ್ದಕ್ಕನುಗುಣವಾಗಿಯೇ ಪತಿ, ಈಶ್ವರ ಶಬ್ದಗಳನ್ನೂ ಅರ್ಥ ಮಾಡಬೇಕಾಗಿ ಬಂದದ್ದರಿಂದ ಮೇಲ್ಕಂಡಂತೆ ವಿವರಿಸಲಾಯಿತು. ಆತ್ಮನೆಂದದ್ದರಿಂದ ಪತಿ- ಈಶ್ವರತ್ವಾದಿಗಳು ಅವನಲ್ಲಿ ಕಲ್ಪಿತವೆಂದೇ ಆಗುತ್ತವೆ. ಏಕೆಂದರೆ ತನ್ನಲ್ಲೇ ಈಶಿತೃ- ಈಶಿತವ್ಯವೆಂಬ ಭೇದವಿರಲಾರದು. ಒಬ್ಬನ ಕನಸಿನಲ್ಲಿ ಯಜಮಾನ, ಜವಾನ-ರ ಪರಸ್ಪರ ಸಂವಾದವಾಯಿತೆಂದಿಟ್ಟುಕೊಳ್ಳೋಣ. ಈ ಸಂದರ್ಭದಲ್ಲಿ ಯಜಮಾನನೂ ಜವಾನನೂ ತಾನೇ ಆಗಿದ್ದುದು ಅನುಭವವಷ್ಟೆ ! ಆದರೂ ಯಜಮಾನ, ಜವಾನನೆಂದು ವ್ಯವಹರಿಸಿದ್ದೂ ನಿಜವಷ್ಟೆ ! ಹಾಗೆಯೇ ಇಲ್ಲಿಯೂ ಪ್ರಪಂಚ, ಈಶ್ವರ ಎಂಬ ವ್ಯವಹಾರವು ನಾರಾಯಣನೊಬ್ಬನಲ್ಲಿಯೇ ಕಲ್ಪಿತವೆಂದು ತಿಳಿಯಬೇಕು.

ಇಂಥ ನಾರಾಯಣನು ಮಹಾಜ್ಞೇಯನೆಂಬುದವನ್ನು ವಿಚಾರ ಮಾಡೋಣ. ಜ್ಞೇಯವೆಂದರೆ ಅರಿಯಲ್ಪಡಬೇಕಾದ ವಸ್ತು ಎಂದರ್ಥ. ಆದರೆ ಇಲ್ಲಿ ನಾರಾಯಣನು ತನ್ನ ಆತ್ಮನೇ ಆಗಿರುವದರಿಂದ ಯಾವನೊಬ್ಬನೂ ಯಾವ ಕಾರಣದಿಂದಲೂ ಅವನನ್ನು ವಿಷಯವಾಗಿಸಿಕೊಳ್ಳಲಾರನು. ಆದ್ದರಿಂದ 'ನಾರಾಯಣನು ಜ್ಞೇಯನಲ್ಲ' ಎಂಬುದಾಗಿ ಅರಿಯುವದೇ ನಾರಾಯಣನ ಜ್ಞಾನವು. ಅವನನ್ನು ಅರಿತಂತೆಲ್ಲ ಜ್ಞೇಯಗಳೇ ಇಲ್ಲವಾಗುವವು. ಹೀಗೆ ಜ್ಞಾತೃ ಜ್ಞಾನಜ್ಞೇಯಗಳೆಂಬ ತ್ರಿಪುಟಿಯನ್ನೆಲ್ಲ ವ್ಯಾಪಿಸಿಕೊಂಡು ಸ್ವತಃ ತನ್ನಲ್ಲಿ ಯಾವ ವಿಭಾಗವೂ ಇಲ್ಲದೆ ಅಖಂಡಚೈತನ್ಯನಾಗಿರುವ ನಾರಾಯಣನೊಬ್ಬನೇ ಮಹಾಜ್ಞೇಯನೆನಿಸಿರುವನು.

**ನಾರಾಯಣಃ ಪರಂ ಬ್ರಹ್ಮತತ್ತ್ವಂ ನಾರಾಯಣಃ ಪರಃ ।**
**ನಾರಾಯಣಃ ಪರೋ ಜ್ಯೋತಿರಾತ್ಮಾ ನಾರಾಯಣಃ ಪರಃ ॥ ೪ ॥**

''ನಾರಾಯಣನು ಪರಬ್ರಹ್ಮತತ್ತ್ವವು. ಪರವಾದ ಜ್ಯೋತಿಯು ; ಆತ್ಮನೂ ನಾರಾಯಣನೇ'' ಎಂಬರ್ಥದ ಈ ಮಂತ್ರದಲ್ಲಿ ಬ್ರಹ್ಮ ಆತ್ಮಾ ಎಂಬೀ ಶಬ್ದಗಳನ್ನು ಒಟ್ಟಿಗೆ ಬಳಸಿರುವದನ್ನು ಗಮನಿಸಬೇಕು. ದ್ವೈತವಾದಿಗಳಿಗೆ ನಾರಾಯಣನು ಪರಬ್ರಹ್ಮವೇ ಎಂಬಿದು ಒಪ್ಪಿಗೆಯಾದರೂ ಆತ್ಮನೂ ನಾರಾಯಣನೇ- ಎಂಬಿದು ಒಪ್ಪಿಗೆಯಾಗಲಾರದು. ಏಕೆಂದರೆ ಜೀವಾತ್ಮನು ಪರಮಾತ್ಮನಿಗಿಂತ ಬೇರೆಯೆಂದೇ

ಅವರ ಅಭಿಪ್ರಾಯವಿದೆ. ಆಗ ಅವರು 'ಆತ್ಮಾ ನಾರಾಯಣಃ' ಎಂಬಿದಕ್ಕೆ ಆತ್ಮನೂ ನಾರಾಯಣನ ಅಂಶವೇ ಎಂದೋ, ನಾರಾಯಣನ ಅಧೀನನೇ ಎಂದೋ ಅರ್ಥ ಮಾಡಬೇಕಾಗುವದು. ಹಾಗಲ್ಲದೆ ಆತ್ಮಶಬ್ದಕ್ಕೂ ಬ್ರಹ್ಮವೇ ಮುಖ್ಯಾರ್ಥವೆಂದು ಸ್ವೀಕರಿಸಿದರೆ ದ್ವೈತಹಾನಿಯಾಗಿ ಅನಿಷ್ಟವಾಗುವದು. ಆದರೆ ಅದ್ವೈತದಂತೆ ಅರ್ಥ ಮಾಡಿದರೆ ಈ ಯಾವ ಕ್ಲೇಶಗಳೂ ಇರುವದಿಲ್ಲ. ಏಕೆಂದರೆ ವೇದದಲ್ಲಿ ಹೇಳಿರುವಂತೆಯೇ ಯಥಾಶ್ರುತವಾದ ಅರ್ಥವನ್ನು ಅದ್ವೈತಸಿದ್ಧಾಂತದಲ್ಲಿ ಸ್ವೀಕರಿಸಲಾಗಿದೆ. ಹೇಗೆಂದರೆ ''ನಾರಾಯಣಃ ಪರಂ ಬ್ರಹ್ಮ''ಎಂದರೆ ನಾರಾಯಣನೇ ಸತ್ಯಜ್ಞಾನಾನಂತಲಕ್ಷಣನಾದ ಪರಬ್ರಹ್ಮವು-ಎಂದರ್ಥ. ಇಲ್ಲಿ ಸತ್ಯವೆಂಬುದು ಅನೃತದ ದೃಷ್ಟಿಯಿಂದ ಸಾಪೇಕ್ಷವಾಗಿ ಬಳಸಲ್ಪಟ್ಟಿದೆ. ಆದ್ದರಿಂದ ಶಬ್ದಪ್ರವೃತ್ತಿ ಹೇತುರಹಿತವಾದ ಬ್ರಹ್ಮದಲ್ಲಿ ಅದಕ್ಕೆ ಲಕ್ಷ್ಯಾರ್ಥವೇ ಹೊರತು ವಾಚ್ಯಾರ್ಥವಿಲ್ಲ. ಯಾವದು ಯಾವರೂಪದಿಂದ ನಿಶ್ಚಿತವಾಗಿದ್ದು ತನ್ನ ಸ್ವರೂಪವನ್ನು ಮತ್ತೆಂದಿಗೂ ಬದಲಾಯಿಸುವದಿಲ್ಲವೋ ಅದನ್ನು ಸತ್ಯವೆಂದು ಶಂಕರಾಚಾರ್ಯರು ತಿಳಿಸಿದ್ದಾರೆ. ನಿಜ; ಹಾಗೆಯೇ ಜ್ಞಾನವೆಂದರೆ ವೃತ್ತಿರೂಪಜ್ಞಾನವಲ್ಲವೆಂದೂ ಜ್ಞಪ್ತಿ- ಎಂಬ ಅರಿವು ಮಾತ್ರವೇ ಎಂದೂ ಅದು ಭಾವಾರ್ಥದಲ್ಲಿ ಪ್ರಯುಕ್ತವಾಗಿದೆಯೆಂದೂ ತಿಳಿಸಿದ್ದಾರೆ. ಅನಂತವೆಂಬುದಂತೂ ಅಂತವಿಲ್ಲದ್ದು ಎಂದು ಪ್ರತಿಷೇಧರೂಪವಾಗಿಯೇ ಇದೆ. ಅಂತೂ ಸತ್ಯಜ್ಞಾನಾನಂತಶಬ್ದಗಳಿಗೆ ನಾವು ವ್ಯಾಕರಣ, ವ್ಯವಹಾರ-ದೃಷ್ಟಿಗಳಿಂದ ಮಾಡಬಹುದಾದ ಅತ್ಯುತ್ತಮ ಅರ್ಥಗಳನ್ನೂ ಒಳಗೊಂಡು ಅದಕ್ಕೂ ಮೀರಿ ನಿಷೇಧಾರ್ಥವನ್ನು ಹೇಳಿದಾಗ ಆ ಶಬ್ದಗಳು ಬ್ರಹ್ಮದಕಡೆಗೆ ನಮ್ಮನ್ನು ಪ್ರಚೋದಿಸುತ್ತವೆ. ಆಗ ಅವಾಕ್ಯಾರ್ಥವಾದ ಬ್ರಹ್ಮವು ಜಿಜ್ಞಾಸುವಿಗೆ ಅನುಭವಾರೂಢವಾಗುವದು. ಅಂಥ ಅನುಭವದಲ್ಲಿ ಸತ್ಯ-ಜ್ಞಾನಾದಿ ಶಬ್ದಗಳೂ ಪ್ರವಿಲಯವಾಗಿಬಿಡುವವು. ಕಡೆಗೆ ಬ್ರಹ್ಮ-ಆತ್ಮ ಎಂಬೀ ಶಬ್ದಗಳೂ ಅಬ್ರಹ್ಮ, ಅನಾತ್ಮಗಳಿಂದ ಬೇರ್ಪಡಿಸಿ ವಸ್ತುವನ್ನು ಗುರುತಿಸುವದಕ್ಕೆ ಸಹಾಯಕಗಳೇ ಆಗಿರುವವು. ನೇತಿನೇತಿ ಎಂದು ಮಾತ್ರವೇ ಬ್ರಹ್ಮದ ವಿಷಯಕ್ಕೆ ಹೇಳಲು ಸಾಧ್ಯ- ಎಂದೇ ಶಂಕರರು ವಿವರಣೆಯನ್ನು ನೀಡಿರುತ್ತಾರೆ. ಇದರಿಂದ ಬ್ರಹ್ಮ, ಆತ್ಮ-ಶಬ್ದಗಳನ್ನು ಒಂದೇ ಅರ್ಥದಲ್ಲಿ ಬಳಸಿದೆ - ಎಂದಾಯಿತು.

ಈಗ ಬ್ರಹ್ಮಾತ್ಮರುಗಳ ಐಕ್ಯವನ್ನೂ ನಾರಾಯಣನೇ ಬ್ರಹ್ಮವೂ ಆತ್ಮನೂ ಆಗಿರುವನೆಂಬುದನ್ನೂ ನೋಡೋಣ. ನಾರಾಯಣನು ಅನಾತ್ಮನಾದರೆ

ಪರಿಚ್ಛಿನ್ನನೂ ಅನಿತ್ಯನೂ ಆಗುವನು. ಏಕೆಂದರೆ ಆತ್ಮನಿಗಿಂತ ಅವನು ಬೇರೆಯಾಗುವದರಿಂದ ಈ ದೋಷವು ಅಪರಿಹಾರ್ಯವಾಗುವದು. ಆತ್ಮನಾಗಿ ಬಿಟ್ಟರೆ ಸಂಸಾರಧರ್ಮಗಳು ಅಂಟಿಬಿಡುವವಲ್ಲ- ಎಂದು ಶಂಕಿಸಬಾರದು. ಆತ್ಮನು ಅಸಂಗನಾಗಿದ್ದು ಜರಾಮರಣಾದಿಗಳು ದೇಹಧರ್ಮಗಳೆಂದೂ ಶೋಕಮೋಹಾದಿಗಳು ಮನೋಧರ್ಮಗಳೆಂದೂ ವಿವೇಕಿಗಳಿಗೆಲ್ಲ ಪ್ರಸಿದ್ಧವೇ ಆಗಿದೆ. ಆತ್ಮನಿಗೇ ಸಂಸಾರವಿಲ್ಲವಾದರೆ ನಾರಾಯಣನಿಗೇಕೆ ಇದ್ದೀತು ? ಆದ್ದರಿಂದ ನಾರಾಯಣನು ಆತ್ಮನೆಂಬುದೇ ಸರಿಯಾದ ತೀರ್ಮಾನವು. ಹೀಗೆ ಆತ್ಮನಾಗಿರುವದರಿಂದಲೇ ಎಲ್ಲಾ ಪ್ರಾಣಿಗಳ ಹಾಗೂ ಎಲ್ಲಾ ವಸ್ತುಗಳ ತಿರುಳೂ ಅವನೇ ಆಗಿರುತ್ತಾನೆ. ಎಲ್ಲವನ್ನೂ ವ್ಯಾಪಿಸಿಕೊಂಡಿರುವದರಿಂದ ಎಲ್ಲಕ್ಕಿಂತಲೂ ಮಿಗಿಲಾಗಿರುತ್ತಾನೆ. ಇದೇ ಬ್ರಹ್ಮತ್ವವು. ಹಾಗೆಯೇ ಪರಂಜ್ಯೋತಿಯೂ ನಾರಾಯಣನೇ ಆಗಿರುವನು. ಏಕೆಂದರೆ ಎಲ್ಲವನ್ನೂ ತನ್ನ ನಿತ್ಯಚೈತನ್ಯಪ್ರಕಾಶದಿಂದ ಬೆಳಗುತ್ತಿರುವವನು ನಾರಾಯಣನೇ. 'ತಸ್ಯ ಭಾಸಾ ಸರ್ವಮಿದಂ ವಿಭಾತಿ' ಎಂದೇ ಶ್ರುತಿಯು ಮೊಳಗುತ್ತಿರುವದು. ಇನ್ನು ತತ್ತ್ವವೆಂದರೇನು? ಎಂಬಿದನ್ನು ನೋಡೋಣ. 'ತತ್-ಎಂಬಿದು ಸರ್ವನಾಮವು. ಸರ್ವವೂ ಬ್ರಹ್ಮವು. ಆ ಬ್ರಹ್ಮದ ಭಾವ (ಇರುವಿಕೆ)ಯೇ ತತ್ತ್ವವೆನಿಸುವದು'- ಎಂದು ಶಂಕಾರಾಚಾರ್ಯರು ತಿಳಿಸಿದ್ದಾರೆ. ನಾರಾಯಣನೇ ತತ್ತ್ವವು ಎಂದರೆ ಅವನೊಬ್ಬನೇ ನಿಜವಾಗಿ ಇರುವವನು. ಅವನ ಅಸ್ತಿತ್ವವೇ ಉಳಿದ ಎಲ್ಲಾ ವಸ್ತುಗಳಲ್ಲಿಯೂ ಸತ್ತಾಮಾತ್ರವಾಗಿ ತೋರಿಕೊಳ್ಳುತ್ತಿರುವದು. ಹೀಗೆ ಬ್ರಹ್ಮ, ಆತ್ಮ, ನಾರಾಯಣ, ತತ್ತ್ವ- ಎಂಬ ಶಬ್ದಗಳನ್ನು ಬಳಸಿದಮೇಲೂ ಬೇರೆಬೇರೆಯ ಅರ್ಥಗಳನ್ನು ವಿವರಿಸಿದಮೇಲೂ ಕಡೆಗೆ ಉಳಿದದ್ದು ಒಂದೇ ಎಂಬುದು ಅನುಭವದ ಮಾತಾಯಿತು. ಇಂಥ ನಾರಾಯಣನ ಹೆಸರಿನ ವಿಚಾರಕ್ಕೆ ವಿವಾದವೇ ಸಲ್ಲದು. ಒಟ್ಟಿನಲ್ಲಿ ಏಕಮೇವಾದ್ವಿತೀಯನೂ ಸಕಲಜಗದಾತ್ಮನೂ ಸತ್ಯಜ್ಞಾನಾನಂತ ಲಕ್ಷಣನೂ ಸತ್ತಾಮಾತ್ರಸ್ವರೂಪನೂ ಪರಮನೂ ಪರಾಯಣನೂ ಆಗಿರುವ ನಾರಾಯಣನೆಂಬ ಪರಬ್ರಹ್ಮನು ನಮಗೆಲ್ಲ ಗತಿಯಾಗಿರುವನು-ಎಂದು ಈ ಮಂತ್ರಾರ್ಥವನ್ನು ತಿಳಿಯಬೇಕು.

**ಯಚ್ಚ ಕಿಂಚಿಜ್ಜಗತ್ಸರ್ವಂ ದೃಶ್ಯತೇ ಶ್ರೂಯತೇಽಪಿ ವಾ ।**
**ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ ॥ ೫ ॥**

''ಜಗತ್ತೆಂಬುದು ಏನೇನು ಕಂಡುಬರುವದೋ, ಕೇಳಬರುವದೋ ಅದೆಲ್ಲವನ್ನೂ ಒಳಗೂ ಹೊರಗೂ ವ್ಯಾಪಿಸಿಕೊಂಡು ನಾರಾಯಣನೇ ಇದ್ದು ಕೊಂಡಿರುವನು.''

ಈ ಮಂತ್ರದಲ್ಲಿ ಜಗತ್ತಿನ ವಿಚಾರವಿದೆ. ವ್ಯವಹಾರದೃಷ್ಟಿಯಿಂದ ಜಗತ್ತಿಗೆ ಎರಡು ರೂಪಗಳು. ಅವು ಯಾವವೆಂದರೆ : ಸೃಷ್ಟಿಕಾಲದಲ್ಲಿ ಕಂಡುಬರುವ ವ್ಯಾಕೃತರೂಪ ಮತ್ತು ಪ್ರಲಯಕಾಲದಲ್ಲಿ ಕಂಡುಬರುವ ಅವ್ಯಾಕೃತರೂಪವು. ಇದನ್ನೇ ಶ್ರುತಿಯಲ್ಲಿ ದೃಶ್ಯತೇ, ಶ್ರೂಯತೇ- ಎಂಬ ಮಾತುಗಳಿಂದ ತಿಳಿಸಿದೆ. ನಾವುಗಳು ಯಾರೂ ಪ್ರಲಯಕಾಲದಲ್ಲಿ ಬಿಡಿಬಿಡಿಯಾಗಿರುವದಿಲ್ಲ. ಆದ್ದರಿಂದ ಪ್ರಲಯವು ಹೇಗಿರಬಹುದೆಂಬುದನ್ನು ಊಹೆಮಾಡಲು ಮಾತ್ರ ಸಾಧ್ಯ. ಆಗ್ಗೆ ಏನೂ ಇರುವದಿಲ್ಲ-ಎಂದು ಕಲ್ಪಿಸಬಹುದಾದರೂ ಏನೂ ಇಲ್ಲದ್ದನ್ನು ಗುರುತಿಸುವವನಾರು ? ಅವನು ಇರಲೇ ಬೇಕಲ್ಲವೆ ? ಎಂಬ ಶಂಕೆಯುಂಟಾಗುವದು. ಇದು ನ್ಯಾಯವೂ ಆಗಿದೆ. ಸಾಕ್ಷಿಯಿಲ್ಲದೆ ಶೂನ್ಯವೂ ಸಿದ್ಧಿಸಲಾರದು. ಆದ್ದರಿಂದ ಪ್ರಲಯಕ್ಕೂ ಸಾಕ್ಷಿಯಾಗಿರುವ ನಾರಾಯಣನೇ ಪ್ರಲಯಕಾಲದಲ್ಲಿಯೂ ಇದ್ದುಕೊಂಡಿರುತ್ತಾನೆ. ಆಗ ಅವನೊಬ್ಬನೇ ಇರುತ್ತಾನೆ- ಎಂಬುದು ವಿಶೇಷವು. ಮತ್ತು ಏನೂ ಇಲ್ಲದ ಆ ಸ್ಥಿತಿಯು ಅವನಿಗಿಂತ ಬೇರೆಯಾಗಿ ಇರುವದೂ ಇಲ್ಲ. ಇದನ್ನೇ ವೇದದ ಭಾಷೆಯಲ್ಲಿ ಹೇಳಿದರೆ ''ಜಗತ್ಕಾರಣವೆಂಬ ಅವ್ಯಾಕೃತವು ಪ್ರಲಯಕಾಲದಲ್ಲಿರುವದೆಂದು ಏನು ಕೇಳಬರುವದೋ ಅದನ್ನೂ ನಾರಾಯಣನೇ ಒಳಗೂ ಹೊರಗೂ ವ್ಯಾಪಿಸಿಕೊಂಡಿರುತ್ತಾನೆ'' ಎಂದಾಗುವದು. ಹಾಗೆಯೇ ಉತ್ಪತ್ತಿಕಾಲದಲ್ಲಿ ಕಂಡುಬರುವ ವ್ಯಾಕೃತಪ್ರಪಂಚವು ನಾನಾ ನಾಮರೂಪಾತ್ಮಕವಾಗಿ, ಚೇತನಾಚೇತನವಿಭಕ್ತವಾಗಿ ಹರಡಿಕೊಂಡಿರುವದು. ಆದರೆ ಗೋಡೆಯಿಲ್ಲದೆ ಚಿತ್ರವನ್ನು ಹೇಗೆ ಬರೆಯಲಾಗದೋ ಹಾಗೆ ನಾರಾಯಣನ ಅವಲಂಬನೆ ಹಾಗೂ ಅಸ್ತಿತ್ವದ ನೆರವಿಲ್ಲದೆ ಈ ನಾಮರೂಪಾತ್ಮಕಜಗತ್ತು ತೋರಿಕೊಳ್ಳಲೇ ಆರದು. ಆದ್ದರಿಂದ ಜಗತ್ತಿನ ತಿರುಳೆಲ್ಲ ನಾರಾಯಣನೇ ಆಗಿರುವನೆಂದಾಯಿತು. ಇದನ್ನೇ ಶ್ರುತಿಯಲ್ಲಿ ''ಯಾವ ನಾಮರೂಪಾತ್ಮಕವಾದ ಜಗತ್ತು ಕಂಡುಬರುತ್ತಿರುವದೋ ಅದನ್ನು ಒಳಗೂ ಹೊರಗೂ ವ್ಯಾಪಿಸಿಕೊಂಡಿರುವವನು ನಾರಾಯಣನೇ'' ಎಂದು ತಿಳಿಸಲಾಗಿದೆ.

ಈಗ ಸೃಷ್ಟಿಕಾಲದಲ್ಲಿ ತೋರಿಕೊಂಡ ದ್ವೈತಪ್ರಪಂಚದ ಅಪೇಕ್ಷೆಯಿಂದಲಾದರೂ ನಾರಾಯಣನು ಏಕಮೇವಾದ್ವಿತೀಯನೆಂಬುದು ಬಾಧಿತವಾಗುವದಿಲ್ಲ

ವಷ್ಟೆ; ಅದು ಹೇಗೆ ? ಎಂಬಿದನ್ನು ವಿಚಾರಮಾಡೋಣ. ಪ್ರಪಂಚದ ಇರುವಿಕೆಯ ವಿಷಯಕ್ಕೆ ನಾವು ತಿಳಿಯಬೇಕಾದದ್ದು ಹೀಗಿದೆ. ಅದು ನಾರಾಯಣನಿಗಿಂತ ಬೇರೆ ಯೆಂದಾಗಲಿ, ಬೇರೆಯಲ್ಲವೆಂದಾಗಲಿ ಹೇಳಲು ಬಾರದಂಥ ಅನಿರ್ವಚನೀಯ ಸ್ವರೂಪದ್ದಾಗಿದೆ. ಅಥವಾ ನಾರಾಯಣನಿಗಿಂತ ಬೇರೆಯಾಗಿ ತೋರುವ ಕಾಲದಲ್ಲಿಯಾಗಲಿ, ಮರೆಯಾದಾಗಲಾಗಲಿ ನಾರಾಯಣನನ್ನು ಬಿಟ್ಟರೆ ಅದಕ್ಕೆ ಅಸ್ತಿತ್ವವೇ ಇಲ್ಲವಾಗಿದೆ. ಹೇಗೇ ವಿಚಾರಮಾಡಿದರೂ ನಾರಾಯಣನಂತೆ ಸ್ವತಂತ್ರವಾದ ಎರಡನೆಯ ವಸ್ತುವಾಗಿ ಪ್ರಪಂಚವು ಯಾವಾಗಲೂ ಇರುವದೇ ಇಲ್ಲ. ಇದನ್ನು ನಾವು ಈಗಲೇ ಅನುಭವದಿಂದ ಕಂಡುಕೊಳ್ಳಬಹುದು. ಹೇಗೆಂದರೆ ಗಾಢನಿದ್ರೆಯಲ್ಲಿ ಯಾವ ಪ್ರಪಂಚವೂ ಇಲ್ಲದ ಸ್ಥಿತಿಯನ್ನು ನಾವೇ ಸಾಕ್ಷಾತ್ತಾಗಿ ಅನುಭವಿಸುತ್ತೇವೆ. ಆಗ ನಾವಿರುವದಿಲ್ಲವೆಂದೇನೂ ಭಾವಿಸುವದಿಲ್ಲ. ಆದ್ದರಿಂದ ನಾನು ಎಂಬ ಸ್ವರೂಪವು ನಾರಾಯಣನೇ ಆಗಿದ್ದು ಆ ನಾರಾಯಣನಲ್ಲಿಯೇ ಎದ್ದು ಮುಳುಗುವ, ತೋರಿಕೆಯೊಂದೇ ತಿರುಳಾಗಿರುವ ಈ ಪ್ರಪಂಚವು ನಾರಾಯಣನ ಸ್ವರೂಪಕ್ಕೆ ಯಾವ ಧಕ್ಕೆಯನ್ನೂ ಉಂಟುಮಾಡಲಾರದು. ಹೇಗೆ ಮನುಷ್ಯನಿಗಿಂತ ಬೇರೆಯಾಗಿ ಅವನ ನೆರಳು ತೋರಿದರೂ ಮನುಷ್ಯನ ಜೊತೆಗೆ ಅದೂ ಒಂದಾಗಿ ದ್ವೈತವುಂಟಾಗುವ ಸಂಭವವಿಲ್ಲವೋ ಹಾಗೆಯೇ ನಾರಾಯಣ ನಲ್ಲಿ ತೋರಿ ಮರೆಯಾಗುವ ಪ್ರಪಂಚದಿಂದ ನಾರಾಯಣನ ಅದ್ವಿತೀಯತ್ವಕ್ಕೆ ಯಾವ ಹಾನಿಯೂ ಇರುವದಿಲ್ಲ. ಇನ್ನು ಅನಿರ್ವಚನೀಯವೆಂದರೇನು ? ಎಂಬುದನ್ನು ಒಂದು ದೃಷ್ಟಾಂತದ ಮೂಲಕ ಶ್ರೀ ಶಂಕರಾಚಾರ್ಯರು ಹೀಗೆ ತಿಳಿಸಿದ್ದಾರೆ : ಸಮುದ್ರದಲ್ಲಿರುವ ನೀರು, ತೆರೆ ನೊರೆಗಳ ರೂಪದಿಂದ ಮತ್ತು ಮಂಜುಗಡ್ಡೆಯ ರೂಪದಿಂದ ತೋರಿಕೊಂಡಾಗ ಆ ತೆರೆ-ನೊರೆ-ಗಡ್ಡೆಗಳನ್ನು ನೀರೆಂದು ಹೇಳಲು ಬರುವದಿಲ್ಲ. ಏಕೆಂದರೆ ನೀರಿಗಿಂತ ಬೇರೆಯಾಗಿ ವ್ಯವಹರಿಸಲ್ಪಡುತ್ತವೆ. ಆದರೆ ನೀರಲ್ಲವೆಂದೂ ಹೇಳಲು ಬರುವದಿಲ್ಲ. ಏಕೆಂದರೆ ನೀರನ್ನು ಬಿಟ್ಟರೆ ಅವಕ್ಕೆ ಇರುವಿಕೆಯೇ ಇಲ್ಲವಾಗುವದು. ಹೀಗೆ ನೀರೇ ಎಂದಾಗಲಿ, ನೀರಲ್ಲವೆಂದಾಗಲಿ ಹೇಳಲು ಬಾರದ ತೆರೆ ನೊರೆಗಳನ್ನು ಅನಿರ್ವಚನೀಯವೆಂದರೆ ತಪ್ಪಾಗುವದಿಲ್ಲ. ಅದರಂತೆಯೇ ನಾರಾಯಣನಿಗಿಂತ ಬೇರೆಯೆಂದಾಗಲಿ, ಬೇರೆಯಲ್ಲವೆಂದಾಗಲಿ ಹೇಳಲು ಬಾರದ ಪ್ರಪಂಚವು ಅನಿರ್ವಚನೀಯವೆನಿಸುವದು. ನಿಜವೇನೆಂದರೆ : ಪ್ರಪಂಚದ ಒಳಗೂ ಹೊರಗೂ

ಎಲ್ಲೆಲ್ಲಿಯೂ ನಾರಾಯಣನೇ ವ್ಯಾಪಿಸಿದ್ದು ಆ ನಾರಾಯಣನೇ ಅಜ್ಞರಿಗೆ ಪ್ರಪಂಚವಾಗಿ ಕಾಣಿಸುತ್ತಾನೆ ಎಂಬಿದು ತತ್ತ್ವವಾಗಿರುತ್ತದೆ.

ಈಗ ಸರ್ವವೆಂಬ ಶಬ್ದವನ್ನು ವಿಮರ್ಶೆಮಾಡೋಣ. ಎಲ್ಲವೂ ಎಂದು ಹೇಳುವಾಗ ಬಹಳ ವಸ್ತುಗಳಿರಬೇಕೆಂದೂ ಅವು ಒಂದೊಂದೂ ಬಿಡಿಬಿಡಿಯಾಗಿ ಸ್ವತಂತ್ರವಾಗಿರಬಹುದೆಂದೂ ಕಂಡುಬರುತ್ತದೆ. ಆದರೆ ಮೇಲೆ ತಿಳಿಸಿದಂತೆ ಅನುಸಂಧಾನಮಾಡಿದಲ್ಲಿ ಸರ್ವ ಎಂಬುದಕ್ಕೆ ''ಒಂದು ಮೂಟೆಯಲ್ಲಿರುವ ಎಲ್ಲ ಉದ್ದಿನ ಕಾಳುಗಳೂ''- ಎಂದರ್ಥಮಾಡುವಂತೆ ಅಲ್ಲ ಎಂದು ಗೊತ್ತಾಗುವದು. ಇಲ್ಲಿ ಸರ್ವ ಎಂದರೆ ನಮ್ಮ ನಮ್ಮ ಕನಸನ್ನು ತೆಗೆದುಕೊಂಡು ಅದರಲ್ಲಿ ಕಂಡು ಬರುವ ಎಲ್ಲವೂ ಎಂದರೆ ಹೇಗೋ ಹಾಗೆ ತಿಳಿಯಬೇಕು. ಏಕೆಂದರೆ ಕನಸಿನ ವಸ್ತುಗಳು ಕನಸನ್ನು ಬಿಟ್ಟು ಮತ್ತೆಲ್ಲಿಯೂ ಇರಲಾರವು. ಆಗ ಸರ್ವವೂ ಎಂಬುದು ಔಪಚಾರಿಕವೇ ಆಯಿತು. ಕನಸನ್ನು ನೋಡುವ ದ್ರಷ್ಟೃವೊಬ್ಬನೇ ಪರಮಾರ್ಥ ವೆಂದಾಯಿತು. ಅದರಂತೆಯೇ ಈ ಜಗತ್ತೆಲ್ಲವೂ ಯಾವನಲ್ಲಿ ಆರೋಪಿತವಾಗಿರು ವದೋ ಅವನೇ ಇದರ ಸರ್ವಸ್ವವು ಎಂದು ತೀರ್ಮಾನವಾಗುತ್ತದೆ. ಇಂಥ ಅದ್ವಿತೀಯ ನಾರಾಯಣನ ಜ್ಞಾನದಿಂದ ನಾವು ಮುಕ್ತರಾಗಬೇಕಾಗಿದೆ.

**ಅನಂತಮವ್ಯಯಂ ಕವಿಂ ಸಮುದ್ರೇಽನ್ತಂ ವಿಶ್ವಶಂಭವಮ್ ।**
**ಪದ್ಮಕೋಶಪ್ರತೀಕಾಶಂ ಹೃದಯಂ ಚಾಪ್ಯಧೋಮುಖಮ್ ॥ ೬ ॥**

''ಅನಂತನೂ ಅವ್ಯಯನೂ ಕವಿಯೂ ಸಮುದ್ರದ ತುದಿಯೂ ವಿಶ್ವಶಂಭವನೂ ಆಗಿ ನಾರಾಯಣನು ಇದ್ದುಕೊಂಡಿರುವನು. ಹೃದಯವು ಪದ್ಮ ಕೋಶಕ್ಕೆ ಸಮಾನವಾಗಿದ್ದು ಕೆಳಮುಖವಾಗಿದ್ದುಕೊಂಡಿರುವದು''.

ಈ ಮಂತ್ರದಲ್ಲಿ ಪೂರ್ವಾರ್ಧದಿಂದ ನಾರಾಯಣನ ನಿಜರೂಪವನ್ನು ತಿಳಿಸಲಾಗಿದೆ. ಉತ್ತರಾರ್ಧದಿಂದ ನಾರಾಯಣನನ್ನು ಉಪಾಸನೆಮಾಡಬೇಕಾದ ಹೃದಯವೆಂಬ ಸ್ಥಾನವನ್ನು ವರ್ಣಿಸಿದೆ. ನಾರಾಯಣನು ಅನಂತನು- ಎಂದರೆ ದೇಶಕಾಲಪರಿಚ್ಛೇದಗಳಿಲ್ಲದವನು. ಭಗವಂತನು ಸರ್ವವ್ಯಾಪಕನಾಗಿದ್ದು ಭೂತಭವ್ಯಭವನ್ನಾಥನೂ ಆಗಿರುವದರಿಂದ ಅವನು ಅನಂತನೆನಿಸಲು ತಕ್ಕವ ನಾಗಿರುವನು. ಆತನಿಲ್ಲದ ಕಾಲವಾಗಲಿ, ಸ್ಥಳವಾಗಲಿ ಇರುವದೇ ಇಲ್ಲ. ಮತ್ತು ಅವ್ಯಯನೂ ಆಗಿರುವನು. ಅವ್ಯಯನೆಂದರೆ ನಾಶವಿಲ್ಲದವನು ; ವಿಕಾರರಹಿತನು-

ಎಂದರ್ಥ. ಆತ್ಮನು ಹಿಗ್ಗುವದಾಗಲಿ ಕುಗ್ಗುವದಾಗಲಿ ಇಲ್ಲ. ಏಕೆಂದರೆ ಅವನಿಗೆ ಅವಯವಗಳಿರುವದಿಲ್ಲ. ಶರೀರವಾದರೆ ಹಿಗ್ಗುವದೂ ಕುಗ್ಗುವದೂ ಆಗಬಹುದು. ಮತ್ತು ತನ್ನದಾದ ಪದಾರ್ಥವು ನಾಶವಾದರೂ ಯಜಮಾನನು ವಿಕಾರವಾಗುವದುಂಟು. ಉದಾಹರಣೆಗೆ ಧನಿಕನಾದವನೊಬ್ಬನು ತನ್ನ ಐಶ್ವರ್ಯವೆಲ್ಲ ನಾಶವಾಗಲಾಗಿ ಕುಗ್ಗಿಬಿಡುತ್ತಾನೆ. ಹಾಗೆ ಆತ್ಮನು ಕುಗ್ಗುವಂತಿಲ್ಲ. ಏಕೆಂದರೆ ಅವನದು ಎಂಬುದು ಯಾವದೂ ಇರುವದಿಲ್ಲ. ಆದ್ದರಿಂದ ನಾರಾಯಣನು ಆತ್ಮನಾಗಿದ್ದು ಅನಂತನೂ ಆಗಿರುವದರಿಂದ ಅವ್ಯಯಸ್ವರೂಪನಾಗಿರುವನು. ನಾರಾಯಣನಿಗಿಂತ ಬೇರೆಯಾದ ವಸ್ತುವೇ ಇಲ್ಲವಾದ್ದರಿಂದ ಹೇಗೂ ಯಾವ ರೀತಿಯಿಂದಲೂ ವಿಕಾರವು ಅವನಿಗೆ ಸಂಭವಿಸುವಂತಿಲ್ಲ. ಆದ್ದರಿಂದಲೂ ಅವ್ಯಯನು-ಎಂದಭಿಪ್ರಾಯ. ತನ್ನೊಳಗೇ ವಿಕಾರವಾಗಬಹುದಲ್ಲ, ಎಂದು ಯಾರಾದರೂ ಶಂಕಿಸಬಹುದಾದರೂ ವಿಕಾರವಾದರೆ ವಿನಾಶವು ಖಚಿತವಾಗುತ್ತದೆ. ತಾನೇ ತನ್ನನ್ನೇ ವಿನಾಶಮಾಡಿಕೊಂಡನು-ಎಂದು ಹೇಳಬರುವದಿಲ್ಲ. ಏಕೆಂದರೆ ವಿನಾಶಕ್ಕೆ ಸಾಕ್ಷಿಯಾದವನು ವಿನಾಶವಿಷಯನಾಗಲಾರನು. ಆದ್ದರಿಂದ ಈಶ್ವರನೇ ಆದರೂ ತಾನು ತನ್ನನ್ನು ನಾಶಮಾಡಿಕೊಳ್ಳಲಾರನು. ಹೀಗೆ ವಿಚಾರಮಾಡಿದಲ್ಲಿ ಅವ್ಯಯನಾದ ನಾರಾಯಣನು ನಿತ್ಯಶುದ್ಧಬುದ್ಧಮುಕ್ತನೂ ಅಚ್ಯುತನೂ ಆಗಿರುವನೆಂದು ತಿಳಿದುಬರುತ್ತದೆ. ಇಂಥ ನಾರಾಯಣನನ್ನು ಅರಿತುಕೊಂಡವನು ತಾನೂ ಅದೇ ರೀತಿಯಾಗಿಬಿಡುವನು- ಎಂದು ತಿಳಿಯಬೇಕು.

ಈಗ ನಾರಾಯಣನು 'ಕವಿ' ಯಾಗಿರುವನೆಂಬುದನ್ನು ವಿಚಾರ ಮಾಡೋಣ. ಈಗಿನ ಕಾಲಕ್ಕೆ ಕವಿ ಎಂದರೆ ಕಾವ್ಯ-ಸಾಹಿತ್ಯ ರಚನೆಮಾಡುವವನು ಎಂದು ರೂಢಿಯಲ್ಲಿದೆ. ಆದರೆ ಉಪನಿಷತ್ತಿನ ಪ್ರಕಾರ ಕವಿ-ಎಂದರೆ ಕ್ರಾಂತದರ್ಶಿ-ಕಳೆದುಹೋದದ್ದನ್ನೂ, ಕಣ್ಣಿಗೆ ಕಾಣದ್ದನ್ನೂ ಇಂದ್ರಿಯಗೋಚರವಲ್ಲದ್ದನ್ನೂ ಎಲ್ಲವನ್ನೂ ಬಲ್ಲವನು, ಸರ್ವಜ್ಞನು ಎಂದರ್ಥ. ಈ ಅಭಿಪ್ರಾಯದಂತೆ ಪರಮಾತ್ಮನೊಬ್ಬನೇ ಕವಿಯು. ಉಳಿದವರೆಲ್ಲ ಕಪಿಗಳೆಂದರೂ ಯುಕ್ತವಾದೀತು. ಒಂದು ವೇಳೆ ಯಾರಾದರೂ ಕವಿಗಳಲ್ಲಿ ಅತ್ಯದ್ಭುತವಾದ ಕಾವ್ಯರಚನಾ ಸಾಮರ್ಥ್ಯವೂ ಕಲ್ಪನಾಶಕ್ತಿಯೂ ವರ್ಣನಾವೈಖರಿಯೂ ಚಿಂತನಶೀಲತೆಯೂ ತತ್ತ್ವದರ್ಶನನಿಷ್ಠೆಯೂ ಸರ್ವಧರ್ಮಸಮನ್ವಯವೂ ಕಂಡುಬಂದಲ್ಲಿ ಅದು

ಭಗವಂತನ ಅಂಶವೇ-ವಿಭೂತಿಯೇ ಎಂದು ತಿಳಿಯಬೇಕು. ಏಕೆಂದರೆ ನಾರಾಯಣನ ಕೃಪೆಯಿಲ್ಲದೆ ಯಾವನೂ ಸರ್ವವಿದನೂ ಕವಿಯೂ ಆಗಲಾರನು. ಮುಖ್ಯಾರ್ಥದಲ್ಲಿ ಮಾತ್ರ ಸರ್ವಜ್ಞನೂ, ಸರ್ವವಿದನೂ ಆದ ನಾರಾಯಣನನ್ನು ಬಿಟ್ಟು ಬೇರೆ ಯಾವ ಕವಿಗಳೂ ಎಲ್ಲಿಯೂ ಇರುವದಿಲ್ಲ. ಹಾಗೆಯೇ ನಾರಾಯಣನು ಸಮುದ್ರದ ಆಚೆಯಿರುವವನು ಎಂದೂ ಉಪನಿಷತ್ತು ತಿಳಿಸುತ್ತಿದೆ. ಇಲ್ಲಿ ಸಮುದ್ರವೆಂದರೆ ಸಂಸಾರವೆಂದರ್ಥ. ಐತರೇಯೋಪನಿಷತ್ತಿನಲ್ಲಿ ಭಗವಂತನು ತಾನು ಸೃಷ್ಟಿಮಾಡಿದ ಜೀವರುಗಳನ್ನೆಲ್ಲ ಸಮುದ್ರದಲ್ಲಿ ಕೆಡವಿದನು-ಎಂದು ತಿಳಿಸಿದೆ. ದೇವತೆಗಳೂ ಇದಕ್ಕೆ ಹೊರತಲ್ಲ. ಭಗವಂತನೊಬ್ಬನು ಮಾತ್ರ ಸಂಸಾರಾರ್ಣವವನ್ನು ದಾಟಿರುತ್ತಾನೆ. ಆದರೆ ಕೃಪಾವಶನಾಗಿ ತನ್ನನ್ನು ಶರಣಾಗತರಾದ ಜೀವರುಗಳನ್ನೂ ಸಂಸಾರದಿಂದ ದಾಟಿಸುತ್ತಲೂ ಇರುತ್ತಾನೆ. ಸಂಸಾರಸಮುದ್ರವನ್ನೇಕೆ ಸೃಷ್ಟಿಸಬೇಕು ? ಅದರಲ್ಲಿ ಜೀವರುಗಳನ್ನೇಕೆ ಎಸೆಯಬೇಕು ? ಎಂದರೆ ಭಗವಂತನು ತಾನಾಗಿಯೇ ಹೀಗೆ ಮಾಡುವದಿಲ್ಲ. ಅನಾದಿಯಾಗಿರುವ ಸಂಸಾರದಲ್ಲಿ ಜೀವರುಗಳು ಹಿಂದುಹಿಂದಿನ ಸೃಷ್ಟಿಯಲ್ಲಿ ಮಾಡಿರುವ ಪಾಪಪುಣ್ಯಗಳಿಗೆ ಅನುಗುಣವಾಗಿ ಮುಂದುಮುಂದಿನ ಸೃಷ್ಟಿಯಾಗಲೇಬೇಕಾಗಿದೆ. ಇಲ್ಲವಾದರೆ ಮಾಡಿದ ಕರ್ಮಕ್ಕೆ ಫಲವಿಲ್ಲವೆಂದಾಗಿಬಿಡುವದು. ಈ ವ್ಯವಹಾರ ದೃಷ್ಟಿ ಅಥವಾ ಅವಿದ್ಯಾದೃಷ್ಟಿಯ ವಶದಿಂದ ಭಗವಂತನು ಸಂಸಾರವನ್ನು ಸೃಷ್ಟಿಸುವನೆಂದು ಹೇಳುತ್ತಾರೆ. ಆದರೆ ಆತನು ಮಾತ್ರ ಎಂದಿಗೂ ಈ ಸಂಸಾರ ಸಂಬಂಧವುಳ್ಳವನಾಗಿರುವದಿಲ್ಲ.

ಇನ್ನು ಭಗವಂತನು ವಿಶ್ವಶಂಭವನೂ ಆಗಿರುವನು. ವಿಶ್ವಕ್ಕೆಲ್ಲ ಶಂ ಎಂದರೆ ಸುಖವನ್ನು ಭವ ಉಂಟುಮಾಡುವವನು-ಎಂದರ್ಥ. ರುದ್ರಾಧ್ಯಾಯದಲ್ಲಿ ಶಂಭು-ಶಂಕರ-ಶಿವ-ಶಿವತರ ಎಂಬ ನಾಮಗಳಿಂದ ಭಗವಂತನನ್ನು ಸ್ತುತಿಸಿರುವದೂ ಇದೇ ಅರ್ಥದಲ್ಲಿಯೇ-ಎಂದು ತಿಳಿಯಬೇಕು. ಜಗತ್ತಿನಲ್ಲಿ ಏನಾದರೂ ಒಳ್ಳೆಯದು ಇದ್ದರೆ ಅದು ಭಗವಂತನ ಅಂಶವೇ. ಯಾವದೇ ಜೀವರಿಗಾದರೂ ಸುಖವು ದೊರಕಿದ್ದರೆ ಅದು ಪರಮೇಶ್ವರನ ಪ್ರಸಾದವೇ ಆಗಿರುವದು. ಆದ್ದರಿಂದ ಸುಖವನ್ನು ಬಯಸುವ ಪ್ರತಿಯೊಬ್ಬನೂ ವಿಶ್ವಶಂಭವನಾದ ನಾರಾಯಣನನ್ನೇ ಬಳಿಸಾರಬೇಕು-ಎಂದು ಅಭಿಪ್ರಾಯ.

ಈಗ ನಾರಾಯಣನ ಉಪಾಸನೆಯನ್ನು ಎಲ್ಲಿ ಮಾಡಬೇಕೆಂಬುದನ್ನು ತಿಳಿಸುತ್ತಾರೆ. ಉಪಾಸನೆ ಎಂದರೆ ಧ್ಯಾನ, ಚಿಂತನೆ, ಎಂದರ್ಥ. ನಾರಾಯಣನು ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿಕೊಂಡಿದ್ದು ಎಲ್ಲವೂ ಅವನೇ ಆಗಿರುವದರಿಂದ ಯಾವಾಗ ಎಲ್ಲಿ ಏನನ್ನು ಚಿಂತಿಸಿದರೂ ನಾರಾಯಣನ ಉಪಾಸನೆಯೇ ಆಗಿರಬೇಕಲ್ಲವೆ ? ಎಂದರೆ ನಿಜ. ಹಾಗೆ ಸರ್ವವೂ ನಾರಾಯಣ-ಎಂಬ ಭಾವನೆಯುಳ್ಳವರು ಎಷ್ಟು ಜನರಿದ್ದಾರು? ಬಹಳ ಜನರಿಗೆ ತಾವು ಯಾರೆಂದಾಗಲಿ, ಭಗವಂತನೆಂದರೆ ಯಾರೆಂದಾಗಲಿ ತಿಳಿದಿರುವದಿಲ್ಲ. ಆದ್ದರಿಂದ ಮಂದಮಧ್ಯ-ಮಾಧಿಕಾರಿಗಳಿಗಾಗಿ ನಾರಾಯಣನನ್ನು ಉಪಾಸ್ಯನೆಂದು ಬೇರೆಯಾಗಿ ಕಲ್ಪಿಸಿ ಅವನನ್ನು ಉತ್ತಮವಾಸಸ್ಥಾನವಾದ ಹೃದಯಾಕಾಶದಲ್ಲಿ ಧ್ಯಾನಿಸಬೇಕೆಂದು ತಿಳಿಸುತ್ತಾರೆ. ನಾರಾಯಣನು ಪರಮಪವಿತ್ರನಾಗಿರುವದರಿಂದ ಅವನನ್ನು ಹೃದಯಾಕಾಶವೆಂಬ ಪವಿತ್ರಜಾಗದಲ್ಲಿ ಉಪಾಸನೆಮಾಡುವದೇ ಯುಕ್ತವಾಗಿರುತ್ತದೆ. ಹೃದಯದಲ್ಲಿ ಚಿಂತಿಸುವದು ಸಹ ಸುಲಭವೇನಲ್ಲ. ಹೃದಯವೆಂದರೆ ಯಾವದು ? ಎಂಬಿದನ್ನು ಇಲ್ಲಿ ಉಪಮಾನದಿಂದ ತಿಳಿಸಿದ್ದಾರೆ. ಕಮಲದ ಹೂವಿನ ನಡುವೆ ಇರುವ ಛಿದ್ರ ಅಥವಾ ಆಕಾಶವು ಯಾವದುಂಟೋ ಅದರಂತೆ ಇರುವ ಹೃದಯಾಕಾಶದಲ್ಲಿ ನಾರಾಯಣನನ್ನು ಚಿಂತಿಸಬೇಕೆಂದು ಅಭಿಪ್ರಾಯ. ಉಪನಿಷತ್ತಿನ ದೃಷ್ಟಿಯಿಂದ ನಮ್ಮ ಶರೀರವು 'ಬ್ರಹ್ಮಪುರ'ವೆನಿಸಿರುವದು. ನಾವು ಈ ಶರೀರವನ್ನು ಕೇವಲ ಭೌತಿಕವಾಗಿ ನೋಡುತ್ತಾ ವಿಷಯಭೋಗಗಳ ಉಪಯೋಗಕ್ಕೆ ವಿನಿಯೋಗಿಸಿದ್ದೇವೆ. ಆದರೆ ದೇವರು ನಮಗೆ ಇಷ್ಟೇ ಉದ್ದೇಶಕ್ಕಾಗಿ ಶರೀರವನ್ನು ಕೊಡಲಿಲ್ಲ. 'ಇಮಂ ಪ್ರಾಪ್ಯ ಭಜಸ್ವ ಮಾಮ್' ಎಂದಂತೆ ಈ ದೇಹವನ್ನು ಪಡೆದುಕೊಂಡು ಭಗವಂತನನ್ನು ಭಜಿಸಬೇಕೆಂಬುದು ಶಾಸ್ತ್ರಗಳ ಅಭಿಪ್ರಾಯ. ಆ ದೃಷ್ಟಿಯಿಂದ ಶರೀರವನ್ನೇ ನಾವು ಭಗವನ್ಮಯವಾಗಿ ಮಾಡಿಕೊಳ್ಳಬೇಕು. ಮಹಾನ್ಯಾಸಗಳಿಂದ ದೇಹವನ್ನು 'ರೌದ್ರೀಕರಣ' (ರುದ್ರಮಯವಾಗಿ ಮಾಡಿಕೊಳ್ಳುವಿಕೆ)ಯನ್ನು ನೀವು ಕೇಳಿರಬಹುದು. ಹೀಗೆ ದೇಹವು ಬ್ರಹ್ಮಪುರವೆನಿಸಿದ್ದು ಇದರ ಮಧ್ಯದಲ್ಲಿ ಹೃದಯಕಮಲವಿರುವದು. ಹೃದಯವೆಂದರೆ ಕಮಲದ ಮೊಗ್ಗಿನಂತಿರುವ ಮಾಂಸಪಿಂಡವೆಂದೂ ಅದು ಪ್ರಾಣಗಳಿಗೆ ಆಶ್ರಯವೂ ಅನೇಕ ನಾಡಿಗಳ ರಂಧ್ರಗಳುಳ್ಳದ್ದೂ ಆಗಿ ಮೇಲಕ್ಕೆ ನಾಳವೂ ಕೆಳಕ್ಕೆ ಮುಖವೂ ಉಳ್ಳದ್ದಾಗಿರುವದೆಂದೂ ಪ್ರಾಣಿಗಳನ್ನು ಕೊಂದಾಗ ಪ್ರಸಿದ್ಧವಾಗಿ

ಕಂಡುಬರುವದೆಂದೂ ಶ್ರೀಶಂಕರಾಚಾರ್ಯರು ತಿಳಿಸಿದ್ದಾರೆ. ಇಂಥ ಹೃದಯ ಪದ್ಮವು ಮನುಷ್ಯದೇಹದಲ್ಲಿ ತಲೆಕೆಳಗಾಗಿ ರಚಿತವಾಗಿರುವದು. ಲೌಕಿಕವಾದ ಪದ್ಮಪುಷ್ಪವು ಕೆಳಗಡೆ ನಾಳವುಳ್ಳದ್ದಾಗಿ ಊರ್ಧ್ವಮುಖವಾಗಿರುವದು ಪ್ರಸಿದ್ಧ ವಾಗಿದೆ. ಹೃದಯಪದ್ಮವು ಮಾತ್ರ ಅಧೋಮುಖವಾಗಿದೆ. ಇಂಥ ಹೃದಯದಲ್ಲಿ ನಾರಾಯಣನ ಚಿಂತನೆಯು ವಿಧಿಸಲ್ಪಟ್ಟಿದೆ. ಹೃದಯದ ವಿಷಯಕ್ಕೆ ಹೆಚ್ಚಿನ ವಿವರಗಳಿಗಾಗಿ ಮುಂದಿನ ಮಂತ್ರವನ್ನು ನೋಡೋಣ.

**ಅಧೋ ನಿಷ್ಟ್ಯಾ ವಿತಸ್ತ್ಯಾಂತೇ ನಾಭ್ಯಾಮುಪರಿ ತಿಷ್ಠತಿ ।**
**[1]ಹೃದಯಂ ತದ್ವಿಜಾನೀಯಾದ್ ವಿಶ್ವಸ್ಯಾಯತನಂ ಮಹತ್ ॥ ೭ ॥**

ಈ ಮಂತ್ರದಲ್ಲಿ ಹೃದಯವು ಮನುಷ್ಯಶರೀರದಲ್ಲಿ ಎಲ್ಲಿದೆ ? ಎಂಬುದನ್ನು ತಿಳಿಸುತ್ತಾರೆ. ನಿಷ್ಟಿ ಎಂದರೆ ಕುತ್ತಿಗೆಯ ಬುಡದ ಭಾಗ. ಅದರಿಂದ ಕೆಳಗೆ- ಆದರೆ ಹೊಕ್ಕುಳಿನಿಂದ ಮೇಲಕ್ಕೆ ವಿತಸ್ತಿಯ ತುದಿಯಲ್ಲಿ ಹೃದಯವಿದೆ- ಎಂದಭಿಪ್ರಾಯ. ವಿತಸ್ತಿ ಎಂಬಿದು ಹನ್ನೆರಡು ಅಂಗುಲಗಳಷ್ಟು ಶರೀರಮಧ್ಯಭಾಗವು. ನಾಭಿಯಿಂದ ಮೇಲಕ್ಕೆ ಹನ್ನೆರಡು ಅಂಗುಲಗಳ ತುದಿಯಲ್ಲಿ ಈ ಹೃದಯವು ವಿರಾಜಮಾನ ವಾಗಿರುವದು. ಅಂತೂ ನಿಷ್ಟಿಗೂ ನಾಭಿಗೂ ನಡುವೆ ಇರುವದೇ ಹೃದಯವೆಂದು ತಿಳಿಯಬೇಕೆಂದೂ ಅದು ವಿಶ್ವನ ದೊಡ್ಡ ಮನೆಯೆಂದೂ ಉಪನಿಷತ್ತು ಸ್ಪಷ್ಟಪಡಿಸುತ್ತಿದೆ. ಮನುಷ್ಯನ ವ್ಯವಹಾರವೆಲ್ಲ ಈಗ ನೆತ್ತಿಗೇರಿದ್ದು ತಲೆಯನ್ನು ಮಾತ್ರ ಅವನು ಉಪಯೋಗಿಸುತ್ತಿದ್ದಾನೆಯೇ ಹೊರತು ಹೃದಯದ ಕಡೆಗೆ ಗಮನವನ್ನು ಹರಿಸಿರುವದಿಲ್ಲ. ತಲೆಯಲ್ಲಿರುವ ಮೆದುಳು ಅವನನ್ನು ಉಳಿದೆಲ್ಲರಿ ಗಿಂತ ಶ್ರೇಷ್ಠನೆಂತಲೂ ತಾನೊಬ್ಬನೇ ಜಾಣನೆಂದೂ ತನಗೇ ಎಲ್ಲವೂ ಅಧೀನ ವಾಗಿರಬೇಕೆಂದೂ ಎಲ್ಲವನ್ನೂ ತಾನೇ ವಶಪಡಿಸಿಕೊಂಡು ಸುಖಿಸಬೇಕೆಂದೂ ಪ್ರೇರಿಸುತ್ತಿರುವದು. ಇದೇ ಅಹಂಕಾರವು. ಈ ಅಹಂಕಾರದ ಅಮಲಿನಲ್ಲಿ ಅವನ ತಲೆಯಲ್ಲಿ ನಾರಾಯಣನ ಕಲ್ಪನೆಯಾದರೂ ಬರುವದು ಹೇಗಾದೀತು? ಆದ್ದರಿಂದ ಅಧ್ಯಾತ್ಮಶಾಸ್ತ್ರಕಾರರು ತಲೆಗಿಂತ ಹೃದಯವೇ ನಾರಾಯಣನ ಉಪಾಸನೆಗೆ ತಕ್ಕ ಸ್ಥಾನವೆಂದು ತಿಳಿಸಿದ್ದಾರೆ. ಹೃದಯದ ಅಂತರ್ಗತವಾದ ಆಕಾಶವು ನಿಜವಾಗಿ ನಾರಾಯಣನ ಸಾನ್ನಿಧ್ಯವುಳ್ಳ ಜಾಗವು, ನಮ್ಮ ಆತ್ಮಸ್ವರೂಪವು ನಾರಾಯಣನೇ

1. ''ಜ್ವಾಲಮಾಲಾಕುಲಂಭಾತಿ'' ಎಂದು ಆಂಧ್ರಪಾಠ

ಆಗಿರುವದರಿಂದ ಮನುಷ್ಯನು ಬದುಕಿರುವದು ಹೃದಯಾಂತರ್ಗತನಾದ ನಾರಾಯಣಾತ್ಮನ ಸನ್ನಿಧಿಯಿಂದಲೇ ಎಂಬಿದು ನಿತ್ಯಸತ್ಯವಾಗಿದೆ. ತಲೆಕೆಟ್ಟರೂ ಮನುಷ್ಯನು ಹುಚ್ಚುಹುಚ್ಚಾಗಿಯಾದರೂ ಜೀವಿಸಿರಬಹುದು. ಆದರೆ ಹೃದಯವು ಸ್ತಬ್ಧವಾದರೆ ಬದುಕಲಾರನು. ಈ ಕಾರಣದಿಂದಲೇ ಹೃದಯಾಕಾಶವೇ ಪರಬ್ರಹ್ಮದ ಉಪಾಸನೆಗೆ ತಕ್ಕದ್ದೆಂದು ಗೊತ್ತುಪಡಿಸಲಾಗಿದೆ. ಆದರೆ ಹೃದಯವೇ ನಾರಾಯಣ ನಲ್ಲ. ಡಬ್ಬಿಯೇ ಒಡವೆಯಲ್ಲ. ಡಬ್ಬಿಯಲ್ಲಿರುವ, ಡಬ್ಬಿಗಿಂತ ಸಾವಿರಪಾಲು ಬೆಲೆಬಾಳುವ, ಡಬ್ಬಿಗಿಂತ ಹೊಳೆಯುತ್ತಿರುವ ತೂಕವಾದ ವಜ್ರವು ಬೇರೆಯಾಗಿರು ವಂತೆ ಹೃದಯಾಕಾಶದಲ್ಲಿ ಕಂಡುಬರುವ ನಾರಾಯಣನೆಂಬ ಮಾಣಿಕ್ಯವು ಎಂದೆಂದೂ ಅಳಿಯದ, ಹಿಗ್ಗದ, ಕುಗ್ಗದ, ಅಮೂಲ್ಯವಜ್ರವಾಗಿರುವದು. ಅದನ್ನು ಪಡೆದುಕೊಂಡಾಗಲೇ ಮಾನವನು ಅಮೃತನಾಗುವನು. ಉಪಾಸಕನಾದವನು ಉಪಾಯದಿಂದ ತನ್ನ ಮನಸ್ಸನ್ನು ನೆತ್ತಿಯಿಂದ ಹೃದಯಕ್ಕೆ ವರ್ಗಾಯಿಸಿಕೊಂಡು ಅದನ್ನು ಹದಗೊಳಿಸಿ ಹೃದಯಾಕಾಶದಲ್ಲಿ ನೆಲೆಗೊಳಿಸಿದ್ದೇ ಆದರೆ ಅದು ನಾರಾಯಣನಲ್ಲೇ ಲಯವಾಗಿಬಿಟ್ಟಾಗ ಅಮೃತತ್ವವನ್ನೇ ಪಡೆದುಕೊಳ್ಳುವನು- ಎಂದು ತಿಳಿಯಬೇಕು.

**ಸಂತತಂ ಶಿಲಾಭಿಸ್ತು ಲಂಬತ್ಯಾಕೋಶಸನ್ನಿಭಮ್ ।**
**ತಸ್ಯಾಂತೇ ಸುಷಿರಂ ಸೂಕ್ಷ್ಮಂ ತಸ್ಮಿನ್ ಸರ್ವಂ ಪ್ರತಿಷ್ಠಿತಮ್ ॥ ೮ ॥**

ಈ ಮಂತ್ರದಲ್ಲಿ ಹೃದಯಕಮಲದ ವಿಷಯವನ್ನು ಮೊದಲು ಪ್ರಸ್ತಾಪಿಸಿ ಅನಂತರ ಸುಷುಮ್ನಾನಾಡಿಯ ವಿಚಾರವನ್ನು ಹೇಳಿದೆ. ಯೋಗಶಾಸ್ತ್ರದ ಪ್ರಕ್ರಿಯೆ ಗಳೆಲ್ಲವೂ ಅದರಲ್ಲಿ ವಿಶ್ವಾಸವಿಟ್ಟು ಸಾಧನೆಮಾಡುವವರಿಗೆ ಮಾತ್ರ ಅರ್ಥವಾಗು ವವು. ಮತ್ತು ಯೋಗಿಗಳ ಅನುಭವಗಳೂ ವೈಯಕ್ತಿಕವೇ ಆದ್ದರಿಂದ ಅಧ್ಯಾತ್ಮ ವಿಚಾರದಂತೆ ಸರ್ವಾನುಭವಗೋಚರವಾಗಿ ಇವುಗಳನ್ನು ವಿವರಿಸಲಾಗುವದಿಲ್ಲ. ಸಂಗೀತಕಚೇರಿಯು ನಡೆಯುತ್ತಿರುವಾಗ ತಾಳವು ತಪ್ಪಿದರೆ ಅದು ಹೇಗೆ ಲಯ ಜ್ಞಾನವುಳ್ಳವರಿಗೆ ಮಾತ್ರ ಅರ್ಥವಾದೀತೋ ಜನಸಾಮಾನ್ಯರಿಗೆಲ್ಲ ತಿಳಿಯ ಲಾರದೋ ಹಾಗೆಯೇ ಈ ಹೃದಯೋಪಾಸನೆಯ ವಿಷಯಗಳು ಯೋಗವಿದರಿಗೆ ಮಾತ್ರವೇ ತಿಳಿಯುವವು. ಆದರೂ ಉಳಿದವರೂ ಸ್ವಲ್ಪಮಟ್ಟಿಗೆ ಪರಿಚಯಕ್ಕಾಗಿ ವಿಚಾರಮಾಡಬಹುದಾಗಿದೆ. ಪ್ರಕೃತ- 'ಆಕೋಶಸನ್ನಿಭಮ್' ಎಂಬುದಕ್ಕೆ ಭಾಷ್ಯಕಾರರು ಮಾಡಿರುವ ಅರ್ಥವೇನೆಂದರೆ : ಪದ್ಮದ ಮೊಗ್ಗಿನಂತೆ ಜೋತು

ಬಿದ್ದಿರುವ ಹೃದಯದ ಭಾಗವು ಎಂದು ತಿಳಿಯಬೇಕು. ಶರೀರದ ಮಧ್ಯದಲ್ಲಿ ತಲೆಕೆಳಗಾಗಿ ಈ ಪದ್ಮದ ಮೊಗ್ಗು ಜೋತುಬಿದ್ದಿರುವದು. ಅದು ಶಿಲಾ (ಸಿರಾ) ಗಳಿಂದ- ನಾಡಿಗಳಿಂದ ಸುತ್ತಲೂ ವ್ಯಾಪ್ತವಾಗಿರುವದು. ಹೃದಯವು ಅನೇಕ ನಾಡಿಗಳ ರಂಧ್ರವುಳ್ಳದ್ದೆಂದು ಪ್ರಸಿದ್ಧಿಯಿದೆ. ೭೨ ಸಾವಿರ ನಾಡಿಗಳು ಮನುಷ್ಯ ದೇಹದಲ್ಲಿವೆಯೆಂದೂ ಕೂದಲಿನ ಎಳೆಯನ್ನು ಸಾವಿರಪಾಲು ಮಾಡಿದರೆ ಆಗುವಷ್ಟು ಸೂಕ್ಷ್ಮವಾದ ಅಳತೆಯ ನಾಡಿಗಳಿರುವವೆಂದೂ ಅವುಗಳಲ್ಲೆಲ್ಲ ಒಂದು ನೂರೊಂದು ನಾಡಿಗಳು ಮಾತ್ರ ಪ್ರಧಾನವಾದವುಗಳಾಗಿದ್ದು ಸುಷುಮ್ನಾ ಎಂಬು ದೊಂದು ಮಾತ್ರ ಊರ್ಧ್ವಮುಖವಾಗಿದ್ದು ಬ್ರಹ್ಮರಂಧ್ರವನ್ನು ಹೊಕ್ಕಿರುವದೆಂದೂ ಉಪನಿಷತ್ತುಗಳಲ್ಲಿ ತಿಳಿಸಿದೆ. ಇವು ಯಾವ ದುರ್ಬೀನುಗಳಿಗೂ ಗೋಚರವಾಗುವ ಸಂಭವವಿಲ್ಲವಾದ್ದರಿಂದ ಈಗಿನ ವೈದ್ಯರು ವ್ಯರ್ಥವಾದ ಪ್ರಯತ್ನವನ್ನು ಮಾಡುವ ಅಗತ್ಯವಿಲ್ಲ. ಇಂಥ ನಾಡಿಗಳಲ್ಲಿ ಹೃದಯದ ತುದಿಯಲ್ಲಿದ್ದುಕೊಂಡಿರುವ ಸುಷುಮ್ನಾನಾಡಿಯ ರಂಧ್ರವೊಂದಿರುವದು. ಆ ರಂಧ್ರವನ್ನು ಹೃದಯಾಕಾಶ ವೆನ್ನುವರು. ಅದು ಅತಿಸೂಕ್ಷ್ಮವಾಗಿರುವದೆಂದು ಹೇಳಬೇಕಾದದ್ದೇ ಇಲ್ಲ. ಈ ಹಾರ್ದಾಕಾಶದಲ್ಲಿ 'ಸರ್ವಂ ಪ್ರತಿಷ್ಠಿತಮ್' ಎಲ್ಲವೂ ಇದ್ದುಕೊಂಡಿರುವದು- ಎಂದು ಇಲ್ಲಿ ತಿಳಿಸಲಾಗಿದೆ. ಹೇಗೆಂದರೆ : ನಮ್ಮ ಮನಸ್ಸು ಈ ಹೃದಯಾಕಾಶವನ್ನು ಪ್ರವೇಶಿಸಲಾಗಿ ಅಲ್ಲಿ ಪರಬ್ರಹ್ಮವು ಕಂಡುಬರುವದರಿಂದ ಹಾಗೂ ಪರಬ್ರಹ್ಮವೇ ಸರ್ವವೂ ಆಗಿರುವದರಿಂದ ಹೃದಯದಲ್ಲಿರುವ ಆಕಾಶದಲ್ಲಿ ಸರ್ವವೂ ಇದ್ದಂತಾಯಿತು.

**ತಸ್ಯ ಮಧ್ಯೇ ಮಹಾನಗ್ನಿರ್ವಿಶ್ವಾರ್ಚಿರ್ವಿಶ್ವತೋ ಮುಖಃ ।**
**ಸೋಽಗ್ರಭುಗ್ ವಿಭಜನ್ ತಿಷ್ಠನ್ ಆಹಾರಮಜರಃ ಕವಿಃ ॥೯॥**

ಈ ಮಂತ್ರದಲ್ಲಿ ಉಪಾಸ್ಯನಾದ ಭಗವಂತನ ಸ್ವರೂಪವನ್ನು ಪರಿಚಯ ಮಾಡಿಕೊಡಲಾಗಿದೆ. ಭಗವಂತನು ನಮ್ಮ ಆತ್ಮನೇ- ಎಂಬುದು ಉಪನಿಷತ್ತುಗಳ ಪರಮೋಪದೇಶವು. ಆತ್ಮನೆಂದರೆ 'ಆಪ್ನೋತಿ ಇತ್ಯಾತ್ಮಾ' ಎಂಬಂತೆ ಎಲ್ಲವೂ ಆಗಿರುವವನು. ವ್ಯವಹಾರನಿರತರಾದ ಜನರು ಕೂಡ ಪ್ರತಿದಿನವೂ ಪ್ರತಿ ಸಂದರ್ಭಕ್ಕೂ ಈ ಆತ್ಮನನ್ನೇ ಬಳಸಿಕೊಳ್ಳುತ್ತಾರೆ. ಆದರೆ ಅವರಿಗೆ ಅದು ಗೊತ್ತಿಲ್ಲ. ಹೇಗೆಂದರೆ : ಒಬ್ಬನು 'ನನ್ನ ಸರ್ವಸ್ವವೂ ಹಣವೇ. ಅದೇ ನನ್ನ ಆತ್ಮ' ಎನ್ನುತ್ತಾನೆಂದಿಟ್ಟುಕೊಳ್ಳಿರಿ. ಇಲ್ಲಿ ಸರ್ವಸ್ವ-ಆತ್ಮ-ಶಬ್ದಗಳು ವೇದಾಂತದಿಂದ

ಎರವಲು ಪಡೆದು ಬಳಸಿದ ಶಬ್ದಗಳೇ ಆಗಿವೆ. ಮುಂದುವರೆದು ಅವನು 'ಹಣವೇ ನನ್ನ ಪ್ರಾಣ, ಅದೇ ನನ್ನ ಜೀವನ' ಎನ್ನುತ್ತಾನೆ- ಎಂದಿಟ್ಟುಕೊಳ್ಳಿರಿ. ಇಲ್ಲಿಯೂ ಪ್ರಾಣ-ಜೀವನಶಬ್ದಗಳು ಅಧ್ಯಾತ್ಮವಸ್ತುವಾಚಕಗಳೇ ಹೊರತು ಭೌತಿಕವಸ್ತುವಾಚಕಗಳಲ್ಲ. ಮತ್ತೊಬ್ಬನು 'ಹಣವಿದ್ದರೇ ಸುಖ ; ಅದಿಲ್ಲವಾದರೆ ನಾನೇಕೆ ?' ಎಂದು ಹೇಳಿದನೆಂತ ಭಾವಿಸೋಣ. ಇಲ್ಲಿಯೂ 'ಸುಖ-ನಾನು'ಗಳು ಅಧ್ಯಾತ್ಮ ವಸ್ತು ಪ್ರತಿಪಾದಕವಾದ ಶಬ್ದಗಳಾಗಿವೆ. ಇವುಗಳೆಲ್ಲದರ ಮೂಲವನ್ನು ಹೀಗೆಯೇ ಹುಡುಕುತ್ತಾ ಹೋದಾಗ ಪ್ರತಿಯೊಬ್ಬನೂ ವ್ಯವಹಾರವೆಂಬ ಅನಾತ್ಮದಿಂದ ದಾಟಿ ಪರಮಾರ್ಥವಾದ ತನ್ನ ಸ್ವರೂಪಕ್ಕೇ ಧಾವಿಸಲು ಹವಣಿಸುತ್ತಿರುವನೆಂದು ಗೊತ್ತಾಗುವದು. ಏಕೆಂದರೆ ಸುಖವಿರುವದು ಅಲ್ಲಿಯೇ. ಯಾವದೇ ಭೌತಿಕ ಪದಾರ್ಥಗಳನ್ನು ಎಷ್ಟೇ ಕೂಡಿಹಾಕಿದಮೇಲೂ ಸುಖವೆಂಬುದು ಸಿಗಬೇಕಾದರೆ ತನ್ನ ಆತ್ಮನಲ್ಲಿ ತಾನು ನೆಲೆನಿಂತಾಗಲೇ ಎಂಬುದು ನಿತ್ಯಸತ್ಯವು. ಈ ಆತ್ಮನು ಎಲ್ಲವೂ ಆಗಿರುವದರಿಂದಲೇ ಬ್ರಹ್ಮವೆಂದು ಕರೆಯಲ್ಪಟ್ಟಿದೆ. ಹೀಗೆ ಭಗವಂತನು ಬ್ರಹ್ಮವಾಗಿದ್ದು-ಬ್ರಹ್ಮವು ನಮ್ಮ ಆತ್ಮನಾಗಿದ್ದು ಆತ್ಮನು ತಾನೊಬ್ಬನೇ ಎಲ್ಲವೂ ಆಗಿರುವದರಿಂದ ತಾನು-ತನ್ನನ್ನು-ತನ್ನಲ್ಲಿಯೇ ಕಂಡುಕೊಂಡಹೊರತು ನಿತ್ಯ ಸುಖವು ಹೇಗೆ ದೊರಕೀತು ? ಪ್ರಾರಂಭಕ್ಕೆ ಈ ಸುಖಸ್ವರೂಪವನ್ನು ತನಗಿಂತ ಬೇರೆಯಾಗಿ ಭಾವಿಸಿ ಹೊರಗಿನ ಉಪಾಧಿಗಳಲ್ಲಿ ಚಿಂತಿಸುವಂತೆಯೂ ಅನಂತರ ಮನಸ್ಸು ಸ್ವಾಧೀನಕ್ಕೆ ಸಿಕ್ಕಾಗ ಅದನ್ನು ಪುನಃ ಸ್ವಸ್ವರೂಪದಲ್ಲಿಯೇ ಲಯಗೊಳಿಸಲು ಪ್ರಯತ್ನಿಸಬೇಕೆಂದೂ ಶಾಸ್ತ್ರಗಳು ತಿಳಿಸುವವು. ಇಂಥ ಸಂದರ್ಭದಲ್ಲಿ ಈ ಉಪಾಸನೆ-ಯೋಗಗಳು ಉಪಯೋಗವಾಗುವವು. ಈವರೆಗೆ ವರ್ಣಿಸಿದ ಹೃದಯಾಕಾಶದ ತುದಿಯಲ್ಲಿರುವ ಸುಷುಮ್ನಾನಾಡಿಯ ಆಕಾಶದಲ್ಲಿ ಒಂದು ಅಗ್ನಿಜ್ವಾಲೆಯಿರುವದು. ಅದು ಸುತ್ತಲೂ ಎಲ್ಲೆಲ್ಲಿಯೂ ಹರಡಿಕೊಂಡಿರುವದು. ಅದನ್ನು ಅಜರವೆಂದೂ ಕವಿಯೆಂದೂ ಕರೆಯುತ್ತಾರೆ. ಅದು ಅಗ್ರಭುಕ್ ಎಂದೂ ಪ್ರಸಿದ್ಧವಾಗಿದ್ದು ತಿಂದ ಆಹಾರವನ್ನು ಶರೀರಾವಯವಗಳಿಗೆಲ್ಲ ಸಮಾನವಾಗಿ ಹಂಚುವದು ಎಂಬಿದು ಈ ಮಂತ್ರದ ಅಭಿಪ್ರಾಯ.

ಈಗ ಅಗ್ನಿಯ ವಿಶೇಷಪರಿಚಯವನ್ನು ತಿಳಿಯೋಣ. 'ಅತ್ತಿ ಇತ್ಯಗ್ನಿಃ' ಎಂಬ ವ್ಯುತ್ಪತ್ತಿಯಂತೆ ಶರೀರಕ್ಕೆ ತೆಗೆದುಕೊಳ್ಳುವ ಆಹಾರವನ್ನು ತಿಂದು ಜೀರ್ಣಮಾಡುವ ಶಕ್ತಿಯೇ ಇಲ್ಲಿ ಅಗ್ನಿಯೆನಿಸುವದು. ವೈಶ್ವಾನರ ಎಂಬ ಹೆಸರಿನ ಜಠರಾಗ್ನಿಯಾಗಿ

ನಾನೇ ಎಲ್ಲಾ ಆಹಾರಪದಾರ್ಥಗಳನ್ನೂ ಪ್ರತಿಯೊಂದು ಪ್ರಾಣಿಯ ಹೊಟ್ಟೆಯನ್ನೂ ಹೊಕ್ಕು ಜೀರ್ಣಗೊಳಿಸುವೆನು- ಎಂದು ಭಗವಂತನು ತಿಳಿಸಿರುತ್ತಾನೆ. ಈ ಅಗ್ನಿಯು ಸುಷುಮ್ನಾರಂಧ್ರದಲ್ಲಿದ್ದುಕೊಂಡಿರುವದೆಂದು ಚಿಂತಿಸಬೇಕು. ಇದು ಪರಬ್ರಹ್ಮದ ಸವಿಶೇಷರೂಪವು. ಇದನ್ನೇ ಮುಂದೆ ನಿರ್ವಿಶೇಷವಾಗಿ ನಾರಾಯಣನೆಂದು ಹೆಸರಿಸಿ ತಿಳಿಸಿದ್ದಾರೆ. ಪ್ರಕೃತದಲ್ಲಿ ಈ ಅಗ್ನಿರೂಪವಾದ ಶಕ್ತಿಯು ಅಜರವಾಗಿದೆ-ಎಂದರೆ ತಾನು ಜೀರ್ಣವಾಗದೆ, ಉಳಿದ ಎಲ್ಲವನ್ನೂ ಜೀರ್ಣಗೊಳಿಸುವದರಿಂದ ಅಜರನೆಂದು ಕರೆಯಲ್ಪಟ್ಟಿದೆ. ಅಗ್ರಭುಕ್ ಎಂದೂ ಇದು ಸ್ತುತಿಸಲ್ಪಡುವದು. ಏಕೆಂದರೆ ಆಹಾರವು ಈ ಅಗ್ನಿಯಲ್ಲಿ ಜೀರ್ಣವಾದ ಅನಂತರವೇ ಉಳಿದ ಶರೀರದ ಭಾಗಗಳಿಗೆ ಶಕ್ತಿಯಾಗಿ ಹರಿಯುವದು. ಆದ್ದರಿಂದ ಮೊದಲು ತಿನ್ನುವವನು ಈ ಅಗ್ನಿಯೇ ಆದ್ದರಿಂದ ಅಗ್ರಭುಕ್ ಎಂಬ ಹೆಸರು ಅನ್ವರ್ಥವಾಗಿದೆ. ಕವಿ ಎಂದರೆ ಅಭಿಜ್ಞನು-ಕುಶಲನು ಎಂದರ್ಥ. ಜಗದ್ರಚನಾ ಕೌಶಲ್ಯವೆಲ್ಲವೂ ಭಗವಂತನದೇ ಆದ್ದರಿಂದಲೂ ಆ ಭಗವಂತನೇ ವೈಶ್ವಾನರಾಗ್ನಿ ಯಾಗಿರುವದರಿಂದಲೂ ಇಲ್ಲಿ ಅವನನ್ನು ಕವಿಯೆಂದು ಸ್ತುತಿಸಲಾಗಿದೆ. ಹೀಗೆ ಭಗವಂತನನ್ನು ಪ್ರತಿಯೊಬ್ಬ ಮಾನವನೂ ತನ್ನ ಜಠರದಲ್ಲಿರುವ ವೈಶ್ವಾನರಾಗ್ನಿ ಯಾಗಿ ಕಂಡುಕೊಂಡು ಉಪಾಸನೆಮಾಡಿದಲ್ಲಿ ಮುಂದೆ ಅದೇ ಭಗವಂತನ ನಿಜತತ್ತ್ವದ ಅರಿವಿಗೆ ಸಹಾಯವಾಗುವದು.

ಈಗಿನ ಕಾಲಕ್ಕೂ ಈ ಉಪಾಸನೆಯು ಸುಲಭವಾಗಿ ದಕ್ಕುವಂತೆಯೇ ಇದೆ. ಆಹಾರವನ್ನು ತೆಗೆದುಕೊಳ್ಳುವದು ಎಲ್ಲ ಮಾನವರಿಗೂ ಸಾಮಾನ್ಯಕ್ರಿಯೆಯಾಗಿರು ತ್ತದೆ. ಆಹಾರವು ಅರಗುವ ಶಕ್ತಿಯೂ ಎಲ್ಲರಲ್ಲಿಯೂ ಸಮಾನವಾಗಿಯೇ ಇದೆ. ಆದ್ದರಿಂದ ಪ್ರತಿಯೊಬ್ಬನಿಗೂ ಹೊಟ್ಟೆ ಹಸಿದಾಗ ಆ ಹೊಟ್ಟೆಯನ್ನು ಹೊಕ್ಕಿರುವ ವೈಶ್ವಾನರಾಗ್ನಿಯ ಅನುಭವವಾಗುವದರಿಂದ ಅದು ಭಗವಂತನ ಶಕ್ತಿಯೇ, ಮತ್ತು ಅದು ಅವನೇ- ಎಂದೇಕೆ ಚಿಂತಿಸಬಾರದು ? ಹೊಟ್ಟೆ ಹಸಿದಾಗ ಆಹಾರವು ಹೊರತು ಮನಸ್ಸಿಗೆ ಮತ್ತೇನೂ ಬೇಡವಾಗುವದರಿಂದ ಅದು ಸಾಧ್ಯವಾಗಲಾರ ದೆಂದಾದರೆ ಹೊಟ್ಟೆ ತುಂಬಿದ ಮೇಲಾದರೂ ಉಂಟಾಗುವ ತೃಪ್ತಿಯು 'ಅಗ್ರಭುಕ್' ಆಗಿರುವ ಭಗವಂತನ ಶಕ್ತಿಯ ಆವಿರ್ಭಾವವೆಂದಾದರೂ ಚಿಂತಿಸಬಹುದಲ್ಲವೆ ? ನಿಜವಾಗಿಯೂ ಇದಕ್ಕಿಂತ ಸುಲಭವಾದ ಉಪಾಸನೆಯಿಲ್ಲ. ಮಾನವನ ಸೋಮಾರಿತನ, ಧೋರಣೆಗಳೇ ಅವನ ಉನ್ನತಿಗೆ ಅಡ್ಡಿಯಾಗಿರುವವು. ಆದ್ದರಿಂದಲೇ ಉಪನಿಷತ್ತು 'ಉತ್ತಿಷ್ಠತ, ಜಾಗ್ರತ-' ಎಂದು ಘೋಷಿಸುತ್ತಿದೆ.

**ಸಂತಾಪಯತಿ ಸ್ವಂ ದೇಹಮಾಪಾದತಲಮಸ್ತಕಃ ।**
**ತಸ್ಯ ಮಧ್ಯೇ ವಹ್ನಿಶಿಖಾ ಅಣೀಯೋರ್ಧ್ವಾ ವ್ಯವಸ್ಥಿತಃ ॥೧೦॥**

ಈ ಮಂತ್ರದಲ್ಲಿ ಹಿಂದೆ ವರ್ಣಿಸಿರುವ ವೈಶ್ವಾನರಾಗ್ನಿಯ ಸ್ವರೂಪವನ್ನೇ ಮತ್ತಷ್ಟು ವಿವರಿಸಿ ಅನಂತರ ಅದರ ಸೂಕ್ಷ್ಮರೂಪವನ್ನು ಪರಿಚಯ ಮಾಡಿಕೊಡಲಾಗುತ್ತದೆ. ಭಗವಂತನೇ ವೈಶ್ವಾನರಾಗ್ನಿರೂಪದಿಂದ ಶರೀರವನ್ನೆಲ್ಲ ವ್ಯಾಪಿಸಿಕೊಂಡಿರುತ್ತಾನೆ. ಅಗ್ನಿಯ ರೂಪದಿಂದ ಭಗವಂತನ ಇರುವಿಕೆಯನ್ನು ನಾವು ನಮ್ಮ ದೇಹದಲ್ಲೆಲ್ಲ ಕಾಣಬಹುದಾಗಿದೆ. ಆರೋಗ್ಯವಾಗಿರುವ ಮನುಷ್ಯನ ಶರೀರದಲ್ಲಿ ಈ ಅಗ್ನಿಯು ಶಾಖರೂಪದಿಂದ ಕಾಲಿನಿಂದಾರಂಭಿಸಿ ತಲೆಯವರೆಗೂ ಹರಡಿರುತ್ತದೆ. ಅದು ಮನುಷ್ಯನು ಬದುಕಿದ್ದಾನೆಂಬುದಕ್ಕೂ ಗುರುತಾಗಿರುತ್ತದೆ. ಶರೀರದ ಶಾಖದ ಪ್ರಮಾಣದಿಂದಲೇ ನಾವು ಆರೋಗ್ಯ-ಅನಾರೋಗ್ಯಗಳನ್ನೂ ಗೊತ್ತುಪಡಿಸುವೆವು. ಶಾಖವು ಹೆಚ್ಚಾದರೆ ಜ್ವರವೆನಿಸುವದು. ಮಾಮೂಲು ಸ್ಥಿತಿಗಿಂತ ಕಡಿಮೆಯಾದರೂ ಅಪಾಯಕರವೇ ಸರಿ. ಆದರೆ ಇಲ್ಲಿ ಉಪಾಸನಾ ದೃಷ್ಟಿಯಿಂದ ಹೇಳುವದಾದರೆ ಈ ಶಾಖವು ವೈಶ್ವಾನರಾಗ್ನಿಯ ಪ್ರಭಾವವೇ ಆಗಿದ್ದು ಎಲ್ಲರಿಗೂ ಪರಿಚಿತವಾಗಿರುತ್ತದೆ. ಅದರ ಜ್ವಾಲೆಗಳಲ್ಲಿ ಒಂದಾನೊಂದು ಜ್ವಾಲೆಯು ಬಹುಸೂಕ್ಷ್ಮವಾಗಿದ್ದು ಮೇಲುಮುಖವಾಗಿ ಹೊರಟು ಬ್ರಹ್ಮರಂಧ್ರದವರೆಗೂ ಹಬ್ಬಿರುವದು. ಇದನ್ನು ನಾವು ಭಾವನೆಯಿಂದಲೇ ಕಂಡುಕೊಳ್ಳಬೇಕು. ಕಣ್ಣುಗಳಿಂದ ನೋಡಲಾಗುವದಿಲ್ಲ. ಬ್ರಹ್ಮರಂಧ್ರಕ್ಕೂ ಸುಷುಮ್ನಾನಾಡಿಯು ಹೊಂದಿಕೊಂಡಿದ್ದು ಆ ಮೂಲಕವೇ ಯೋಗಿಯಾದವನು ತನ್ನ ಪ್ರಾಣಗಳನ್ನು ಲೋಕಾಂತರಗಳಿಗೆ ಒಯ್ಯುವನು. ಇದು ಉಪಾಸನೆಯ ಬಲದಿಂದ ಸಾಧ್ಯ. ಇರಲಿ. ಈಗ ಬದುಕಿರುವಾಗ ಈ ನಾಡಿಯ ತುದಿಯಲ್ಲಿರುವ ಬ್ರಹ್ಮರಂಧ್ರದಲ್ಲಿ ತೋರಿಕೊಳ್ಳುವ ಸೂಕ್ಷ್ಮವಹ್ನಿಶಿಖೆಯಲ್ಲಿ ನಾವು ಮನಸ್ಸನ್ನು ಏಕಾಗ್ರಮಾಡಬೇಕು. ಏಕೆಂದರೆ ಪರಮಾತ್ಮನನ್ನು ಅಲ್ಲಿಯೇ ನಾವು ಕಂಡುಕೊಳ್ಳಬೇಕಾಗಿದೆ. ವಹ್ನಿಶಿಖೆ ಎಂದರೆ ಬೆಂಕಿಯ ಜ್ವಾಲೆಯ ತುದಿ. ಇದನ್ನು ಹೇಗೆ ಚಿಂತಿಸಬೇಕೆಂಬುದನ್ನು ಅಭ್ಯಾಸಮಾಡುವದಕ್ಕಾಗಿ ದೀಪದ ಕುಡಿಯನ್ನು ನೆನೆಸಿಕೊಳ್ಳುವಂತೆಯೂ ಉರಿಯುತ್ತಿರುವ ಎಣ್ಣೆಯ ದೀಪವು ಹೇಗಿರುವದೋ ಹಾಗೆ ಕಲ್ಪಿಸಿಕೊಂಡು ಅದರ ತುದಿಯನ್ನು ಚಿಂತಿಸುವಂತೆಯೂ ಧ್ಯಾನಪರಿಣತರು ಸಾಮಾನ್ಯರಿಗೆ ಸೂಚನೆಗಳನ್ನು ಕೊಡುವರು. ಆದರೆ ಅದು ಬಾಹ್ಯವಾದ ಆಲಂಬನವಾಗಿದೆ. ಆ ನೆಪದಿಂದ

ಆತ್ಮಜ್ಯೋತಿಯನ್ನು ಧ್ಯಾನಿಸಬೇಕೆಂಬುದೇ ಇಲ್ಲಿ ತಿರುಳಾಗಿರುತ್ತದೆ. ಇಂಥ ಜ್ಯೋತಿಯ ಹೆಚ್ಚಿನ ವರ್ಣನೆಯನ್ನು ಮುಂದಿನ ಮಂತ್ರದಲ್ಲಿ ನೋಡೋಣ.

**ನೀಲತೋಯದಮಧ್ಯಸ್ಥಾ ವಿದ್ಯುಲ್ಲೇಖೇವ ಭಾಸ್ವರಾ ।**
**ನೀವಾರಶೂಕವತ್ತನ್ವೀ ಪೀತಾ ಭಾಸ್ವತ್ಯಣೂಪಮಾ ॥೧೧॥**

ತೋಯದ ಎಂದರೆ ಮೋಡವು. ಅದು ಕಪ್ಪಗಿದ್ದರೆ ನೀರಿನಿಂದ ತುಂಬಿರುವದೆಂದು ಪ್ರಸಿದ್ಧವಾಗಿದೆ. ಇಂಥ ಕರಿಯ ಮೋಡಗಳ ನಡುವೆ ಮಳೆಗಾಲದಲ್ಲಿ ಕೋಲುಮಿಂಚು ಥಳಾರನೆ ಹೊಳೆದು ಕ್ಷಣಮಾತ್ರದಲ್ಲಿ ಅದೃಶ್ಯವಾಗುವದು ಎಲ್ಲರಿಗೂ ಗೊತ್ತಿದೆ. ಈ ಕೋಲ್ಮಿಂಚಿನ ರೇಖೆಯಂತೆ ಆ ದೀಪಶಿಖೆಯು ಇರುವದು. ಮತ್ತು ಅದು ಎಷ್ಟು ಸೂಕ್ಷ್ಮವಾಗಿರುವದೆಂದರೆ ನವಣೆ ಎಂಬ ಧಾನ್ಯದ ತುದಿಯಲ್ಲಿರುವ ಚೂಪಾದ ಬಿಂದುವಿನಂತೆ ಬಹಳ ಸಣ್ಣದಾಗಿದ್ದು ಕೊಂಡಿರುವದು. ಆದರೆ ಬಹಳವಾಗಿ ಹಳದಿಯ ಬಣ್ಣದಿಂದ ಅದು ಥಳಥಳಗುಟ್ಟು ತ್ತಿರುವದು. ಲೋಕದಲ್ಲಿ ನಾವು ಯಾವದಾದರೂ ಸೂಕ್ಷ್ಮವಾಗಿರುವ ಪ್ರಕಾಶಮಾನ ವಾದ ವಸ್ತುವನ್ನು ತಿಳಿಸುವದಾದರೆ ಈ ವಹ್ನಿಶಿಖೆಯು ಅದಕ್ಕೆ ಉಪಮಾನ ವಾದೀತು. ಅಷ್ಟೇ ಹೊರತು ಇದಕ್ಕೆ ಬೇರೇನೂ ಉಪಮಾನವನ್ನು ಕೊಡಲಾಗದು. ಇಂಥ ವಹ್ನಿಶಿಖೆಯನ್ನು ನಾವು ಧ್ಯಾನಬಲದಿಂದಲೇ ಕಂಡುಕೊಳ್ಳಬೇಕು. ಇದು ಬಹಳ ಕಷ್ಟವೆಂಬುದೇನೋ ಸರಿ. ಆದರೆ ಅಸಾಧ್ಯವೇನಲ್ಲ. ನಮ್ಮ ಮನಸ್ಸು ಬಹಳ ಚಂಚಲವಾಗಿರುವದರಿಂದ ಒಂದೊಂದುವೇಳೆ ಸ್ಥೂಲವಸ್ತುವನ್ನು ಕೂಡ ಮನಸ್ಸಿನಲ್ಲಿ ಪೂರ್ಣವಾಗಿ ಕಲ್ಪಿಸಿಕೊಳ್ಳುವದು ಅಸಾಧ್ಯವಾಗುತ್ತದೆ. ಉದಾಹರಣೆಗೆ ನಾವು ಪರಸ್ಥಳದಲ್ಲಿರುವಾಗ ನಮ್ಮ ಮನೆ ಹೇಗಿದೆ ? ಎಂಬುದನ್ನು ಧ್ಯಾನಿಸುತ್ತಾ ಇದ್ದರೆ ಪೂರ್ತಿ ಮನೆಯನ್ನು ಮನಸ್ಸಿಗೆ ತಂದುಕೊಳ್ಳುವದರೊಳಗೇ ಮನಸ್ಸು ಎಲ್ಲೋ ಹೋಗಿಬಿಟ್ಟಿರುತ್ತದೆ. ಸ್ಥೂಲಪದಾರ್ಥದ ಕಲ್ಪನೆಯೇ ಇಷ್ಟು ತೊಡಕಾಗಿರುವಾಗ ಇನ್ನು ಅತ್ಯಂತ ಸೂಕ್ಷ್ಮವಾದ ಅದರಲ್ಲಿಯೂ ಲೋಕಪ್ರಸಿದ್ಧ ವಲ್ಲದ ಕೇವಲ ಶಾಸ್ತ್ರಪ್ರಸಿದ್ಧವಾದ ಆಧ್ಯಾತ್ಮಿಕವಾದ ಈ ಜ್ಯೋತಿಯನ್ನು ಮನಸ್ಸಿನಲ್ಲಿ ನೆಲೆಗೊಳಿಸುವದು ಎಂಥ ಮಹಾಯೋಗಿಯಾದವನಿಗೂ ಕಷ್ಟಸಾಧ್ಯವೆಂದು ಹೇಳಬೇಕಾದದ್ದೇ ಇಲ್ಲ. ಆದರೂ ನಮ್ಮ ಮನಸ್ಸಿಗೆ ಎಂಥ ಅಪಾರವಾದ ಶಕ್ತಿಯಿದೆ- ಎಂಬುದು ಈ ವಿವರಣೆಯಿಂದ ಗೊತ್ತಾಗುತ್ತದೆ. ಈ ಮಂತ್ರವನ್ನು ಕಂಡುಹಿಡಿದಿರುವ ಋಷಿಯು ತನ್ನ ಪರಿಶುದ್ಧ ಹಾಗೂ ಸೂಕ್ಷ್ಮವಾದ ಮನಸ್ಸಿನಿಂದ

ತತ್ತ್ವವು ಹೀಗಿರಬಹುದೆಂದು ಚಿಂತಿಸಿದಮೇಲಲ್ಲವೆ, ಈ ಮಂತ್ರರೂಪವಾಗಿ ಹಾಡಿರುವದು ? ಆದರೆ ಅವನೂ ನಮ್ಮಂತೆಯೇ ಮಾನವನಾಗಿರಬೇಕಷ್ಟೆ ! ಆದ್ದರಿಂದ ಆ ಮಹರ್ಷಿಯಂತೆಯೇ ನಾವೂ ಏಕಾಗ್ರತೆಯಿಂದ ಶಾಸ್ತ್ರೋಕ್ತಾಲಂಬನಗಳನ್ನು ಆಶ್ರಯಿಸಿ ನಮ್ಮೊಳಗೇ ಚಿಂತಿಸಿದ್ದಾದರೆ, ನಮ್ಮ ಮನಸ್ಸು ಸೂಕ್ಷ್ಮವಾದಂತೆಲ್ಲ ಸೂಕ್ಷ್ಮತರತತ್ತ್ವವನ್ನು ಕಂಡುಕೊಳ್ಳಲೇಬಹುದಾಗಿದೆ. ಅಂತೂ ಈ ಅಗ್ನಿಶಿಖೆಯ ತುದಿಯಲ್ಲಿರುವ ಪ್ರಕಾಶವು ಪರಮಾತ್ಮನ ದಿವ್ಯವಾಸಸ್ಥಾನವಾಗಿದೆ. ಇಲ್ಲಿರುವ ಭಗವಂತನ ನಿಜರೂಪವನ್ನು ಮತ್ತೆ ಮುಂದಿನ ಮಂತ್ರದಲ್ಲಿ ವಿಚಾರಮಾಡೋಣ.

**ತಸ್ಯಾಃ ಶಿಖಾಯಾ ಮಧ್ಯೇ ಪರಮಾತ್ಮಾ ವ್ಯವಸ್ಥಿತಃ ।**
**ಸ ಬ್ರಹ್ಮಾ ಸ ಶಿವಃ ಸೇನ್ದ್ರಃ ಸೋಽಕ್ಷರಃ ಪರಮಃ ಸ್ವರಾಟ್ ॥೧೨॥**

ಹಿಂದೆ ಹೇಳಿರುವ ವರ್ಣನೆಯಂತೆ ಆ ಯೋಗಿಪ್ರಸಿದ್ಧವಾದ ದೀಪಶಿಖೆಯ ಮಧ್ಯದಲ್ಲಿ ಪರಮಾತ್ಮನಿರುವನು. ಅವನೇ ಬ್ರಹ್ಮನು, ಶಿವನು, ಇಂದ್ರನು, ಅಕ್ಷರನು, ಪರಮನಾದ ಸ್ವರಾಜನು- ಎಂದು ಈ ಮಂತ್ರದ ಅಭಿಪ್ರಾಯ. ಪರಮಾತ್ಮನೆಂದು ಹೊಗಳಲ್ಪಟ್ಟಿರುವ ಈ ಬ್ರಹ್ಮಕ್ಕಿಂತ ಇನ್ನು ಒಳಗಿನದು ಯಾವದೂ ಇಲ್ಲ- ಎಂಬರ್ಥದಲ್ಲಿ ಇದನ್ನು ತಿಳಿಯಬೇಕು. ಪ್ರತ್ಯಗಾತ್ಮನೆಂದರೂ ಇದೇ ತತ್ತ್ವವೇ ಆಗಿದೆ. ಇದನ್ನು ಬ್ರಹ್ಮಾ ಎಂದು ಹೇಳಿರುವದರ ಅಭಿಪ್ರಾಯವೇನೆಂದರೆ: ಬೃಹತ್-ಎಂದರೆ ದೊಡ್ಡದು. ದೊಡ್ಡದೆಂಬುದು ಯಾವದುಂಟೋ ಅದಕ್ಕಿಂತ ಹೆಚ್ಚು ದೊಡ್ಡದು ; ಇದಕ್ಕೆ ಮಿಗಿಲಾದುದಿಲ್ಲ. ಹಾಗೆಯೇ ಶಿವ ಎಂದರೆ ಇದೊಂದೇ ಮಂಗಳಕರವಾದದ್ದು. ಇಂದ್ರನೆಂದರೆ ಪರಮೈಶ್ವರ್ಯಸಂಪನ್ನವಾದದ್ದು ; ಅಕ್ಷರವೆಂದರೆ ಎಂದೆಂದಿಗೂ ನಾಶವಿಲ್ಲದ್ದು ; ಪರಮವು ಎಂದರೆ ಎಲ್ಲಕ್ಕಿಂತ ಶ್ರೇಷ್ಠವಾದದ್ದು ; ಸ್ವರಾಟ್ ಎಂದರೆ ತಾನೇ ಹೊಳೆಯುತ್ತಿರುವದು ; ಸ್ವಯಂಪ್ರಕಾಶಮಾನವಾದುದು- ಎಂದರ್ಥ. ಈ ಶಬ್ದಗಳನ್ನೇ ದೇವತಾವಾಚಕಗಳಾಗಿಯೂ ವ್ಯವಹರಿಸಬಹುದು. ಆಗ ಚತುರ್ಮುಖಬ್ರಹ್ಮನೆಂದರೂ ಈಶ್ವರನೆಂದರೂ ಇಂದ್ರನೆಂಬ ದೇವತೆಗಳೊಡೆಯನೆಂದರೂ ಇದೇ ಅಕ್ಷರವಾದ ಸ್ವಯಂಜ್ಯೋತಿಯಾದ ಪರಬ್ರಹ್ಮವೇ- ಎಂದರ್ಥಮಾಡಬೇಕು. ನಿಜವಾಗಿ ದೇವತೆಗಳೆಂಬುವರೆಲ್ಲರೂ ಈ ಪರಮಾತ್ಮನ ಶಕ್ತಿಗಳೇ. ಇದೇ ಪರಬ್ರಹ್ಮದ

ಒಂದೊಂದು ಶಕ್ತಿಯನ್ನು ಒಂದೊಂದು ದೇವತೆಯೆಂದು ಕರೆಯಲಾಗುತ್ತದೆ. ಉದಾಹರಣೆಗೆ ಪರಮಾತ್ಮನ ಬಲಶಕ್ತಿಯನ್ನು ಇಂದ್ರನೆಂದೂ ಸಂಹಾರಶಕ್ತಿಯನ್ನು ಶಿವನೆಂದೂ ಸೃಷ್ಟಿಶಕ್ತಿಯನ್ನು ಬ್ರಹ್ಮನೆಂದೂ ಕರೆಯುವರು. ಆದರೆ ಸರ್ವಶಕ್ತಿ ಸಂಪನ್ನನಾದವನು ನಾರಾಯಣನೊಬ್ಬನೇ. ನಾರಾಯಣನೆಂದರೆ ಈ ಹಿಂದೆ ವಿವರಿಸಿರುವಂತೆ ಪರಮಾತ್ಮನೇ ಆಗಿರುವನು.

ಹೀಗೆ ಈ ನಾರಾಯಣೋಪನಿಷತ್ತಿನಲ್ಲಿ ಸಕಲಜಗದುತ್ಪತ್ತಿಸ್ಥಿತಿಲಯ ಕರ್ತೃವೂ ಸರ್ವಜ್ಞನೂ ಸರ್ವಶಕ್ತನೂ ಸರ್ವರ ಆತ್ಮನೂ ಆಗಿರುವ ಬ್ರಹ್ಮನೆಂಬ ಪರಮಾತ್ಮನನ್ನು ಉಪಾಸನೆಮಾಡಿ ಅವನನ್ನು ಕಂಡುಕೊಳ್ಳಬೇಕಾಗಿರುವ ವಿದ್ಯೆಯನ್ನು ಉಪದೇಶಿಸಿದೆ. ಜಗತ್ಕಾರಣವೆಂದು ನಿರ್ದೇಶಿಸಿದಾಗ ಸಗುಣಸಾಕಾರವಾಗಿಯೂ ಆತ್ಮನೆಂದೇ ನಿರ್ದೇಶಿಸಿದಾಗ ಏಕಮೇವಾದ್ವಿತೀಯವೂ ನಿರ್ಗುಣವೂ ನಿರಾಕಾರವೂ ಆದ ಪರತತ್ತ್ವವಾಗಿಯೂ ಇರುವ ಒಂದೇ ವಸ್ತುವನ್ನು ಉಪನಿಷತ್ತುಗಳಲ್ಲಿ ಉಪದೇಶಿಸಿದೆ. ಅಧಿಕಾರಿಗಳಾದ ಸಾಧಕರ ಯೋಗ್ಯತೆಗೆ ತಕ್ಕಂತೆ ಯಾವ ರೀತಿಯಿಂದಲಾದರೂ ಸರಿ, ಮನುಷ್ಯನು ಈ ತನ್ನ ಅಮೃತಾತ್ಮನನ್ನು ನಾರಾಯಣಸ್ವರೂಪನನ್ನಾಗಿ ತಿಳಿದು ನೆಲೆನಿಂತರೆ ಮುಕ್ತನಾಗುವನು. ಇಂಥ ಮುಕ್ತಿಯೇ ಮಾನವನು ಪಡೆದುಕೊಳ್ಳಬೇಕಾದ ಪರಮಪುರುಷಾರ್ಥವಾಗಿರುವದು.

----------

# ೨. ವಿಷ್ಣುಸೂಕ್ತಭಾಷ್ಯ

ವೇದಪುರುಷನಿಗೆ ವಂದನೆಗಳು. ಕೆಲವು ವಾಚಕರು ವಿಷ್ಣುಸೂಕ್ತದ ಅರ್ಥವನ್ನು ತಿಳಿಯಲಪೇಕ್ಷಿಸಿ ನಾರಾಯಣಸೂಕ್ತದ ಅನಂತರ ಮುಂದುವರಿಸಿ ತಿಳಿಸಬೇಕೆಂದು ಸೂಚಿಸಿದರು. ಇದು ನನಗೂ ಸೂಕ್ತವಾಗಿ ಕಂಡುಬಂದಿತು. ಏಕೆಂದರೆ ಈಗ ಜಗತ್ತಿನ ಸ್ಥಿತಿಕಾಲವಾಗಿದೆ. ಸ್ಥಿತಿಕಾರಕನಾದ ದೇವನನ್ನು 'ವಿಷ್ಣು'ವೆಂದೇ ಇತಿಹಾಸಪುರಾಣಗಳಲ್ಲಿ ವರ್ಣಿಸಿದೆ. ಅಕಾಲದಲ್ಲಿ ಪ್ರಲಯ ವಾಗಲಿ, ಸೃಷ್ಟಿಯಾಗಲಿ-ಎಂದಿಗೂ ಹಿತಕರವಲ್ಲ. ಆದರೂ ರಾಗದ್ವೇಷಪ್ರೇರಿತ ರಾದ ಆಸುರೀಸಂಪತ್ತಿನ ಜನರು ಈಗಲೂ ಇದ್ದುಕೊಂಡಿದ್ದು ತಮ್ಮ ಭೌತಿಕವಿಜ್ಞಾನದ ಸಂಶೋಧನೆಗಳ ಬಲದಿಂದ ಜಗತ್ತಿನ ಪ್ರಲಯವನ್ನು ಸಾಧಿಸಲು ಹೊರಟಿದ್ದಾರೆ. ಇದು ಎಂದಿಗೂ ಸಾಧ್ಯವಾಗಲಾರದು. ಭಗವಂತನೇನೂ ನಿಷ್ಕ್ರಿಯನಾಗಿ ಕುಳಿತಿಲ್ಲ. ಹಿಂದೆಯೂ ಹೀಗೆಯೇ ರಾಕ್ಷಸರು ಭೂಮಿಯನ್ನೇ ಎತ್ತಿ ಪಾತಾಳಕ್ಕೆ ಒಯ್ದಾಗ, ಮತ್ತು ತಾವೇ ತ್ರೈಲೋಕ್ಯಗಳ ಆಧಿಪತ್ಯವನ್ನೂ ವಹಿಸಿದ್ದಾಗ- ಜಗತ್ತಿನ ಸ್ಥಿತಿಯನ್ನು ಸರಿಪಡಿಸುವದಕ್ಕಾಗಿ ಅವತಾರಗಳನ್ನು ಮಾಡಿದನೆಂಬುದು ಪುರಾಣಗಳನ್ನು ಬಲ್ಲವರಿಗೆಲ್ಲ ತಿಳಿದೇ ಇದೆ. ಆದರೆ ಅಂಥ ಸಂದರ್ಭಗಳಲ್ಲೆಲ್ಲ ದೇವತೆಗಳ, ಋಷಿಮುನಿಗಳ, ಭಗವದ್ಭಕ್ತರ ಪ್ರಾರ್ಥನೆ- ವಿಜ್ಞಾಪನೆಗಳೂ ಭಗವಂತನ ಆವಿರ್ಭಾವಕ್ಕೆ ಕಾರಣವಾಗಿವೆ. ಈಗ ನಾವುಕೂಡ ವಿನಾಶದ ಅಂಚಿನಲ್ಲಿದ್ದು ಭಯಗ್ರಸ್ತರಾಗಿರುವೆವು. ಇಂಥ ಭಯವನ್ನು ನೀಗಿ ಜಗತ್ತಿನ ಸ್ಥಿತಿಯನ್ನು ಕಾಪಾಡುವಂತೆ ಶ್ರೀಮಹಾವಿಷ್ಣುವನ್ನೇ ಬೇಡಿಕೊಳ್ಳಬೇಕಾಗಿದೆ. ಶ್ರೀಮದ್ರಾಮಾಯಣದ ಕಡೆಯಲ್ಲಿ ''ಬಲಂ ವಿಷ್ಣೋಃ ಪ್ರವರ್ಧತಾಮ್'' ಎಂದು ವಾಲ್ಮೀಕಿಮಹಾಮುನಿಗಳು ಘೋಷಿಸಿರುವದರ ರಹಸ್ಯವೂ ಇದೇ ಆಗಿದೆ. ಆದ್ದರಿಂದ ವೇದವೇದ್ಯಪುರುಷನಾದ ಶ್ರೀಮನ್ನಾರಾಯಣನ ಬಲವೀರ್ಯ ಪರಾಕ್ರಮಶಕ್ತಿತೇಜೋಮಹಿಮಾದಿಗಳನ್ನು ವರ್ಣಿಸಿ ವೈದಿಕಮಂತ್ರಗಳಲ್ಲಿ ಸ್ತುತಿ ಸಿರುವದನ್ನು ಅರಿತುಕೊಂಡೇ ಅವನನ್ನು ಸೇವಿಸಿ ನಾವುಗಳು ಕೃತಾರ್ಥರಾಗ ಬೇಕಾಗಿದೆ. ಇಂಥ ಉದ್ದೇಶಸಾಧನೆಗೆ ವಿಷ್ಣುಸೂಕ್ತವನ್ನು ಮನನಮಾಡುವದು ಉತ್ತಮಸಾಧನವಾಗಿರುತ್ತದೆ.

ಈ ವಿಷ್ಣು ಸೂಕ್ತವನ್ನು ನಾನು ಬೆಂಗಳೂರಿನ ಶ್ರೀರಾಮಕೃಷ್ಣಾಶ್ರಮದವರು ಪ್ರಕಟಿಸಿರುವ **'ಸಸ್ವರ-ವೇದಮಂತ್ರಾಃ'** (1977) ಎಂಬ ಗ್ರಂಥದಿಂದ ಆರಿಸಿಕೊಂಡಿದ್ದೇನೆ. ಇದರಲ್ಲಿ ೪೫ ಋಕ್ಕುಗಳಿವೆ. ೧ ರಿಂದ ೬ ಋಕ್ಕುಗಳು ಋಗ್ವೇದದ ೧ ನೆಯ ಅಷ್ಟಕ ೨ನೆಯ ಅಧ್ಯಾಯ ೭ನೆಯ ವರ್ಗದಲ್ಲಿವೆ. ಇದೇ ರೀತಿಯಾಗಿ ೭ ರಿಂದ ೨೩ ರ ಪೂರ ೧೭ ಋಕ್ಕುಗಳು ೨-೨-೨೪ರಲ್ಲಿಯೂ ೨೪ ರಿಂದ ೩೧ ಪೂರ ೮ ಋಕ್ಕುಗಳು ೫-೧-೧೩ ರಲ್ಲಿಯೂ ೩೨ ರಿಂದ ೪೬ ಪೂರ ೧೪ ಋಕ್ಕುಗಳು ೫-೬-೨೪ ರಲ್ಲಿಯೂ ಇದ್ದುಕೊಂಡಿವೆ. ಈ ಎಲ್ಲಾ ಮಂತ್ರಗಳಿಗೂ ಸಾಯಣಭಾಷ್ಯವಿದೆ. ಈ ೪೫ ಮಂತ್ರಗಳನ್ನೂ ಒಂದುಕಡೆ ಸಂಗ್ರಹಿಸಿ 'ಸಸ್ವರ-ವೇದಮಂತ್ರಾಃ' ಎಂಬ ಗ್ರಂಥದಲ್ಲಿ ಕೊಟ್ಟಿರುತ್ತಾರೆ. ಋಗ್ವೇದದಲ್ಲಿ ವಿಷ್ಣು- ಎಂಬ ಹೆಸರಿನಿಂದ ಭಗವಂತನನ್ನು ಕೊಂಡಾಡಿರುವ ಇನ್ನೂ ಕೆಲವು ಮಂತ್ರಗಳೂ ಇರಬಹುದು. ಆದರೆ ಈ ೪೫ ಋಕ್ಕುಗಳಿಗೆ ಮಾತ್ರ 'ವಿಷ್ಣುಸೂಕ್ತ'ವೆಂಬ ಹೆಸರು ಏಕೆ-ಹೇಗೆ-ಬಂದಿದೆ ? ಎಂಬಿದು ತಿಳಿದಿಲ್ಲ. ವಿಷ್ಣುಸೂಕ್ತವನ್ನು ಪಠನಮಾಡುವವರು ಕೂಡ ಈ ಎಲ್ಲಾ ಋಕ್ಕುಗಳನ್ನೂ ಹೇಳುವದಿಲ್ಲ. ಇವುಗಳಲ್ಲಿ ಮುಖ್ಯವಾದ ಕೆಲವೇ ಋಕ್ಕುಗಳನ್ನು ಒಂದುಗೂಡಿಸಿ ವಿಷ್ಣುಸೂಕ್ತವೆಂದು ಪಠಿಸುತ್ತಾರೆ. ಹೀಗೆ ವೈದಿಕರಲ್ಲಿ ವಿಷ್ಣುಸೂಕ್ತದ ಅಧ್ಯಯನಕ್ರಮದ ವಿಷಯಕ್ಕೆ ಮತಭೇದಗಳಿವೆ. ಆದರೆ ಇದೇನೂ ನಾವು ವಿಷ್ಣುಸೂಕ್ತದ ಅರ್ಥವನ್ನು ವಿಚಾರಮಾಡಲು ಅಡ್ಡಿಯಾಗುವಂತಿಲ್ಲ. ಋಗ್ವೇದದಲ್ಲಿ ಬಹಳಮಟ್ಟಿಗೆ ದೇವತಾಸ್ತುತಿಪರವಾದ ಋಕ್ಕುಗಳಿರುವದರಿಂದ ಅವುಗಳಲ್ಲಿ ಆಯಾ ದೇವತೆಯ ಸ್ತುತಿಪರವಾದ ಋಕ್ಕುಗಳನ್ನು ಕೂಡಿಸಿ ಸೂಕ್ತಗಳೆಂದೂ ಕರೆಯುವ ವಾಡಿಕೆಯು ಕಂಡುಬಂದಿದೆ. ಇಂಥ ಸೂಕ್ತಗಳು ೧೦೧೭ ಇವೆ- ಎಂದು ಗೊತ್ತಾಗಿದೆ. ಇಡಿಯ ಋಗ್ವೇವನ್ನೆಲ್ಲ ಅಧ್ಯಯನ ಮಾಡಲಾಗದಿದ್ದರೂ ಈ ಸೂಕ್ತಗಳಲ್ಲಿ ಮುಖ್ಯವಾದ ಕೆಲವು ಸೂಕ್ತ ಭಾಗಗಳನ್ನಾದರೂ ಸ್ವರಸಹಿತ ಅಧ್ಯಯನಮಾಡಿ ಅರ್ಥಾನುಸಂಧಾನವನ್ನು ಮಾಡಿಕೊಂಡರೆ ನಮಗೆ ವೇದಗಳ ಬಗ್ಗೆ ಗೌರವವು ಹೆಚ್ಚಿ ಅಧ್ಯಾತ್ಮವಿದ್ಯೆಗೆ ತಕ್ಕ ಯೋಗ್ಯತೆಯನ್ನೂ ಸಂಪಾದಿಸಿಕೊಂಡಂತಾಗುವದು. ಕೊಂಚಮಟ್ಟಿಗೆ ಋಷಿಋಣವನ್ನೂ ತೀರಿಸಿದಂತಾಗುವದು. ಈಗಿನ ಕಾಲಕ್ಕೆ ಋಗ್ವೇದಿಗಳು- ಯಜುರ್ವೇದಿಗಳು ಮುಂತಾಗಿ ಎಲ್ಲರೂ ಈ ಸೂಕ್ತಗಳ ಅಧ್ಯಯನವನ್ನು ಮಾಡುವಂತೆ ಗುರುಹಿರಿಯರು ಏರ್ಪಡಿಸಿದರೆ ಒಳ್ಳೆಯದು. ಅಧ್ಯಯನಾನುಕೂಲವಿಲ್ಲದವರು

ಅರ್ಥಗ್ರಹಣವನ್ನಾದರೂ ಮಾಡಿ ತತ್ತ್ವವಿಚಾರಕ್ಕೆ ಅಗತ್ಯವಾದ ಶ್ರದ್ಧೆಯನ್ನೂ ಭಕ್ತಿಯನ್ನೂ ಬೆಳೆಯಿಸಿಕೊಳ್ಳಬಹುದು.

ವೇದದ ಕರ್ಮಕಾಂಡಭಾಗಕ್ಕೆ ಸೇರಿದ ಈ ಸಂಹಿತಾಮಂತ್ರಗಳಿಗೆ ಬಹಳಮಟ್ಟಿಗೆ ವೈದಿಕಕರ್ಮಗಳಲ್ಲಿ ವಿನಿಯೋಗವು ಹೇಳಲ್ಪಟ್ಟಿರುತ್ತದೆ. ಆದರೆ ಇದನ್ನು ವಿಶೇಷವಿನಿಯೋಗವೆಂದೇ ಸಾಯಣಭಾಷ್ಯಕಾರರು ತಿಳಿಸಿದ್ದಾರೆ. ಸಾಮಾನ್ಯ ವಿನಿಯೋಗವೆಂದರೆ ಬ್ರಹ್ಮಯಜ್ಞ-ಜಪಾದಿಗಳಲ್ಲಿ ಉಪಯೋಗಿಸುವದೇ- ಎಂದು ಅವರ ಅಭಿಪ್ರಾಯ. ನಾವು ಈ ಸಾಮಾನ್ಯವಿನಿಯೋಗವನ್ನೇ ದೃಷ್ಟಿಯಲ್ಲಿಟ್ಟುಕೊಂಡು ಸೂಕ್ತಗಳನ್ನು ಜಪಮಾಡಬೇಕು. 'ತಜ್ಜಪಃ ತದರ್ಥ ಭಾವನಾ' ಎಂಬ ನ್ಯಾಯದಂತೆ ಆಯಾ ಮಂತ್ರಗಳ ಅರ್ಥವನ್ನು ಅರಿತು ಅನುಸಂಧಾನಮಾಡಿದಲ್ಲಿ ಜಪವು ಇನ್ನೂ ವೀರ್ಯವತ್ತರವಾಗುವದು. ವೇದಪ್ರಶಂಸೆಯನ್ನು ಮಾಡುವಾಗ ಒಂದು ಸ್ಮೃತಿವಾಕ್ಯವು ಹೀಗೆನ್ನುತ್ತದೆ : 'ಅರ್ಥವನ್ನರಿಯದೆ ಕೇವಲ ಮಂತ್ರಾಧ್ಯಯನಮಾಡಿದವನು ಮನೆಯ ಭಾರವನ್ನು ಹೊರಲು ನಿರ್ಮಿಸಿದ ಕಂಬಂದಂತೆಯೇ ಸರಿ'. ಇದರಿಂದ ತಿಳಿಯಬರುವದೇನೆಂದರೆ : ಕೇವಲ ವೇದಾಕ್ಷರಾಧ್ಯಯನವು ಪಾಪಪರಿಹಾರಕವಾದರೂ ಅರ್ಥಾಧ್ಯಯನದ ಯೋಗ್ಯತೆಯನ್ನು ಪಡೆಯಲಾರದು. ಆದ್ದರಿಂದ ವೇದ ಮಂತ್ರಗಳಿಗೆ ಕರ್ಮಕಾಂಡಪರವಾದ ಅರ್ಥವನ್ನು ಕರ್ಮವಿನಿಯೋಗ ಕಾಲಕ್ಕೆ ತಿಳಿದರೂ ಸಾಕು. ಅಧ್ಯಾತ್ಮಪರವಾದ ಅರ್ಥವನ್ನು ಮಾತ್ರ ಎಲ್ಲಾ ಅಧ್ಯೇತೃಗಳೂ ತಿಳಿದುಕೊಳ್ಳಬೇಕು. ಜ್ಞಾನವು ಯಾರೊಬ್ಬರಿಗೂ ಮೀಸಲಲ್ಲ. ಅಧ್ಯಯನಾಧಿಕಾರವಿಲ್ಲದವರು ಕೂಡ ಮಂತ್ರಗಳ ಭಾವಾರ್ಥವನ್ನರಿತು ತತ್ತ್ವಚಿಂತನೆಮಾಡಿದಲ್ಲಿ ತಪ್ಪೇನೂ ಕಂಡುಬರಲಾರದು. ವೇದಾಕ್ಷರಗಳ ಅನುಪೂರ್ವಿ ಹಾಗೂ ಸ್ವರಶಿಕ್ಷಾದಿ ನಿರ್ಬಂಧಗಳಿಂದ ಕೂಡಿದ ವಿಶಿಷ್ಟ ಉಚ್ಚಾರಣೆಯ ವಿಷಯಕ್ಕೆ ಮಾತ್ರ ಅಧಿಕಾರದ ಪ್ರಶ್ನೆಯು ಸೀಮಿತಗೊಂಡಿದೆಯೇ ಹೊರತು ಜ್ಞಾನಪ್ರಕಾಶದ ವಿಷಯಕ್ಕೆ ಅದು ಅಡ್ಡಿಯಾಗಲಾರದು. ಆದ್ದರಿಂದ ವೇದಮೂಲವಾದ ಜ್ಞಾನದ ಬೆಳಕನ್ನು ಪಡೆದುಕೊಳ್ಳಲು ಅದರಲ್ಲಿ ಆಸಕ್ತಿಯುಳ್ಳವರೆಲ್ಲರೂ ಅಧಿಕಾರಿಗಳೆಂದೇ ಹೇಳಬಹುದಾಗಿದೆ. ಈಗ ವಿಷ್ಣುಸೂಕ್ತದ ಅಭಿಪ್ರಾಯವಿವರಣೆಯನ್ನು ಜ್ಞಾನ ಕಾಂಡದ ತಳಹದಿಯ ಮೇಲೆಯೇ ಮಾಡಲಾಗುವದು.

ವಿಷ್ಣುಸೂಕ್ತದ ಮೊದಲನೆಯ ಋಕ್ಕು ಹೀಗಿದೆ :

**ಓಂ ॥ ಅತೋ ದೇವಾ ಅವಂತು ನೋ ಯತೋ ವಿಷ್ಣುರ್ವಿಚಕ್ರಮೇ । ಪೃಥಿವ್ಯಾಃ ಸಪ್ತಧಾಮಭಿಃ ॥೧॥**

'ಏಳು ಧಾಮಗಳಿಂದ ವಿಷ್ಣುವು ಯಾವ ಪೃಥಿವಿಯನ್ನು ದಾಟಿ ಹೆಜ್ಜೆಯಿಟ್ಟನೋ ಅವುಗಳಿಂದ ದೇವತೆಗಳು ನಮ್ಮನ್ನು ಕಾಪಾಡಲಿ!'

ಇಲ್ಲಿ ವಿಷ್ಣುವೆಂದರೆ ಸರ್ವವ್ಯಾಪಕನಾದ ಭಗವಂತನು- ಎಂದರ್ಥ. ದೇವತೆಗಳಲ್ಲೆಲ್ಲ ವಿಷ್ಣುವೇ ಪ್ರಮುಖನು. ಅವನು ದೇವತೆಗಳೊಡಗೂಡಿ ಒಮ್ಮೆ ಪೃಥಿವ್ಯಾದಿಲೋಕಗಳನ್ನು ಕ್ರಮಿಸಿದನು-ಎಂದರೆ ಪೃಥಿವಿಯಿಂದ ಹಿಡಿದು ಸತ್ಯ ಲೋಕದವರೆಗೂ ಹೆಜ್ಜೆಗಳನ್ನು ಇಟ್ಟು ವ್ಯಾಪಿಸಿಕೊಂಡನು. ಆತನು ತನ್ನ ಪಾದ ಕ್ರಮಣವನ್ನು ಯಾವ ಭೂಮಿಯಿಂದ ಆರಂಭಿಸಿದನೋ ಆ ಭೂಪ್ರದೇಶದಲ್ಲಿ ವಾಸಮಾಡುತ್ತಿರುವ ನಮ್ಮಗಳನ್ನು ದೇವತೆಗಳು ಕಾಪಾಡಲಿ! ಎಂದು ಸಾಮಾನ್ಯ ವಾದ ಅಭಿಪ್ರಾಯ. ಯಜುರ್ವೇದದಲ್ಲಿ ಹೀಗಿದೆ : ''ವಿಷ್ಣುಮುಖಾ ವೈ ದೇವಾಃ ಛಂದೋಭಿರಿಮಾನ್ ಲೋಕಾನನಪಜಯ್ಯಮಭ್ಯ- ಜಯನ್'' (ವಿಷ್ಣುವನ್ನು ಮುಂದಾಳಾಗಿ ಹೊಂದಿದ ದೇವತೆಗಳು ಗಾಯತ್ರೀ ಮುಂತಾದ ಏಳು ಛಂದಸ್ಸು ಗಳಿಂದ ಜಯಿಸಲು ತಕ್ಕವಾದ ಭೂರಾದಿ ಏಳು ಲೋಕಗಳನ್ನು ಗೆದ್ದುಕೊಂಡರು) ಎಂದು ವರ್ಣಿಸಿದೆ. ಇಲ್ಲಿ ವೇದದ ಏಳು ಛಂದಸ್ಸುಗಳ ಪರಾಮರ್ಶವಿರುವದರಿಂದ ದೇವತೆಗಳಾಗಿ ಅಧಿಕಾರವನ್ನು ಹೊಂದಿದವರು ಕೂಡ ಹಿಂದೆ ವೈದಿಕವಾದ ಯಜ್ಞವನ್ನು ಅನುಷ್ಠಾನಮಾಡಿ ವಿಷ್ಣುವನ್ನು ಪ್ರೀತಿಗೊಳಿಸಿ ಸತ್ಯಲೋಕಪರ್ಯಂತ ವಾದ ಶಾಶ್ವತಸ್ಥಾನಗಳನ್ನು ಗಳಿಸಿಕೊಂಡರು- ಎಂದರ್ಥವಾಗುತ್ತದೆ. ಆದ್ದರಿಂದ ಈ ಭೂಮಿಯೆಲ್ಲವೂ ದೇವತೆಗಳ ಅಧೀನವು ; ಅವರದೇ ಸ್ವತ್ತಾಗಿರುವದು. ಅವರ ಕೃಪೆಯಿಂದಲೇ ಇಲ್ಲಿ ವಾಸಮಾಡುತ್ತಿರುವ ನಾವು ಸುಖಸಂತೋಷಗಳನ್ನು ಹೊಂದಬೇಕಾಗಿದೆ. ದೇವತೆಗಳಾದರೊ, ವಿಷ್ಣುಮಯರೇ ಆಗಿರುವರು. ಅವರನ್ನು ಈ ಭೂವಾಸಿಗಳಾದ ನಾವು ವೇದಾಧ್ಯಯನ, ಯಜ್ಞಾದಿಗಳಿಂದ ತೃಪ್ತಿಗೊಳಿಸಿದರೆ ಅವರನುಗ್ರಹದಿಂದ ನಮ್ಮ ಪಾಪಗಳ ಪರಿಹಾರವೂ ಇಷ್ಟಪ್ರಾಪ್ತಿಯೂ ಆದೀತು. ಆ ಮೂಲಕ ಸ್ಥಿತಿಕಾರಕನಾದ ವಿಷ್ಣುವಿಗೆ ಸಂತೋಷವೂ ಆದೀತು. ವಿಷ್ಣುವು ಯಾವಾಗಲೂ ದಯಾಮಯನು. ಅವನಿಗೆ ಭಕ್ತರನ್ನು ಉದ್ಧಾರಮಾಡುವದೇ

ಕರ್ತವ್ಯವಾಗಿರುತ್ತದೆ. ಲೋಕದಲ್ಲಿ ಪಾಪಿಗಳು ಹೆಚ್ಚಾದಾಗ ಪೃಥಿವೀ ದೇವತೆಯೇ ವಿಷ್ಣುವನ್ನು ಮೊರೆಹೊಕ್ಕು ಭೂಭಾರಹರಣವನ್ನು ಮಾಡುವಂತೆ ಬೇಡಿಕೊಂಡಿರುವದೂ ಉಂಟು. ಆದ್ದರಿಂದ ನಾವು ಭೂಮಿಗೆ ಭಾರವಾಗಿ ಜೀವಿಸಬಾರದು. ಕೆಟ್ಟ ಕೆಲಸಗಳನ್ನು ಮಾಡಬಾರದು. ಇದರಿಂದ ದೇವತೆಗಳ ಮನಸ್ಸು ನೋಯುವದು. ಆ ಮೂಲಕ ವಿಷ್ಣುವಿಗೂ ನಾವು ದ್ರೋಹಿಗಳಾಗುವೆವು. ಹಾಗಾಗದಂತೆ ದೇವತೆಗಳನ್ನೇ ನಾವು ಬೇಡಿಕೊಳ್ಳಬೇಕು. ಆಗ ಅವರು ನಮಗೆ ಸದ್ಬುದ್ಧಿಯನ್ನೂ ಧನಧಾನ್ಯಸಂಪತ್ತುಗಳನ್ನೂ ಕೊಟ್ಟು ಕಾಪಾಡುವರು. ದೇವತೆಗಳು ಕೂಡ ಛಂದಸ್ಸುಗಳನ್ನಾಶ್ರಯಿಸಿಯೇ ಕೃತಾರ್ಥರಾದರೆಂದು ತಿಳಿದುಬರುವದರಿಂದ ಭೂಮಿಯ ರಕ್ಷಣೆಗೆ ಹಾಗೂ ಪರಿಪಾಲನೆಗೆ ವೇದಗಳೇ ಆಧಾರವೆಂದಾಗುತ್ತದೆ. ವೇದಗಳೂ ಯಜ್ಞಾದಿಗಳೂ ಇರುವಲ್ಲಿ ಸಕಲದೇವತೆಗಳೊಡನೆ ವಿಷ್ಣುವೇ ವಾಸವಾಗಿರುವನು. ಅಲ್ಲಿ ಎಲ್ಲಾ ಸಮೃದ್ಧಿಯೂ ಇರುವದು. ಹೀಗೆ ನಾವು ಭೂಲೋಕವನ್ನು ಸ್ವರ್ಗವಾಗಿ ಮಾರ್ಪಡಿಸಿಕೊಳ್ಳಲು ವೇದಗಳೂ ವೇದೋಕ್ತ ಧರ್ಮಗಳೂ ಸಾಧನಗಳಾಗಿರುತ್ತವೆ. ದೇವತೆಗಳು ನಮ್ಮನ್ನು ಕಾಪಾಡುವರೆಂದರೆ ಕರ್ಮವನ್ನು ಮಾಡಲೇಬೇಕಾಗಿರುವ ನಮಗೆ ಸತ್ಕರ್ಮಗಳಿಗೆ ಪ್ರೇರಕರಾಗುವರು- ಎಂದೇ ಅಭಿಪ್ರಾಯ. ಅನಂತರ ಕರ್ಮಫಲದಾತನೂ ಯಜ್ಞಪತಿಯೂ ಆದ ನಾರಾಯಣನ ಅನುಗ್ರಹವು ಜಗತ್ತಿಗೆ ಲಭಿಸಿಯೆತೀರುವದು- ಎಂದೂ ತಿಳಿಯಬೇಕು.

ಈ ಮಂತ್ರಾರ್ಥವನ್ನು ಉಪಬೃಂಹಣ (ವಿವರಣೆ) ಮಾಡುವದಕ್ಕಾಗಿಯೇ ಭಗವಂತನು ವಾಮನಾವತಾರವನ್ನು ಮಾಡಿ ಬಲಿಯನ್ನು ಮೆಟ್ಟಿ ತ್ರಿವಿಕ್ರಮನಾಗಿ ಬೆಳೆದು ಜಗತ್ತನ್ನೆಲ್ಲ ವ್ಯಾಪಿಸಿಕೊಂಡನೆಂದು ವಿಸ್ತಾರವಾದ ಕಥೆಯನ್ನು ಪುರಾಣಗಳಲ್ಲಿ ಬರೆದಿರುತ್ತದೆ. ಹದಿನೆಂಟು ಪುರಾಣಗಳಲ್ಲಿ 'ವಾಮನಪುರಾಣ'ವೆಂಬುದೂ ಒಂದಾಗಿರುತ್ತದೆ. ಅದಕ್ಕೆ ಈ ವೇದಮಂತ್ರಗಳೇ ಮೂಲವಾಗಿರುತ್ತವೆ. ಸದ್ಯಕ್ಕೆ ನಾವು ಪ್ರತ್ಯಕ್ಷದೇವತೆಯೂ ನಮ್ಮ ಸರ್ವವ್ಯವಹಾರಗಳಿಗೂ ಆಶ್ರಯವೂ ಆಗಿರುವ ವಿಷ್ಣುಪತ್ನಿಯಾದ ಈ ಭೂಮಿಯನ್ನು ಮೊದಲು ಗೌರವಿಸಬೇಕು- ಎಂದರೆ ಭೂದೇವತೆಗೆ ದ್ರೋಹ ಮಾಡುವಂಥ ಆಸುರಿಕೃತ್ಯಗಳನ್ನು ಕೈಗೊಳ್ಳಬಾರದು. ರಾಷ್ಟ್ರನಾಯಕರುಗಳಲ್ಲಿ ಈ ಪ್ರಜ್ಞೆಯು ಮೂಡಲೆಂದು ಪ್ರಾರ್ಥಿಸೋಣ.

**ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಮ್ ।**
**ಸಮೂಳ್ಹಮಸ್ಯ ಪಾಂಸುರೇ ॥ ೨ ॥**

ಈ ಮಂತ್ರವೂ ಹಿಂದಿನ ಮಂತ್ರದಂತೆಯೇ ವಿಷ್ಣುವು ಪದಾರ್ಪಣ ಮಾಡಿದ ವಿಚಾರವನ್ನು ತಿಳಿಸುತ್ತಿದೆ. ಇಡಿಯ ಬ್ರಹ್ಮಾಂಡವೆಲ್ಲವೂ ವಿಷ್ಣುವಿನ ಒಂದು ಪಾದವೇ ಆಗಿದೆ-ಎಂದು 'ಪಾದೋಽಸ್ಯ ಸರ್ವಾ ಭೂತಾನಿ' ಎಂಬ ಉಪನಿಷದ್ವಾಕ್ಯವು ತಿಳಿಸುತ್ತಿದೆ. ಆತನು ತನ್ನ ಪಾದವನ್ನು ಮೂರು ಬಾರಿ ಎತ್ತಿಟ್ಟನೆಂದು ಇಲ್ಲಿ ತಿಳಿಸಿರುವದು ವಿಶೇಷವಾಗಿದೆ. ವಿಷ್ಣುವೇ ಸರ್ವಾಧಾರನಾಗಿರುವಲ್ಲಿ ಅವನು ತನ್ನ ಕಾಲನ್ನು ಎಲ್ಲಿಗೆ ಎತ್ತಿಟ್ಟನೆಂದು ಸಂಶಯವಾಗಬಹುದು. ಆದರೆ ಭಗವಂತನು ತಾನೇ ಆಧಾರನಾಗಿಯೂ ಆಧೇಯನಾಗಿಯೂ ತನ್ನನ್ನೇ ವಿಂಗಡಿಸಿಕೊಂಡು ಮೂರು ಹೆಜ್ಜೆಗಳನ್ನು ಸ್ವರ್ಗ-ಮರ್ತ್ಯ-ಪಾತಾಲಲೋಕಗಳಲ್ಲಿಟ್ಟನೆಂದೂ ಆ ಪರಮಾತ್ಮನ ಪಾದಧೂಳಿಯಿಂದ ಈ ಇಡಿಯ ಜಗತ್ತೆಲ್ಲವೂ ವ್ಯಾಪ್ತವಾಗಿದೆಯೆಂದೂ ತಿಳಿಯಬೇಕು. ಮಂತ್ರಾಕ್ಷರಗಳಲ್ಲಿರುವ ''ತ್ರೇಧಾ ನಿದಧೇ''- ಮೂರುಬಾರಿ ಹೆಜ್ಜೆಯಿಟ್ಟನು ; ಪಾಂಸುರೇ-ಧೂಳಿನಿಂದ ಕೂಡಿದ ಹೆಜ್ಜೆಯ ಜಾಗದಲ್ಲಿ, ಸಮೂಳ್ಹಂ- ಈ ಜಗತ್ತೆಲ್ಲವೂ ಚೆನ್ನಾಗಿ ಅಂತರ್ಗತವಾಗಿದೆ-ಎಂಬ ಶಬ್ದಗಳಿಂದ ಈ ಅರ್ಥವು ತಿಳಿದುಬರುವದರಿಂದ ಸಮಸ್ತವಿಶ್ವವೂ ಭಗವಂತನ ಪಾದಮಾತ್ರವೇ-ಎಂಬುದು ಸಿದ್ಧವಾಗುತ್ತದೆ. ಇಂಥ ಪರಮಪವಿತ್ರವಾದ ಜಗತ್ತಿನಲ್ಲಿ ಅದೇ ವಿಷ್ಣುವೇ ಪೃಥಿವ್ಯಾದಿಪಂಚಮಹಾಭೂತಗಳ ರೂಪದಿಂದ ಪ್ರವೇಶಿಸಿ ಸ್ಥಾವರಜಂಗಮಭೂತಗಳಾಗಿ ಹರಡಿಕೊಂಡಿರುತ್ತಾನೆ. 'ಭೂತಾನಿ ವಿಷ್ಣುಃ........' ಎಂಬ ವಿಷ್ಣುಪುರಾಣದ ಶ್ಲೋಕವು ಇದೇ ಅರ್ಥವನ್ನು ಸಾರುತ್ತಿದೆ. ಹೀಗೆ ಭಗವಂತನು ಸರ್ವವ್ಯಾಪಕನೂ ಸರ್ವಾತ್ಮನೂ ಆಗಿದ್ದರೂ ಅವನನ್ನು ಮಾತ್ರ ಬಿಟ್ಟು ಉಳಿದೆಲ್ಲವನ್ನೂ ಅರಿಯುತ್ತಿರುವ ಹಾಗೂ ಅರಿತುಕೊಳ್ಳಲು ಹವಣಿಸುತ್ತಿರುವ ಮಾನವನ ದಡ್ಡತನಕ್ಕೆ ಏನನ್ನಬೇಕು ? ಯಾವ ಒಂದನ್ನರಿತರೆ ಎಲ್ಲವನ್ನೂ ಅರಿತಂತಾಗುವದೆಂದು ವೇದವಾಣಿಯು ಹೇಳುತ್ತಿದೆಯೋ ಅದರ ಕಡೆಗೆ ನಾವೇಕೆ ಕಿವಿಗೊಡಲೊಲ್ಲೆವು ? ಇಷ್ಟೇ ಅಲ್ಲ. ನಾವು ಬದುಕಿರುವದಕ್ಕೆ ಆಧಾರವಾಗಿರುವ ಭೂಮಿ-ನೀರು-ಮುಂತಾದವುಗಳ ಜೊತೆಗೆ ನಾವು ಉಪಯೋಗಿಸುತ್ತಿರುವ ಪ್ರತಿಯೊಂದು ಪದಾರ್ಥವೂ ವಿಷ್ಣುವಿನ ಪಾದಸ್ಪೃಷ್ಟವೇ ಆಗಿದ್ದು ಆತನ ಪಾದಧೂಳಿಯಿಂದ ಪವಿತ್ರವೇ ಆಗಿರುತ್ತದೆ. ಆದರೂ

ಒಮ್ಮೆಯಾದರೂ ಇವುಗಳನ್ನು ಭೋಗಿಸುವಾಗ ನಮಗೆ ವಿಷ್ಣುವಿನ ನೆನಪೇಕೆ ಆಗಲೊಲ್ಲದು ? ಎಂದು ವಿಚಾರಮಾಡಿದರೆ ನಾವು ವೇದಗಳ ಅಧ್ಯಯನವನ್ನೂ ಅರ್ಥಾನುಸಂಧಾನವನ್ನೂ ವೇದೋಪಬೃಂಹಕಳೆಂದು ಪ್ರಸಿದ್ಧವಾಗಿರುವ ಪುರಾಣೇತಿಹಾಸಗಳ ಶ್ರವಣವನ್ನೂ ಕೈಬಿಟ್ಟಿರುವದೇ ಕಾರಣವಾಗಿದೆ. ಆದ್ದರಿಂದ ಇನ್ನು ಮುಂದೆಯಾದರೂ ವಿದ್ಯಾಭ್ಯಾಸಪದ್ಧತಿಯಲ್ಲಿ ವೇದ-ಪುರಾಣಾದಿಗಳ ಸಾಮಾನ್ಯಜ್ಞಾನವಾದರೂ ಕಡ್ಡಾಯವಾಗುವಂತೆ ಏರ್ಪಡಿಸಲೇಬೇಕು ; ಇಲ್ಲವಾದರೆ ಮುಂದೆ ಮುಂದೆ ಮಾನವನು ದಾನವನೇ ಆಗಿ ಹರಿದ್ವೇಷಿಯೂ ಲೋಕಕಂಟಕನೂ ಆಗುವದು ಖಂಡಿತ. ದೇಶದ ನಾಯಕರುಗಳು ಎಲ್ಲಕ್ಕಿಂತ ಮೊದಲು ಈ ಸಮಸ್ಯೆಯನ್ನು ಪರಿಶೀಲಿಸಬೇಕು. ಈಗ ಮುಂದಿನ ಮಂತ್ರವನ್ನು ನೋಡೋಣ :

**ತ್ರೀಣಿ ಪದಾ ವಿಚಕ್ರಮೇ ವಿಷ್ಣುರ್ಗೋಪಾ ಅದಾಭ್ಯಃ ।**
**ಅತೋ ಧರ್ಮಾಣಿ ಧಾರಯನ್ ॥ ೩ ॥**

ಅದಾಭ್ಯಃ- ಯಾರಿಂದಲೂ ಹಿಮ್ಮೆಟ್ಟಿಸಲು ಅಸಾಧ್ಯನಾದ, ಗೋಪಾಃ- ಜಗತ್ಪಾಲಕನಾದ ವಿಷ್ಣುವು ಮೂರು ಪಾದಗಳನ್ನು ಇಡುವಾಗ, ಧರ್ಮಾಣಿ ಧಾರಯನ್-ಪ್ರವೃತ್ತಿ-ನಿವೃತ್ತಿರೂಪವಾದ ವೈದಿಕಧರ್ಮಗಳನ್ನು ಉದ್ಧಾರ ಮಾಡುತ್ತಾ ಕ್ರಮಿಸಿದನು-ಎಂದು ಈ ಮಂತ್ರದ ಅಭಿಪ್ರಾಯ. ವಿಷ್ಣುವು ಧರ್ಮಕ್ಕೆ ಪ್ರಭುವು- ಎಂದು ಮಹಾಭಾರತದಲ್ಲಿಯೂ ತಿಳಿಸಿದೆ. ಆತನು ಪಾದಕ್ರಮಣ ಮಾಡಿದ್ದೇ ಧರ್ಮೋದ್ಧಾರಕ್ಕಾಗಿ ಎಂದು ತಿಳಿಯಬೇಕು. ಆತನು ಹೆಜ್ಜೆಯನ್ನು ಮುಂದಿಟ್ಟನೆಂದರೆ ಜಯವೇ ಸರಿ. ಏಕೆಂದರೆ ಯಾರಿಂದಲೂ ಆತನನ್ನು ಹಿಮ್ಮೆಟ್ಟಿಸಲು ಸಾಧ್ಯವೇ ಇಲ್ಲ. ಆತನ ಹೆಸರನ್ನು ಹೇಳಿದ ಮಾತ್ರಕ್ಕೇ ಜಯವೂ ಭೂತಿಯೂ ಸಂಪತ್ತೂ ಮಳೆಗೆರೆಯುತ್ತಿರುವಾಗ ಇನ್ನು ಅವನ ಸಾನ್ನಿಧ್ಯವೂ ನಾಯಕತ್ವವೂ ಪಾದಾಕ್ರಮಣವೂ ಅಜೇಯವೆಂದು ಹೇಳುವದೇನಿದೆ ? ಆದ್ದರಿಂದ ಭಗವಂತನು ಪಾದಗಳನ್ನು ಬೆಳೆಸಿದಲ್ಲೆಲ್ಲ ಧರ್ಮವು ವೃದ್ಧಿಯಾಗಿ ಅಧರ್ಮವು ನಾಶವಾಗುತ್ತದೆ. ಸೂರ್ಯನು ಬೆಳಗಿದಲ್ಲೆಲ್ಲ ಭಯವೂ, ಕತ್ತಲೆಯೂ ಹೋಗಿ ಸುಖಸಂತೋಷಗಳು ದೊರಕುವಂತೆ ಭಗವಂತನು ಬಿಜಯಮಾಡಿಸಿದ ಸ್ಥಳಗಳಲ್ಲೆಲ್ಲ ವಿಜಯವೂ ಕೀರ್ತಿಯೂ ಆನಂದ-ಹರ್ಷಗಳ ಪ್ರವಾಹವೂ ಹರಿಯುವವು. ಇಂಥ ನಾರಾಯಣನು ಧರ್ಮಗಳನ್ನು ಧರಿಸುವದೆಂದರೆ ತಾನೇ ಅನುಷ್ಠಾನ

ಮಾಡಿಯೂ ತೋರಿಸುತ್ತಾನೆ. ರಾಮಕೃಷ್ಣಾದ್ಯವತಾರಗಳಲ್ಲಿ ಪ್ರವೃತ್ತಿ ಧರ್ಮದ ಮರ್ಮವನ್ನು ತನ್ನ ನಡೆಯಿಂದಲೇ ಜಗತ್ತಿಗೆ ತಿಳಿಸಿಕೊಟ್ಟಿರುತ್ತಾನೆ. ನರ-ನಾರಾಯಣಾದ್ಯವತಾರಗಳಲ್ಲಿ ನಿವೃತ್ತಿಧರ್ಮವನ್ನು ಅಸಾಧಾರಣರೀತಿಯಿಂದ ಆಚರಿಸಿ ಆದರ್ಶವನ್ನು ನೀಡಿರುತ್ತಾನೆ. ಹೀಗೆಯೇ ಧರ್ಮಿಷ್ಠರಾದವರನ್ನೂ ತಪಸ್ವಿಗಳನ್ನೂ ಸಾತ್ತ್ವಿಕರನ್ನೂ ಬೆಂಬಲಿಸಿ ಅವರ ಪಕ್ಷಕ್ಕೆ ನಿಂತು- ದುಷ್ಟರು ಅವನನ್ನು ಧರ್ಮಪಕ್ಷಪಾತಿಯೆಂದು ದೂರಿದರೂ ಅದನ್ನೇ ಬಿರುದನ್ನಾಗಿ ಸ್ವೀಕರಿಸಿ- ಧರ್ಮಸಂರಕ್ಷಣೆಯನ್ನು ತ್ರೈಲೋಕ್ಯದಲ್ಲಿಯೂ ಕೈಗೊಂಡಿರುತ್ತಾನೆ. ಈಗಲೂ ಭಗವಂತನು ಪ್ರಸನ್ನನಾಗಿಯೇ ಇದ್ದು ಧರ್ಮನಿಷ್ಠರನ್ನು ಕೈಹಿಡಿದು ನಡೆಸುತ್ತಲೇ ಇದ್ದಾನೆ. ನಾವು ಶ್ರದ್ಧೆಯಿಂದ ಅವನನ್ನು ಬಳಿಸಾರಿ ಕೃತಾರ್ಥರಾಗುವದು ಮಾತ್ರ ಉಳಿದಿದೆ. ಅಂಥ ಬುದ್ಧಿಯನ್ನೂ ಅವನೇ ದಯಪಾಲಿಸಬೇಕಾಗಿದೆ.

**ವಿಷ್ಣೋಃ ಕರ್ಮಾಣಿ ಪಶ್ಯತ ಯತೋ ವ್ರತಾನಿ ಪಸ್ಪಶೇ ।**
**ಇಂದ್ರಸ್ಯ ಯುಜ್ಯಃ ಸಖಾ ॥ ೪ ॥**

ಈ ಮಂತ್ರವು ಋತ್ವಿಜರೇ ಮುಂತಾದವರನ್ನು ಕುರಿತು ಹೀಗೆ ಹೇಳುತ್ತಿದೆ : "ಎಲೈ ಕರ್ಮನಿಷ್ಠರೆ, ನೀವು ಈ ಭಗವಂತನಾದ ವಿಷ್ಣುವಿನ ಅದ್ಭುತವಾದ ಕರ್ಮಗಳನ್ನು (ಅನುಷ್ಠಾನಗಳನ್ನು) ನೋಡಿರಿ. ಯಾವ ಈತನ ದಯೆಯಿಂದಲೇ ಯಜಮಾನನು ವ್ರತಾದಿ-ಅಗ್ನಿಹೋತ್ರಾದಿಕರ್ಮಗಳನ್ನು ಪಸ್ಪಶೇ-ಮುಟ್ಟುವನು-ಎಂದರೆ ಮಾಡಲು ಸಮರ್ಥನಾಗಿರುವನು ; ಮತ್ತು ಈತನು ಇಂದ್ರನಿಗೆ ತಕ್ಕ ಜೊತೆಗಾರನಾಗಿರುವನು" ಎಂದು ಘೋಷಿಸುತ್ತಿದೆ. ಇದರ ಅಭಿಪ್ರಾಯವೇನೆಂದರೆ: ಭಗವಂತನನ್ನು ನೋಡಿಯೇ ನಾವೂ ಒಳ್ಳೆಯದನ್ನು ಕಲಿಯಬೇಕಾಗಿದೆ. ವಿಷ್ಣುವು ಪುರುಷರಾದ ನಮಗೆಲ್ಲರಿಗಿಂತ ಪುರುಷೋತ್ತಮನೆನಿಸಿದ್ದಾನೆ. ಮೇಲುಪಂಕ್ತಿಯನ್ನು ನೋಡಿಕೊಂಡು ಹುಡುಗರು ಅಕ್ಷರಗಳು ದುಂಡಾಗಲು ಕಾಪಿ (Copy) ಬರೆಯುವಂತೆ ನಾವು ನಾರಾಯಣನ ಚರ್ಯೆಗಳನ್ನು ನೋಡಿಕೊಂಡು ವರ್ಣಾಶ್ರಮಧರ್ಮಗಳನ್ನು ಅನುಷ್ಠಾನಮಾಡಬೇಕು. ಏಕೆಂದರೆ ಆತನು ಎಲ್ಲಾ ಆಶ್ರಮಿಗಳಿಗೂ ಆದರ್ಶನಾಗಿದ್ದಾನೆ. ಅವನಿಗೆ ಧರ್ಮಾಚರಣೆಯಿಂದ ಪಡೆಯಬೇಕಾದ ಫಲವಾಗಲಿ ಪ್ರಯೋಜನವಾಗಲಿ ಏನೇನೂ ಇರುವದಿಲ್ಲ. ಆದರೂ 'ಯದ್ಯದಾಚರತಿ ಶ್ರೇಷ್ಠಃ' ಎಂಬ ನ್ಯಾಯದಂತೆ ಎಲ್ಲಾ ಧರ್ಮಗಳನ್ನೂ ತಾನೇ ನಡೆದು ಜಗತ್ತಿಗೆ ತೋರಿಸುತ್ತಿದ್ದಾನೆ. ಇದನ್ನೇ ಪಶ್ಯತ-'ನೋಡಿರಿ'- ಎಂದು

ಶ್ರುತಿಯು ಎಚ್ಚರಿಸುತ್ತಿದೆ. ಮತ್ತು ಧರ್ಮಾನುಷ್ಠಾನವು ನಡೆಯಬೇಕಾದರೂ ಅದರಲ್ಲಿ ಪ್ರವೃತ್ತಿಯುಂಟಾಗಬೇಕಾದರೂ ಮಹಾವಿಷ್ಣುವೇ ಕಾರಣನು. ಆತನ ಪ್ರೇರಣೆಯಿಲ್ಲವಾದರೆ ನಾವು ಧರ್ಮಮಾರ್ಗವನ್ನು ಅವಲಂಬಿಸಲಾಗುವದೇ ಇಲ್ಲ. ಆದ್ದರಿಂದ ಯಜಮಾನನು 'ಪಸ್ಪಶೇ' ಎಂದರೆ ಧರ್ಮಕಾರ್ಯಗಳನ್ನು ಮನಮುಟ್ಟಿ ಕೈಗೊಳ್ಳಬೇಕಾದರೆ ವಿಷ್ಣುವಿನ ಪ್ರೇರಣೆಯೇ ಬೇಕು. ಮಾಧ್ವಮತಾನುಯಾಯಿಗಳಂತೂ ತಮ್ಮ ಕರ್ಮಾರಂಭದಲ್ಲಿ 'ಭಾರತೀರಮಣಮುಖ್ಯಪ್ರಾಣಾಂತರ್ಗತ ಶೋಭನದೇವತಾಂತರ್ಯಾಮಿ ಶ್ರೀ ಲಕ್ಷ್ಮೀನಾರಾಯಣಸ್ಯ ಪ್ರೇರಣಯಾ' ಎಂದು ಕಡ್ಡಾಯವಾಗಿ ಹೇಳಿಯೇ ಹೇಳುತ್ತಾರೆ. ಇದು ಸರ್ವಥಾ ಸತ್ಯವು.

ಇಂಥ ನಾರಾಯಣನು ಇಂದ್ರನಿಗೆ ಸಖನು. ಇಂದ್ರನೆಂದರೆ ತ್ರೈಲೋಕ್ಯಾಧಿಪತಿಯು. ಆತನೂ ಬಲಿರಾಜನ ಕಾಲಕ್ಕೆ ತನ್ನ ಐಶ್ವರ್ಯವನ್ನು ಕಳೆದುಕೊಂಡಿದ್ದಾಗ ಭಗವಂತನೇ ವಾಮನಾವತಾರಮಾಡಿ ತ್ರಿವಿಕ್ರಮನಾಗಿ ಬೆಳೆದು ಇಂದ್ರನಿಗೆ ರಾಜ್ಯವನ್ನು ಕೊಡಿಸಿದವನಾಗಿ 'ಉಪೇಂದ್ರ'ನೆಂದೇ ಪ್ರಸಿದ್ಧನಾದನು. ಆದರೆ ಇದು 'ಉಪರಾಷ್ಟ್ರಪತಿ'ಯಂತಲ್ಲ. ಇಂದ್ರನ ಸರ್ವಸ್ವವೂ ಭಗವದಧೀನವೇ. ಆದರೂ ವ್ಯಾವಹಾರಿಕವಾಗಿ ಉಪೇಂದ್ರನೆನಿಸಿದನು. ಇಂಥ ನಾರಾಯಣನ ಮಹಿಮೆಯನ್ನು ಕೊಂಡಾಡಲು ವೇದದಿಂದಲ್ಲದೆ ಮತ್ತೆ ಯಾರಿಂದಾದೀತು ?

**ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ ।**
**ದಿವೀವ ಚಕ್ಷುರಾತತಮ್ ॥ ೫ ॥**

''ಆ ವಿಷ್ಣುವಿನ ಪರಮಪದವನ್ನು ಸೂರಿಗಳು ಯಾವಾಗಲೂ ನೋಡುತ್ತಾರೆ. ಅದು ಆಕಾಶದಲ್ಲಿ ಕಣ್ಣನ್ನು ಚೆನ್ನಾಗಿ ಹಾಯಿಸಿ ನೋಡಿದಂತೆ ಕಂಡುಬಂದಿದೆ'' ಎಂದು ಈ ಮಂತ್ರದ ಸಾಮಾನ್ಯಾರ್ಥವು. ಹಿಂದಿನ ಮಂತ್ರಗಳಲ್ಲಿ ವಿಷ್ಣುವಿನ ಮಹಿಮೆಯನ್ನು ಕೊಂಡಾಡಿತ್ತು. ಈ ಮಂತ್ರದಲ್ಲಿ ಆ ಭಗವಂತನ ಸ್ಥಾನವನ್ನು ವರ್ಣಿಸಿರುತ್ತದೆ. ಆ ಸ್ಥಾನವು ಯಾವಾಗಲೂ ವಿರಾಜಮಾನವಾಗಿರುವದು. ಅದರ ಬೆಳಕು ಉಳಿದ ಬೆಳಕುಗಳನ್ನೆಲ್ಲ ಮಂಕುಮಾಡಿರುವದು. ಆದ್ದರಿಂದ ಸಾಮಾನ್ಯಜನರ ಕಣ್ಣಿಗೆ ಅದು ಕತ್ತಲೆಯಾಗಿಯೇ ಕಾಣಿಸುವದು. ಏಕೆಂದರೆ ನಮ್ಮ ಕಣ್ಣುಗಳು ಕತ್ತಲೆಯಲ್ಲಿ ಹೇಗೆ ನೋಡಲಾರವೋ ಹಾಗೆಯೇ ಬೆಳಕು ಅತಿಯಾದರೂ ಕಾಣಲಾರವು. ಕಣ್ಣುಗತ್ತಲೆಯಾಗಿಬಿಡುವದು. ಸೂರ್ಯನನ್ನು

ನಾವು ಬರಿಗಣ್ಣಿನಿಂದ ನೋಡಹೋದಾಗ ಉಂಟಾಗುವ ಅನುಭವವನ್ನು ಇಲ್ಲಿ ನೆನೆಯಿಸಿಕೊಳ್ಳಬೇಕು. ಹಾಗೆಯೇ ವಿಷ್ಣುವಿನ ಪರಮಪದವೂ ಸಾವಿರಸೂರ್ಯರ ಪ್ರಕಾಶಕ್ಕಿಂತಲೂ ತೇಜೋಮಯವಾಗಿರುವದರಿಂದ ಅಜ್ಞಾನಿಗಳು ಇದನ್ನು ನೋಡಲಾರರು. ಜ್ಞಾನಿಗಳಾದರೋ, ತಮ್ಮ ದಿವ್ಯಚಕ್ಷುಸ್ಸಿನ ಸಹಾಯದಿಂದ ಯಾವಾಗಲೂ ನೋಡುತ್ತಾರೆ ; ಎಂದರೆ ಅವರ ದೃಷ್ಟಿಯು ಅತೀಂದ್ರಿಯವಾದುದು ; ಸೂಕ್ಷ್ಮವಾದುದು, ಪ್ರತ್ಯಙ್ಮುಖವಾದುದು- ಎಂದರ್ಥ. ಬ್ರಹ್ಮಚರ್ಯ, ಶಮದಮಾದಿಸಾಧನಗಳಿಂದಲೂ ಯೋಗ-ತಪ ಆದಿ ಅನುಷ್ಠಾನಗಳಿಂದಲೂ ಅವರ ದೃಷ್ಟಿಯು ಸಂಸ್ಕೃತವಾಗಿರುವದರಿಂದ ಅವರಿಗೆ ನಿರಾಯಾಸವಾಗಿ ಆ ಪರಮಪದವು ಗೋಚರವಾಗಿರುತ್ತದೆ. ವಿಷ್ಣುವೆಂದರೂ ಪರಮಪದವೆಂದರೂ ಒಂದೇ ತತ್ತ್ವವು. ವಿಗ್ರಹದ ಕೈಕಾಲುಗಳು -ಎಂದರೆ ಕಲ್ಲೇ ಹೇಗೋ ಹಾಗೆ ವ್ಯಾಪಕವೂ ತೇಜೋಮಯವೂ ಆದ ವಿಷ್ಣು ತತ್ತ್ವವೇ ಪರಮವೂ ಶಾಶ್ವತವೂ ಅವ್ಯಯವೂ ಆದ ಪದವಿಯಾಗಿರುವದು. ಅದು ಸೂರಿಗಳಿಗೆ ಯಾವಾಗಲೂ ಗೋಚರವಾಗಿರುತ್ತದೆ ; ಸೂರಿಗಳೆಂದರೆ ಜ್ಞಾನಿಗಳೆಂದು ಅರ್ಥ. ಕಣ್ಣನ್ನು ಆಕಾಶದತ್ತ ಅರಳಿಸಿ ನೋಡಿದಾಗ ಹೇಗೆ ಯಾವ ಅಡೆತಡೆಯೂ ಇಲ್ಲವಾದ್ದರಿಂದ **ಆತತಮ್**- ಸುತ್ತಲೂ ವಿಶಾಲವಾಗಿ ಹರಡಿರುವ ಆಕಾಶವು ಕಂಡುಬರುವದೋ ಆ ವೈಶಾಲ್ಯವೇ ಆನಂದಕ್ಕೆ ನಿಮಿತ್ತವಾಗಿರುವದೋ ಹಾಗೆ ಪರಮಪದವು ಸೂರಿಗಳಿಗೆ ಗೋಚರವಾಗಿರುತ್ತದೆ. ಅವರು ಆ ಆನಂದದಲ್ಲೇ ಮುಳುಗಿರುತ್ತಾರೆ- ಎಂದಭಿಪ್ರಾಯ. ವಿಷ್ಣುವು ವ್ಯಾಪಕನಲ್ಲವೆ ?

**ತದ್ವಿಪ್ರಾಸೋ ವಿಪನ್ಯವೋ ಜಾಗೃವಾಂಸಃ ಸಮಿಂಧತೇ ।**
**ವಿಷ್ಣೋರ್ಯತ್ ಪರಮಂ ಪದಮ್** ॥೬॥

"ಆ ಪರಮಪದವನ್ನು ಮೇಧಾವಿಗಳು ಎಚ್ಚರದಿಂದ ವಿಶೇಷವಾಗಿ ಸ್ತೋತ್ರಮಾಡುತ್ತಾ ಪ್ರಕಾಶಗೊಳಿಸುತ್ತಾರೆ" ಎಂದು ಈ ಮಂತ್ರದ ಸಾಮಾನ್ಯಾರ್ಥವು. ಪರಮಪದವು ಲೌಕಿಕರಿಗೂ ಸಂಸಾರಿಗಳಿಗೂ ದುರ್ಲಭವೇ ಆಗಿರುವದು. ಆದರೆ ಸೃಷ್ಟಿಯಲ್ಲಿ ಇಂಥ ಪಾಮರರೇ ಹೆಚ್ಚು ಜನರಿರುತ್ತಾರೆ. ಆದ್ದರಿಂದ ಪರಮಪದವಿಯ ವಿಚಾರವಾಗಿ ತಿಳಿಯಬೇಕಾದರೆ ಸೂರಿಗಳಾದ ವಿದ್ವಾಂಸರಲ್ಲಿಯೇ ಕೇಳಬೇಕು. ಅವರಾದರೊ, **ಜಾಗೃವಾಂಸಃ**- ಎಚ್ಚರವುಳ್ಳವರಾಗಿ ಸ್ತುತಿಸುತ್ತಿರುತ್ತಾರೆ. ಇಲ್ಲಿ ಎಚ್ಚರವೆಂದರೆ ವೇದಶಬ್ದಗಳ ಉಚ್ಚಾರಣೆ,

ಅರ್ಥಾನುಸಂಧಾನಗಳಲ್ಲಿ ಮೈಮರೆಯದೆ ಏಕಾಗ್ರತೆಯಿಂದ **ಸಮಿಂಧತೇ**-ಸ್ತುತಿಸುವವರೆಂದರ್ಥ. ಹೀಗೆ ವರ್ಣಿಸುವಾಗ ಆ ಪದವಿಯನ್ನು ಅವರು ಮತ್ತಷ್ಟು ಪ್ರಕಾಶಗೊಳಿಸಿದವರಾಗುವರು. ಹೇಗೆ ಒಂದು ಅಪೂರ್ವವಾದ ವಸ್ತುವನ್ನು-ಉದಾಹರಣೆಗೆ-ಕಾಮಧೇನುವೆಂದರೇನು ? ಎಂಬುದನ್ನು ಜನರಿಗೆ ತಿಳಿಸಬೇಕಾದರೆ ಆ ಧೇನುವಿನ ಹುಟ್ಟು, ಬೆಳವಣಿಗೆ ಅದರ ಮಹಿಮೆ, ಗುಣಾತಿಶಯಗಳನ್ನೆಲ್ಲ ವರ್ಣಿಸುವದರಿಂದ ಅದನ್ನು ಪ್ರಕಾಶಗೊಳಿಸಿದಂತಾಗುವದೋ ಹಾಗೆ-ವಿಷ್ಣುಪದವಿಯನ್ನು ಕುರಿತು ಸೂರಿಗಳಾದವರು ಅಸಾಧಾರಣವಾದ ವೇದವಾಕ್ಯಗಳಿಂದ **ವಿಪನ್ಯವಃ**- ವಿಶೇಷವಾಗಿ ಹೊಗಳುತ್ತಾ ವರ್ಣಿಸುವರು. ಇದೇ ಪ್ರಕಾಶನವು. ಇಂಥ ಸೂರಿಗಳು **ವಿಪ್ರಾಸಃ**-ಮೇಧಾವಿಗಳೂ ಆಗಿರುವರು. ಹೀಗೆ ಮೇಧಾವಿಗಳೂ ಜಾಗರೂಕರೂ ವಿದ್ವಾಂಸರೂ ಆದ ಸೂರಿಗಳೇ ಶ್ರಮಪಟ್ಟು ಸದಾ ಕಾಲವೂ ವರ್ಣಿಸಿದ ಮೇಲೂ ಇನ್ನೂ ಪ್ರಕಾಶಮಾನವಾಗಿ ಬೆಳಗುತ್ತಾ ಸ್ತುತಿಪ್ರಪಂಚವನ್ನೂ ಮೀರಿ ನೆಲೆಗೊಂಡಿರಬೇಕಾದರೆ ಆ ಪರಮಪದವು ಇನ್ನೆಂಥದ್ದಿರಬೇಕು ? ಅದು ಪ್ರಾಪಂಚಿಕರಿಗೆ ಹೇಗೆತಾನೆ ಲಭ್ಯವಾದೀತು ? ಎಂದು ವಿಷ್ಣುಪದವಿಯ ಮಹಿಮೆಯನ್ನು ಹೊಗಳಲಾಗಿದೆ.

ಈ ಎರಡು ಮಂತ್ರಗಳನ್ನೂ ಸಾಮಾನ್ಯವಾಗಿ ವೈದಿಕರೆಲ್ಲರೂ ದೇವರಿಗೆ ಮಂತ್ರಪುಷ್ಪಕಾಲದಲ್ಲಿ ಹೇಳುತ್ತಾರೆ. ಆದರೆ ಹಾಗೆ ಹೇಳುವಾಗ ಈ ಪರಮಪದವಿಯ ಉತ್ಕರ್ಷವನ್ನೂ ಅನುಸಂಧಾನಮಾಡಿಕೊಂಡರೆ ಎಷ್ಟು ಚೆನ್ನಾಗಿದ್ದೀತು ? ಈ ಮಂತ್ರವು ಶಿವ, ವಿಷ್ಣು- ಮುಂತಾದ ಭೇದಭಾವನೆಯ ಅರ್ಥವನ್ನೇನೂ ತಿಳಿಸುವದಿಲ್ಲ. ತೇಜೋಮಯವಾದ ವಿಷ್ಣುಧಾಮವು ಶಿವವು-ಎಂದರೆ ಮಂಗಳಸ್ವರೂಪವೂ ಆಗಿರುವದು. ತೇಜಸ್ಸಿಗೆ ಯಾವದೇ ನಾಮರೂಪಗಳ ಪರಿಚ್ಛೇದವಾಗಲಿ ಭೇದವಾಗಲಿ ಇರುವದಿಲ್ಲ. ಹಾಗೆಯೇ ತೇಜಸ್ಸಿಗೆ ಮುಖ, ಕೈಕಾಲುಗಳು-ಮುಂತಾದ ಅವಯವಗಳಾಗಲಿ ಶರೀರವಾಗಲಿ ಇಲ್ಲ. ಇಂಥ ತೇಜಃಸ್ವರೂಪವನ್ನು ಅನುಸಂಧಾನಮಾಡುತ್ತಿದ್ದ ನಮ್ಮ ಋಷಿಗಳು ಎಂಥ ತಪಸ್ವಿಗಳಾಗಿದ್ದಿರಬೇಕು ?

**ವಿಷ್ಣೋರ್ನು ಕಂ ವೀರ್ಯಾಣಿ ಪ್ರವೋಚಂ ಯಃ ಪಾರ್ಥಿವಾನಿ ವಿಮಮೇ ರಜಾಂಸಿ । ಯೋ ಅಸ್ಕಭಾಯದುತ್ತರಂ ಸಧಸ್ಥಂ ವಿಚಕ್ರಮಾಣ ಸ್ತ್ರೇಧೋರುಗಾಯಃ ॥೭॥**

ಈ ಮಂತ್ರದಲ್ಲಿ 'ಎಲೈ ಮಾನವರಿರಾ, ಇದೋ, ವಿಷ್ಣುವಿನ ಮಹಿಮೆಯನ್ನು ಹೇಳಲಿದ್ದೇನೆ' ಎಂದು ಶ್ರುತಿಯು ಪ್ರಾರಂಭಿಸಿ ''ಯಾವನು ಮೂರು ಲೋಕಗಳ ಅಭಿಮಾನಿದೇವತೆಗಳನ್ನೂ ರಮಣೀಯವಾಗಿ-ರಂಜನಾತ್ಮಕವಾಗಿ ಸೃಷ್ಟಿಮಾಡಿರುವನೋ ಮತ್ತು ಅತಿವಿಸ್ತೀರ್ಣವಾದ ಅಂತರಿಕ್ಷವನ್ನು ಈ ಲೋಕಗಳಿಗೆಲ್ಲ ಆಶ್ರಯವಾಗಿ ಹೆಣೆದಿರುವನೋ-ಎಂದರೆ ಧ್ರುವವಾಗಿ ಸ್ಥಾಪಿಸಿರುವನೋ ಅಂಥ ವಿಷ್ಣುವು ತಾನು ಪಾದಕ್ರಮಣಮಾಡುತ್ತಾ ಮಹಾತ್ಮರಿಂದ ಗಾನಮಾಡಲ್ಪಡುತ್ತಾ ಇರುವನಷ್ಟೆ! ಅವನನ್ನು ನೀವೂ ಸ್ತೋತ್ರಮಾಡಿರಿ''- ಎಂದು ತಿಳಿಸಿರುತ್ತದೆ. ಇಲ್ಲಿ ನು-ಕಂ-ಎಂದರೆ ಅತಿಶೀಘ್ರವಾಗಿ ಎಂದರ್ಥ. ಹಾಗೆಯೇ ಪಾರ್ಥಿವಾನಿ ಎಂಬುದಕ್ಕೆ ಮೂರು ಲೋಕಗಳ (ಸ್ವರ್ಗ-ಮರ್ತ್ಯ-ಪಾತಾಳ) ಒಡೆಯರಾದ ಅಗ್ನಿ-ವಾಯು-ಸೂರ್ಯರೆಂಬವರನ್ನು ಎಂದರ್ಥ. ಅಸ್ಕಭಾಯತ್- ಎಂದರೆ ನಿರ್ಮಿಸಿದನು ಎಂದರ್ಥ. ಸಧಸ್ಥಂ -ಜೊತೆಗೂಡಿಸುವ ಸ್ಥಾನವುಳ್ಳ ಎಂದೂ ಉರುಗಾಯಃ- ಎಂದರೆ ಮಹಾತ್ಮರಿಂದ ಸ್ತೋತ್ರಮಾಡಲ್ಪಡುವವನು- ಎಂದೂ ಶಬ್ದಾರ್ಥವಿದೆ.

ಈಗ ಒಟ್ಟರ್ಥವನ್ನು ನೋಡೋಣ. ಲೋಕತ್ರಯಗಳೂ ಅವುಗಳ ಅಭಿಮಾನಿದೇವತೆಗಳೂ ಸಾಮಾನ್ಯರಲ್ಲ. ಭೌತಿಕವಿಜ್ಞಾನವು ಗಾಳಿ, ಬೆಳಕು, ಪೃಥಿವಿಗಳ ತತ್ತ್ವವನ್ನು ವಿವೇಚಿಸಿದೆಯಾದರೂ ಇವುಗಳು ಹೇಗೆ ಹೊರಬಂದವು ? ಎಲ್ಲಿಂದ ಬಂದವು ? ಎಂಬುದನ್ನಾಗಲಿ ಅಂತರಿಕ್ಷದಲ್ಲಿ ಆದಿತ್ಯ ನಕ್ಷತ್ರಾದಿಗಳು ಹೇಗೆ ಸ್ಥಾಪಿಸಲ್ಪಟ್ಟಿವೆ? ಎಂಬುದನ್ನಾಗಲಿ ಇನ್ನೂ ತಿಳಿದಿಲ್ಲ. ಪುರಾತನವಾದ ವೇದವು 'ಇವೆಲ್ಲ ವಿಷ್ಣುವಿನ ವೀರ್ಯದಿಂದಲೇ ಸ್ಥಾಪಿಸಲ್ಪಟ್ಟಿವೆ. ಹಾಗೂ ವಿಷ್ಣುವು ಅಂತರಿಕ್ಷರೂಪದಿಂದ ಎಲ್ಲವನ್ನೂ ತನ್ನಲ್ಲಿಯೇ ಧರಿಸಿರುತ್ತಾನೆ ; ಆತನ ಈ ವ್ಯಾಪಕವಾದ ಶರೀರವು ಇಂದ್ರಿಯಗೋಚರವಲ್ಲ. ಅದು ಎಲ್ಲಾ ಪೃಥಿವ್ಯಾದಿ ಪಂಚಭೂತಗಳನ್ನೂ ಭೂರಾದಿಲೋಕಗಳನ್ನೂ ಆಯಾ ಲೋಕಪಾಲಕರುಗಳ ಸಮೇತವಾಗಿ ತನ್ನಲ್ಲಿಯೇ ಧಾರಣೆಮಾಡಿಕೊಂಡಿದೆ. ಮತ್ತು ಜೀವರುಗಳ ವಿಹಾರಕ್ಕೆ ತಕ್ಕಂತೆ ರಂಜನೀಯವಾಗಿ ವಿವಿಧವಾದ ರೂಪದಿಂದ ಪ್ರಕಟಮಾಡಿದೆ. ಮೇಲಕ್ಕೂ ಕೆಳಕ್ಕೂ ಹರಡಿಕೊಂಡಿದೆ. ಸರ್ವಾಧಾರವಾಗಿದೆ'- ಎಂದು ವರ್ಣಿಸುತ್ತಿದೆ. ಭಗವಂತನ ವೀರ್ಯಾಂಶವೊಂದೇ ಹೀಗೆ ಲೋಕಗಳಾಗಿ ಒಡೆದುಕೊಂಡಿದ್ದರೆ ಇನ್ನು ಜ್ಞಾನ-ಶಕ್ತಿ-ಬಲ-ತೇಜಸ್ಸುಗಳು ಆತನಲ್ಲಿ ಎಷ್ಟಿರಬಹುದು ?

ಈಗಲಾದರೂ ನಾವು ಅವುಗಳನ್ನರಿಯಲು ವೇದಗಳ ಕಡೆಗೆ ಕಣ್ಣುಹಾಯಿಸ ಬೇಡವೆ?

**ಪ್ರತದ್ವಿಷ್ಣುಃ ಸ್ತವತೇ ವೀರ್ಯೇಣ ಮೃಗೋ ನ ಭೀಮಃ ಕುಚರೋ ಗಿರಿಷ್ಠಾಃ । ಯಸ್ಯೋರುಷು ತ್ರಿಷು ವಿಕ್ರಮಣೇಷ್ವಧಿ ಕ್ಷಿಯಂತಿ ಭುವನಾನಿ ವಿಶ್ವಾ ॥ ೮ ॥**

ಈ ಮಂತ್ರದಲ್ಲಿ ವಿಷ್ಣುವಿನ ಮಹಿಮೆಯನ್ನು ವರ್ಣಿಸಲಾಗಿದೆ. ಯಸ್ಯ-ಯಾವ ಮಹಾವಿಷ್ಣುವಿನ ವೀರ್ಯದಿಂದ ಎಲ್ಲಾ ಭುವನಗಳೂ ಅಧಿಕ್ಷಿಯಂತಿ-ಆಶ್ರಯಿಸಲ್ಪಟ್ಟು ಇದ್ದುಕೊಂಡಿರುವವೋ ಆ ಪ್ರಸಿದ್ಧನಾದ ದೇವನು ತನ್ನ ಮೂರು ಹೆಜ್ಜೆಗಳ ಪಾದಕ್ರಮಣವೆಂಬ ಮಹಾಕಾರ್ಯದಿಂದ ಸ್ತೋತ್ರಮಾಡಲ್ಪಡುತ್ತಿರುವನು. ಹೇಗೆ ಬೆಟ್ಟದಲ್ಲಿರುವ ಸಿಂಹವು ತನ್ನ ಪರಾಕ್ರಮದಿಂದ ಉಳಿದ ಪ್ರಾಣಿಗಳಿಗೆ ಭಯಂಕರವಾಗಿದ್ದು ಎಲ್ಲ ಪ್ರಾಣಿಗಳಿಂದಲೂ ರಾಜನೆಂದು ಸ್ತೋತ್ರಮಾಡಲ್ಪಡುವದೋ ಹಾಗೆ ದೇವೋತ್ತಮನಾದ ನಾರಾಯಣನು ಸರ್ವಜಗತ್ತಿನ ಜೀವರುಗಳಿಂದಲೂ ಸರ್ವೋತ್ತಮನೆಂದೇ ಸ್ತುತಿಸಲ್ಪಡುತ್ತಿರುವನು-ಎಂದು ಈ ಮಂತ್ರದ ಅಭಿಪ್ರಾಯವು. ಇಲ್ಲಿರುವ ಕೆಲವು ಪದಗಳು ವಿಷ್ಣುವಿಗೆ ಹೇಗೆ ಹೊಂದುತ್ತವೆ ? ಎಂಬುದನ್ನು ನೋಡೋಣ. ಕುಚರ-ಎಬುದೊಂದು ವಿಷ್ಣುವಿಗೆ ವಿಶೇಷಣವಾಗಿರುವ ಪದವು. ಇದರ ಸಾಮಾನ್ಯಾರ್ಥವು ಕುತ್ಸಿತವಾದ. ಎಂದರೆ ಸಣ್ಣಪುಟ್ಟ ಬೇಟೆಗಳಂಥ ಕೆಲಸವನ್ನೂ ಮಾಡುತ್ತಾ ಬೆಟ್ಟದಲ್ಲಿ ತಿರುಗಾಡುವ ಸಿಂಹಕ್ಕೆ ಅನ್ವಯಿಸುತ್ತದೆ. ಆದರೆ ಇದೇ ಪದವು ವಿಶೇಷಾರ್ಥದಲ್ಲಿ ಕು-ಎಂದರೆ ಎಲ್ಲಾ ಭೂಪ್ರದೇಶಗಳಲ್ಲಿಯೂ, ಹೆಚ್ಚೇಕೆ ? ಲೋಕತ್ರಯಗಳಲ್ಲಿಯೂ ಶಕ್ತಿರೂಪದಿಂದ ವ್ಯಾಪಿಸಿಕೊಂಡು ರಾಕ್ಷಸಕೋಟಿಗಳೆಂಬ ಶತ್ರುವಧವನ್ನು ಲೀಲಾಜಾಲವಾಗಿ ಮಾಡುತ್ತಾ ಗಿರಿಷ್ಠಾಃ-ಬೆಟ್ಟದ ಮೇಲಿರುವಂತೆ- ಅತ್ಯುನ್ನತ ಸಾಹಿತ್ಯಗಳಾದ ವೇದಗಳಲ್ಲಿ ವಾಸಿಸುತ್ತಿರುವ ಹಾಗೂ ವೇದಗಳ ಮೂಲಕವೇ ತಿಳಿದುಬರುವಂಥ ಸ್ವರೂಪವುಳ್ಳವನಾಗಿರುವ ಮಹಾವಿಷ್ಣುವೇ ಕುಚರನು- ಎಂಬಭಿಪ್ರಾಯವನ್ನು ಕೊಡುವದು. ಭೀಮನೆಂದರೆ ದೇವತೆಗಳಿಗೂ ಭಯವನ್ನುಂಟುಮಾಡುವ ಬ್ರಹ್ಮಸ್ವರೂಪನು ಎಂದರ್ಥ. ಕೇನೋಪನಿಷತ್ತಿನ ಕಥೆಯಂತೆ ಯಕ್ಷನಾಗಿ ತೋರಿಕೊಂಡು ಇಂದ್ರಾದಿಗಳಿಗೂ ಬುದ್ಧಿಕಲಿಸಿದ್ದು, ಹಾಗೂ ತೈತ್ತಿರೀಯೋಪನಿಷತ್ತಿನ ವರ್ಣನೆಯಂತೆ ಈತನ ಭಯದಿಂದಲೇ ಗಾಳಿ, ಸೂರ್ಯ, ಅಗ್ನಿ, ಇಂದ್ರಾದಿಗಳು

ತಮ್ಮ ತಮ್ಮ ಕಾರ್ಯಗಳಲ್ಲಿ ವ್ಯಾಪೃತರಾಗಿರುವದು- ಇವುಗಳೆಲ್ಲ ಸೂಚಿತವಾಗುತ್ತವೆ. ಇಂಥ ವೀರ್ಯಶಾಲಿಯಾದ ವಿಷ್ಣುವಿನ ಉರುಷು-ವಿಸ್ತೀರ್ಣವಾದ ವಿಕ್ರಮಣಗಳಲ್ಲಿ ಎಂದರೆ ಹೆಜ್ಜೆಗಳ ಪ್ರಸಾರದಲ್ಲಿ ಸಮಸ್ತಬ್ರಹ್ಮಾಂಡವೂ ಸೇರಿಹೋಗಿರುವದರಲ್ಲಿ ಆಶ್ಚರ್ಯವೇನಿದ್ದೀತು ? ಈ ದೇವದೇವನಾದ ಹಾಗೂ ಶತ್ರುಸಂಹಾರಕನೂ ಜಗತ್ಪಾಲಕನೂ ಆದ ಭಗವಂತನು ಪ್ರಸ್ತವತೇ-ವಿಶೇಷವಾಗಿ ಸ್ತುತಿಸಲ್ಪಡುತ್ತಿದ್ದಾನೆ-ಎಂದು ಅಭಿಪ್ರಾಯ.

**ಪ್ರ ವಿಷ್ಣವೇ ಶೂಷಮೇತು ಮನ್ಮ ಗಿರಿಕ್ಷಿತ ಉರುಗಾಯಾಯ ವೃಷ್ಣೇ । ಯ ಇದಂ ದೀರ್ಘಂ ಪ್ರಯತಂ ಸಧಸ್ಥಮೇಕೋ ವಿಮಮೇ ತ್ರಿಭಿರಿತ್ಪದೇಭಿಃ ॥೯॥**

ಈ ಮಂತ್ರವೂ ವಿಷ್ಣು ಸ್ತುತಿಯಾಗಿದೆ. ಸರ್ವವ್ಯಾಪಕನಾದ ಆ ವಿಷ್ಣುವಿಗೆ ನಾವುಗಳು ಮನನರೂಪವಾಗಿ ಅರ್ಪಿಸುವ ಸ್ತುತಿಗಳು ಬಲರೂಪದಿಂದ ಸೇರಲಿ ! ಆತನು ಗಿರಿಕ್ಷಿತ-ಎಂದರೆ ಬೆಟ್ಟದಂತೆ ಎತ್ತರವಾಗಿರುವವನು- ಉನ್ನತವ್ಯಕ್ತಿಯು-ಎಂದರ್ಥ. ಹಾಗೂ ಬಹುಜನರಿಂದ ಸ್ತುತಿಸಲ್ಪಡುವ, ಭಕ್ತರುಗಳಿಗೆ ಇಷ್ಟಾರ್ಥಗಳನ್ನು ಮಳೆಗರೆಯುವ ಆತನು ಈ ಅತಿವಿಸ್ತಾರವಾದ ಭುವನತ್ರಯಗಳನ್ನೂ ತಾನೊಬ್ಬನೇ ಕೇವಲ ಮೂರು ಹೆಜ್ಜೆಗಳಿಂದ ಅಳೆದುಬಿಟ್ಟನಲ್ಲವೆ ? ಎಂದು ಈ ಮಂತ್ರದ ಅರ್ಥ. ಇಲ್ಲಿ ಶೂಷ ಎಂಬ ಪದಕ್ಕೆ ಭಾಷ್ಯಕಾರರು 'ಹೆಚ್ಚಿನ ಬಲವನ್ನು' ಎಂದರ್ಥಮಾಡಿದ್ದಾರೆ. ನಾವುಗಳು ಹಾಗೂ ದೇವತೆಗಳೂ ಋಷಿಗಳೂ ಸೇರಿ ಮಾಡುವ ಸ್ತೋತ್ರಗಳು ಹಾಗೂ ಪೂಜಾರ್ಚನದಾನಯಜ್ಞಾಧ್ಯಯನಾದಿ ಪವಿತ್ರಕರ್ಮಗಳು ವಿಷ್ಣುವಿನ ಬಲವನ್ನು ವರ್ಧಿಸುವವೆಂದು ಪುರಾಣಗಳಲ್ಲಿ ವರ್ಣಿಸಿರುತ್ತದೆ. ಏಕೆಂದರೆ ಭೂಮಿಯಲ್ಲಿ ಸತ್ಕರ್ಮಗಳು ಹೆಚ್ಚಿದರೆ ಊರ್ಧ್ವಲೋಕಗಳಲ್ಲಿಯೂ ಸಮೃದ್ಧಿಯುಂಟಾಗುವದು. ಹೇಗೆ ಪ್ರಜೆಗಳು ಉದ್ಯೋಗಶೀಲರೂ ಕರ್ತವ್ಯನಿಷ್ಠರೂ ಪ್ರಾಮಾಣಿಕರೂ ದೇಶಭಕ್ತರೂ ಆದರೆ ರಾಜ್ಯವು ಬಲಗೊಳ್ಳುವದೋ, ರಾಷ್ಟ್ರವು ಉನ್ನತಮಟ್ಟಕ್ಕೇರುವದೋ ಹಾಗೆ-ಎಂದು ತಿಳಿಯಬೇಕು. ಸ್ಥಿತಿಕರ್ತನಾದ ಮಹಾವಿಷ್ಣುವಿಗೆ ತನ್ನ ಸೃಷ್ಟಿಯ ಪ್ರಜೆಗಳಾದ ಜೀವರುಗಳ ಸಹಕಾರವು ವ್ಯವಹಾರದೃಷ್ಟಿಯಿಂದ ಬೇಕಾಗಿರುತ್ತದೆ. **ಪ್ರಭುವಿನ ನೆಮ್ಮದಿಯು ಪ್ರಜೆಗಳ ಸದ್ಗುಣಗಳನ್ನೇ ಅವಲಂಬಿಸಿರುತ್ತದೆ.** ಆದ್ದರಿಂದ ವಿಷ್ಣುವು ಪ್ರಜೆಗಳಿಂದ ಚೆನ್ನಾಗಿ ಸ್ತೋತ್ರಮಾಡಲ್ಪಟ್ಟರೆ-ಎಂದರೆ ಆರಾಧಿಸಲ್ಪಟ್ಟರೆ ಅವನ ಬಲವು ಮತ್ತಷ್ಟು ವೃದ್ಧಿಗೊಂಡು ಆ ಜಗನ್ನಾಯಕನು ಸಮರ್ಥನಾಗುವನು. ಇದು

ನಾವು ಮಾಡಬೇಕಾದ ಕರ್ತವ್ಯವಾಗಿದೆ. ಲೋಕದಲ್ಲಿ ಶಾಂತಿಯು ನೆಲಸಬೇಕಾದರೆ ಹೇಗೆ ಸಜ್ಜನರನ್ನೂ ವಿದ್ಯಾವಂತರನ್ನೂ ತಪಸ್ವಿಗಳನ್ನೂ ಪ್ರೋತ್ಸಾಹಿಸಿ ಅವರ ಕೈಗಳನ್ನೂ ಬಲಪಡಿಸಬೇಕೋ, ಹಾಗಿಲ್ಲದೆ ದುಷ್ಟರನ್ನೂ ಲೋಕಕಂಟಕರನ್ನೂ ಪ್ರೋತ್ಸಾಹಿಸಿದರೆ ವಿನಾಶದಕಡೆಗೇ ನಾವು ಜಾರಿಬಿಡುವೆವೋ ಹಾಗೆಯೇ ಇಲ್ಲಿಯೂ ತಿಳಿಯಬೇಕು. ಜಗದ್ವ್ಯಾಪಾರವೂ ನಮ್ಮ ವ್ಯವಹಾರದಂತೆಯೇ ಒಂದು ವ್ಯವಸ್ಥೆಯಾಗಿರುವದು ಅದನ್ನು ಬಲಪಡಿಸುವವರೇ ಭಗವದ್ಭಕ್ತರು. ಆ ಕಾರ್ಯವು ವಿಷ್ಣುವಿನ ಆರಾಧನಾರೂಪವೇ ಆಗಿರುವದು. ಹೀಗೆ ಋಷಿಗಳು ವೇದದಲ್ಲಿ ಭಗವಂತನನ್ನು ಹೊಗಳುತ್ತಾ ಅವನ ಕೈಯನ್ನೇ ಏಕೆ ಬಲಪಡಿಸ ಬೇಕೆಂಬುದಕ್ಕೆ ಕಾರಣವನ್ನು ಹೀಗೆ ಕೊಡುತ್ತಾರೆ : 'ಕೇಳಿರಿ ; ಯಾವ ಮಹಾಮಹಿಮನಾದ ವಿಷ್ಣುವೊಬ್ಬನೇ (ಯಾರ ಸಹಾಯವೂ ಇಲ್ಲದೆ) ಅತಿ ವಿಸ್ತಾರವಾದ ಲೋಕತ್ರಯಗಳನ್ನೂ ಅವುಗಳಲ್ಲಿರುವ ಸ್ಥಾವರಜಂಗಮಭೂತ ಗಳೊಡನೆ ಕೇವಲ ತನ್ನ ಮೂರು ಹೆಜ್ಜೆಗಳಿಂದ ಆಕ್ರಮಿಸಿಕೊಂಡನಲ್ಲ ! ಇಂಥ ಮಹಾಪುರುಷನು ನಮಗೆಲ್ಲ ಒಡೆಯನಾಗಲು ಎಷ್ಟುಮಟ್ಟಿಗೆ ಅರ್ಹನಾಗಿರು ವನು? ಬೇರೊಬ್ಬ ಇಂಥ ನಾಯಕನು ನಮಗೆ ದೊರೆತಾನೆ ? ಇಂಥ ಪ್ರಭುವನ್ನು ನಾವು ಜಗತ್ತಿನಲ್ಲಿ ಎಲ್ಲಿಯೂ ಇನ್ನೊಬ್ಬನನ್ನು ಕಾಣೆವು' ಎಂದು ಈ ಮಂತ್ರದ ಉತ್ತರಾರ್ಧದಲ್ಲಿ ಸ್ತುತಿಮಾಡಲಾಗಿದೆ.

**ಯಸ್ಯ ತ್ರೀ ಪೂರ್ಣಾ ಮಧುನಾ ಪದಾನ್ಯಕ್ಷೀಯಮಾಣಾ**
**ಸ್ವಧಯಾ ಮದಂತಿ । ಯ ಉ ತ್ರಿಧಾತು ಪೃಥಿವೀಮುತ**
**ದ್ಯಾಮೇಕೋ ದಾಧಾರ ಭುವನಾನಿ ವಿಶ್ವಾ ॥೧೦॥**

ಯಾವ ಭಗವಂತನ ಪೂರ್ಣವಾದ, ಮಧುರವಾದ ಅಮೃತವನ್ನು ಸೂಸುವ ಪಾದಕ್ಷೇಪಗಳು ಎಂದೆಂದಿಗೂ ಕ್ಷೀಣವಾಗದೆ ಅನ್ನಾದಿದ್ರವ್ಯಗಳಿಂದ ಎಲ್ಲಾ ಜೀವರಾಶಿಗಳನ್ನೂ ತೃಪ್ತಿಗೊಳಿಸುತ್ತಿವೆಯೋ, ಯಾವನು ಮೂರು ಧಾತು (ಮೂಲವಸ್ತು)ಗಳನ್ನು ಜಗತ್ತಿನ ಪರಿಪಾಲನೆಗಾಗಿ ಭೂಮಿ. ಅಂತರಿಕ್ಷ ದ್ಯುಲೋಕ ಗಳ ರೂಪದಿಂದಲೂ (ಮಣ್ಣು-ನೀರು-ಬೆಂಕಿಗಳ ರೂಪದಿಂದಲೂ) ಸೃಷ್ಟಿಮಾಡಿ ಒಂದಕ್ಕೊಂದನ್ನು ಬೆರೆಸಿ ಜಗತ್ತಿನಲ್ಲಿರುವ ಪ್ರಾಣಿಗಳಿಗೆ ಜೀವನಾಧಾರವಾಗಿ ಮಾಡುವನೋ (ಅವನನ್ನು ಸ್ತೋತ್ರಮಾಡುವೆವು)- ಎಂದು ಈ ಮಂತ್ರದ ಸಾಮಾನ್ಯಾರ್ಥವು. ಭಗವಂತನ ಕಾಲಿಡುವಿಕೆಯನ್ನು ಇನ್ನಷ್ಟು ಅರ್ಥಪೂರ್ಣವಾಗಿ

ಇಲ್ಲಿ ಬಿಡಿಸಲಾಗಿದೆ. ಮೂರು ಹೆಜ್ಜೆಗಳೆಂದರೆ ಮೂರು ರೀತಿಯ ಅಭಿವೃದ್ಧಿಗಳು ಎಂದರ್ಥ. ಹೇಗೆ ಒಂದು ಕೆಲಸವನ್ನಾರಂಭಿಸದಾಗ 'ನಿಮ್ಮ ಕೈಗಾರಿಕೆ ಹೇಗಿದೆ ?' ಎಂದರೆ ಮಾಲೀಕನು 'ಈಗಾಗಲೆ ಎದ್ದುನಿಂತು ಹೆಜ್ಜೆಯಿಡುತ್ತಿದೆ' ಎಂದರೆ ಬೆಳೆಯುತ್ತಿದೆ- ಎದರ್ಥವೋ ಹಾಗೆಯೇ ಭಗವಂತನು ತನ್ನ ಸ್ವಸ್ವರೂಪದಲ್ಲಿದ್ದವನು ಜಗತ್ ಸೃಷ್ಟಿಯನ್ನು ಮಾಡುವೆನೆಂದಾಲೋಚಿಸಿ ಹೆಜ್ಜೆಯಿಡಲಾಗಿ ಅದು ತೇಜಸ್ಸು, ಅಪ್ಪು, ಪೃಥಿವಿಗಳಾಗಿ ಮಾರ್ಪಟ್ಟಿತು- ಎಂದರ್ಥ. ಛಾಂದೋಗ್ಯೋಪನಿಷತ್ತಿನಲ್ಲಿ ಈ ಅರ್ಥವನ್ನು ವಿವರಿಸಲಾಗಿದೆ. ಈ ಮೂರು ಸೃಷ್ಟಿಗಳೂ ಭಗವಂತನ ಪಾದಾರ್ಪಣವೇ ಆಗಿರುವವು. ಅವುಗಳಲ್ಲಿ ಒಂದೊಂದೂ ಪ್ರಾಣಿಗಳ ಜೀವನಾಧಾರವಾಗಿರುವವು. ಹೇಗೆಂದರೆ ಪೃಥಿವೀ ಎಂಬುದು ಸರ್ವಸಸ್ಯಾಶ್ರಯವೂ ಪ್ರಾಣಿಗಳ ಬದುಕಿಗೆ ಆಧಾರವೂ ಆಗಿದ್ದು ಆಹಾರ, ಖನಿಜಗಳು, ಎಣ್ಣೆ- ಇತ್ಯಾದಿಗಳನ್ನು ಕೊಡುತ್ತಿರುವದು. ಎಷ್ಟು ಬಾರಿ ಬಿತ್ತಿದರೂ ಬೆಳೆಯಾಗುವ ಭೂಮಿಯು ಭಗವಂತನ ಅಮೃತವಾದ ಪಾದದ ಅಂಶವಾಗದೆ ಹೋಗಿದ್ದಲ್ಲಿ ಅದಕ್ಕೆ ಈ ಯೋಗ್ಯತೆಯು ಎಲ್ಲಿ ಬರುತ್ತಿತ್ತು ? ಯಾವ ವಿಜ್ಞಾನಿಯು ತಾನೆ ಇದನ್ನು ಅಲ್ಲಗಳೆದಾನು ? ಹಾಗೆಯೇ ನೀರುಕೂಡ ವಿಷ್ಣುವಿನ ಪಾದೋದ್ಭವವೇ ಆಗಿರುವದು. ಸಮುದ್ರ, ನದಿ- ಮುಂತಾದವು ಸೃಷ್ಟಿಕಾಲದಿಂದ ಈವರೆಗೂ ಬತ್ತುತ್ತಿದ್ದರೂ ಹರಿಯುತ್ತಿದ್ದರೂ ಖಾಲಿಯಾಗದೆ ಇರಲು ಕಾರಣವೇನೆಂದರೆ : ಪರಮಾತ್ಮನ ಪಾದಾಮೃತದ ಮಹಿಮೆಯೇ ಸರಿ. ಅದೇ ರೀತಿಯಾಗಿ ಸೂರ್ಯ, ಚಂದ್ರ, ಅಗ್ನಿ, ವಿದ್ಯುದಾದಿರೂಪವಾದ ತೇಜಸ್ಸು ಕೂಡ ಅಮೃತಪಾದದ ಅಂಶವಾಗಿದ್ದುಕೊಂಡೇ ನಿತ್ಯವಾಗಿ ಬೆಳಗುತ್ತಿರುವದು. ಪ್ರಲಯದವರೆಗೂ ಇದು ತಣ್ಣಗಾಗುವ ಸಂಭವವಿಲ್ಲ. ಹೀಗೆ ಮೂರು ಧಾತುಗಳ ಸೃಷ್ಟಿಯೆಂಬುದೇ ಮೂರು ಹೆಜ್ಜೆಗಳನ್ನಿಡುವಿಕೆಯು. ಈ ಹೆಜ್ಜೆಗಳ ಇಡುವಿಕೆಯೆಂಬ ಸೃಷ್ಟಿಯು ತಾನು ಕ್ಷೀಣವಾಗದೆ ಎಲ್ಲಾ ಪ್ರಾಣಿಗಳನ್ನೂ ಅನ್ನದಿಂದ ಬೆಳೆಸುತ್ತಿದೆ. ಇದಕ್ಕೆಲ್ಲ ಶ್ರೀಮಹಾವಿಷ್ಣುವೇ ಕಾರಣನೂ, ಪ್ರಭುವೂ ಆಗಿದ್ದಾನೆ ಎಂದು ಸ್ತೋತ್ರ ಮಾಡಲಾಗಿದೆ.

ಈಗ ಈ ಸೃಷ್ಟಿಯೆಲ್ಲವನ್ನೂ ತಾನೊಬ್ಬನೇ ಆದ ವಿಷ್ಣುವು ಧರಿಸಿದ್ದಾನೆಂಬುದು ಹೇಗೆಂದು ವಿಚಾರಿಸೋಣ. ಭಗವಂತನ ಸ್ವರೂಪಕ್ಕೆ ಹೋಲಿಸಿದರೆ ಬ್ರಹ್ಮಾಂಡವು ಏಕಾಂಶಮಾತ್ರ. ಆದರೆ ನಮ್ಮಗಳ ದೃಷ್ಟಿಯಿಂದ ಇದು ತೀರ

ಅದ್ಭುತವಾಗಿದೆ. ಈಗ ಮನುಷ್ಯನಿಗೆ ತಿಳಿದುಬಂದಿರುವಷ್ಟು ಸೃಷ್ಟಿವೈಚಿತ್ರ್ಯಗಳನ್ನು ವಿಚಾರಮಾಡಿದರೂ ಸಾಕು ; ಭಗವಂತನ ಮಹಿಮೆಯು ಗೊತ್ತಾದೀತು. ಮುಖ್ಯವಾಗಿ ಇಲ್ಲಿ ತಿಳಿಯಬೇಕಾದದ್ದೆಂದರೆ : ಜಗತ್ತು ಸೃಷ್ಟಿಕಾಲದಿಂದಲೂ ಸವೆಯುತ್ತಲೇ ಇದ್ದರೂ ಹುಟ್ಟುತ್ತಲೂ ಇರುವಂತೆ ವ್ಯವಸ್ಥೆಗೊಳಿಸಿರುವದೇ ಭಗವಂತನ ಅಮೃತಾಂಶದ ತತ್ತ್ವವು. ವಿಷ್ಣುಸಹಸ್ರನಾಮದಲ್ಲಿ 'ಅಮೃತಾಂಶೂದ್ಭವಃ' ಎಂದೇ ಈತನನ್ನು ಕರೆಯಲಾಗಿದೆ. ಆದ್ದರಿಂದ ನಾವು ಈ ಪ್ರಪಂಚದಲ್ಲಿ ಅಮೃತಾನ್ವೇಷಕರಾಗಬೇಕು. ಪ್ರಲಯದಲ್ಲಿ ಕೂಡ ಜಗತ್ತು ಪರಮಾತ್ಮನಲ್ಲೇ ಒಂದಾಗಿದ್ದು ಪುನಃ ಸೃಷ್ಟಿಯಲ್ಲಿ ಹೊರಟುಬರುವದರಿಂದ 'ವಿಶ್ವಂ-ವಿಷ್ಣುಃ' (ವಿಶ್ವವೆಲ್ಲವೂ ವಿಷ್ಣುವೇ) ಎಂಬ ಸಿದ್ಧಾಂತಕ್ಕೆ ಹಾನಿಯೇ ಇರುವದಿಲ್ಲ. ಆದರೆ ಆ ವಿಷ್ಣುವು ತಾನು ಹಾಗೂ ಜಗತ್ತು ಎಂದು ಎರಡಾಗಿ ಈಗ ಕಂಡುಬರುವನಾದರೂ ನಿಜವಾಗಿ 'ಏಕೋ ದಾಧಾರ' ಎಂದಂತೆ ತಾನೊಬ್ಬನೇ ಪರಮಾರ್ಥವಾಗಿರುತ್ತಾನೆ. ಶ್ರೀಶಂಕರಾಚಾರ್ಯರು ತಿಳಿಸಿರುವಂತೆ ನೀರು-ನೊರೆ- ಎಂದು ಎರಡಾಗಿ ವ್ಯವಹರಿಸಿದಾಗಲೂ ನೀರೊಂದೇ ಸತ್ಯವಾಗಿರುವಂತೆ ಭಗವಂತನೊಬ್ಬನೇ ಅದ್ವಿತೀಯಸತ್ಯನಾಗಿರುತ್ತಾನೆ. ಅವನ ಅಮೃತಾಂಶವೇ ಜಗತ್ತಾಗಿ ತೋರುತ್ತಿದೆ. ಇಲ್ಲಿ ಅಂಶವೆಂಬುದು ಉಪಚಾರವು. ಅಮೃತವೇ ಜಗತ್ತಾಗಿದೆ-ಎಂದೇ ತಾತ್ಪರ್ಯವು. ಆ ಅಮೃತವು ವಿಷ್ಣುವೇ. ಅವನು ತಾನೊಬ್ಬನೇ- ಎಂದು ತಿಳಿಯಬೇಕು. ಜಗತ್ತು ಸತ್ಯ ಎನ್ನುವ ವಾದಿಗಳು ಕೂಡ ಆ ಸತ್ಯತ್ವವು ವಿಷ್ಣುವಿಗಿಂತ ಅನ್ಯವಲ್ಲ, ಸ್ವತಂತ್ರವಲ್ಲ- ಎಂದೇ ಹೇಳಬೇಕಾಗಿರುವದರಿಂದ 'ಏಕಃ' ಎಂಬಿದೇ ಪರಮಸಿದ್ಧಾಂತವಾಗಿದೆ.

**ತದಸ್ಯ ಪ್ರಿಯಮಭಿಪಾಥೋ ಅಶ್ಯಾಂ ನರೋ ಯತ್ರ ದೇವ ಯವೋ ಮದಂತಿ । ಉರುಕ್ರಮಸ್ಯ ಸ ಹಿ ಬಂಧುರಿತ್ಥಾ ವಿಷ್ಣೋಃ ಪದೇ ಪರಮೇ ಮಧ್ವ ಉತ್ಸಃ ॥೧೧॥**

"ಆ ಮಹಾವಿಷ್ಣುವಿನ ಪ್ರಿಯವಾದ ಅಂತರಿಕ್ಷವು ಎಲ್ಲೆಲ್ಲೂ ವ್ಯಾಪಿಸಿರುವದು. ವಿಷ್ಣುವನ್ನು ಸೇರಬಯಸುವ ನರರು ಯಜ್ಞದಾನಾದಿಗಳಿಂದ ಅದರಲ್ಲಿ ಆನಂದವನ್ನು ಹೊಂದುತ್ತಿರುವರು. ಉರುಕ್ರಮನಾದ, ಬಂಧುವಾದ ಆತನ ಪರಮಪದದಲ್ಲಿ ಕೇವಲ ಮಧುರವಾದ (ಸುಖ)ವೇ ಹರಿಯುತ್ತಿರುವದು"-ಎಂಬಿದು ಈ ಮಂತ್ರದ ಸಾಮಾನ್ಯಾರ್ಥವು. ಭಗವಂತನು ಎಲ್ಲಾ

ಕಡೆಯಲ್ಲಿಯೂ ಇರುವವನಾದರೂ ಅವನಿಗೆ ಪ್ರಿಯವಾದ ವಾಸಸ್ಥಾನವೆಂದರೆ ಆಕಾಶವೇ ಸರಿ. ಏಕೆಂದರೆ ಪಂಚಮಹಾಭೂತಗಳಲ್ಲಿ ಆಕಾಶದಷ್ಟು ಸ್ವಚ್ಛವೂ ಭಗವಂತನಿಗೆ ಹೋಲಿಸಲು ತಕ್ಕದ್ದೂ ಆದ ಬೇರೊಂದು ವಸ್ತುವಿರುವದಿಲ್ಲ. ಇಂಥ ಆಕಾಶವನ್ನೇ ವಿಷ್ಣುಪದವೆಂಬ ಹೆಸರಿನಿಂದಲೂ ವ್ಯವಹರಿಸುವರು. ಇದು ಭಗವಂತನ ಲೋಕವೆಂದೇ ವೇದಗಳಲ್ಲಿ ಸ್ತುತಿಸಲ್ಪಟ್ಟಿರುವದು. ಈ ದಿವ್ಯಸ್ಥಾನ ವನ್ನು ಬಯಸುವ ಜನರು ಎಂದರೆ ಮುಕ್ತಿಯನ್ನು ಇಚ್ಛಿಸುವ ಸಾಧಕರು ಭಗವಂತ ನನ್ನೇ ಮತ್ತೆ ಮತ್ತೆ ಯಜ್ಞದಾನ ತಪ- ಆದಿ ಕರ್ಮಗಳಿಂದ ಆರಾಧಿಸುತ್ತಿರುವರು. ಈ ಮೂಲಕ ವಿಷ್ಣು ಭಗವಂತನನ್ನೇ ತಮ್ಮ ಹೃದಯಾಕಾಶದಲ್ಲಿಯೂ ಧ್ಯಾನದಿಂದ ನೆಲೆಗೊಲಿಸಿಕೊಂಡು 'ಮದಂತಿ'- ಆನಂದಪಡುತ್ತಿರುವರು. ಭಗವದ್ಭಕ್ತರು ಸಾಕ್ಷಾತ್ತಾಗಿಯೇ ವಿಷ್ಣುವಿನ ಶರೀರವಾದ ಆಕಾಶವನ್ನು ವಿಷ್ಣುಮಯವಾಗಿ ಕಂಡು ಕೊಂಡು ಆತನ ಆರಾಧನೆಯಿಂದ ತೃಪ್ತರಾಗಿದ್ದುಕೊಂಡಿರುವರು. ಇಂಥ ಹೆಚ್ಚಿನ ಪರಾಕ್ರಮಶಾಲಿಯೂ ಭಕ್ತಬಂಧುವೂ ಆದ ನಾರಾಯಣನು ತಾನೊಬ್ಬನೇ ಜಗದ್ರಕ್ಷಕನಾಗಿರುವನು. ಭಕ್ತರಿಗೆ ಮಾತ್ರವಲ್ಲದೆ ಇಡಿಯ ಸೃಷ್ಟಿಯಲ್ಲಿ ಲೋಕಬಂಧುವೇ ಆಗಿರುವನು - ಎಂದು ತಿಳಿಯಬೇಕು . ವಿಷ್ಣು ಸಹಸ್ರನಾಮ ಸ್ತೋತ್ರದಲ್ಲಿ ''ಲೋಕಬಂಧುರ್ಲೋಕನಾಥಃ'' ಎಂದೇ ಭೀಷ್ಮಾಚಾರ್ಯರು ಅವನನ್ನು ಸ್ತುತಿಸಿರುತ್ತಾರೆ. ಹೀಗೆ ವಿಷ್ಣುವಿನ ಪರಮಪದದಲ್ಲಿ ಯಾವಾಗಲೂ ಮಧ್ವ ಉತ್ಸಃ-ಮಧುರವಾದ ಅಮೃತರಸವು ಹರಿಯುತ್ತಿರುವದು - ಎಂದೂ ಶ್ರುತಿಯು ತಿಳಿಸುತ್ತಿದೆ. ಪರಮಾತ್ಮನೊಬ್ಬನೇ ಅಮೃತಸ್ವರೂಪನು. ನಾಮರೂಪ ಪ್ರಪಂಚವು ದುಃಖಮಯವು. ಆದ್ದರಿಂದ ವಿವೇಕಿಗಳು ಯಾವಾಗಲೂ ಊರ್ಧ್ವ ದೃಷ್ಟಿಯುಳ್ಳವರಾಗಿರುವರು - ಎಂದರೆ ಶಾಸ್ತ್ರದೃಷ್ಟಿಸಂಪನ್ನರಾಗಿರುವರು. ಅವರ ಜ್ಞಾನಚಕ್ಷುಸ್ಸಿಗೆ ಅಂತರಿಕ್ಷವೆಂಬ ಪರಮಪದವು ಮಧ್ವವಾಗಿ ಗೋಚರವಾಗುತ್ತಿರು ವದು. ಇದೇ ವಿಷ್ಣುವಿನ ಮಹಿಮೆಯು ಎಂದು ಭಾವ.

**ತಾ ವಾಂ ವಾಸ್ತೂನ್ಯುಶ್ಮಸಿ ಗಮಧ್ಯೈ ಯತ್ರ ಗಾವೋ ಭೂರಿ ಶೃಂಗಾ ಅಯಾಸಃ । ಅತ್ರಾಹ ತದುರುಗಾಯಸ್ಯ ವೃಷ್ಣಃ ಪರಮಂ ಪದಮವಭಾತಿ ಭೂರಿ ॥೧೨॥**

''ಎಲೈ ಪತ್ನೀಯಜಮಾನರುಗಳಿರಾ, ನಿಮಗಾಗಿ ಆ ಪಡೆಯಬೇಕಾದ ಸುಖನಿವಾಸಕ್ಕೆ ಯೋಗ್ಯವಾದ ಸ್ಥಾನಗಳನ್ನು ನಾವು ಇಚ್ಛಿಸುತ್ತೇವೆ- ಎಂದರೆ

ಅದಕ್ಕಾಗಿ ವಿಷ್ಣುವನ್ನು ಪ್ರಾರ್ಥಿಸುತ್ತೇವೆ. ಆ ಸ್ಥಾನಗಳು ಹೇಗಿವೆ ? ಎಂದರೆ ಅತ್ಯುನ್ನತವಾದ ರಶ್ಮಿ (ಬೆಳಕು)ಗಳಿಂದ ಕೂಡಿದ್ದು ಬಹುಜನರು ಬಯಸುವಂಥದ್ದಾಗಿದ್ದು ಅತಿ ವಿಸ್ತೃತವಾಗಿದ್ದುಕೊಂಡಿವೆ. ಹಾಗೂ ಅವು ಕಾಮಗಳನ್ನು ಮಳೆಗರೆಯುವ ಪರಾಕ್ರಮಿಯಾದ ವಿಷ್ಣುವಿನ ನಿರತಿಶಯಪದವಿಯಾಗಿದ್ದು ವಿರಾಜಮಾನವಾಗಿರುವವು'' ಎಂಬಿದು ಈ ಮಂತ್ರದ ಸಾಮಾನ್ಯಾರ್ಥವು. ಈ ಮಂತ್ರದಲ್ಲಿ ಋತ್ವಿಜರು ಯಜ್ಞಕಾಲಕ್ಕೆ ಯಜಮಾನನಿಗೂ ಹಾಗೂ ಆತನ ಪತ್ನಿಗೂ ವಿಷ್ಣುಪದವಿಯು ಪ್ರಾಪ್ತವಾಗಲೆಂದು ಪ್ರಾರ್ಥನೆಮಾಡುತ್ತಾ ಆ ವಿಷಯವನ್ನು ಯಜಮಾನನ ಗಮನಕ್ಕೆ ತರುತ್ತಿದಾರೆ. ಮೂಲದಲ್ಲಿರುವ ಗಾವಃ ಎಂಬ ಪದಕ್ಕೆ ರಶ್ಮಿಗಳೆಂದು ಯಾಸ್ಕರು ಅರ್ಥಮಾಡಿದ್ದಾರೆ. ಆದ್ದರಿಂದ ಭೂರಿಶೃಂಗಾಃ- ಎಂದರೆ ಬಹುಮುಖ್ಯವಾಗಿ ಎತ್ತರವಾಗಿ ಎಲ್ಲೆಲ್ಲಿಯೂ ಹರಡಿಕೊಂಡಿರುವ ರಶ್ಮಿಗಳುಳ್ಳ ದಿವ್ಯಲೋಕವು- ಎಂದಭಿಪ್ರಾಯವಾಗುತ್ತದೆ. ವಿಷ್ಣುವು ಹೇಗೆ ಒಬ್ಬನೋ ಹಾಗೆಯೇ ಅವನ ದಿವ್ಯಲೋಕವೂ ಅನ್ಯಾದೃಶವಾಗಿ ಅನಿತರಸಾಧಾರಣವಾಗಿರುವದು. ಅದಕ್ಕೆ ಸರಿಸಾಟಿಯಾದದ್ದು ಮತ್ತೊಂದಿರುವದೇ ಇಲ್ಲ. ಆದ್ದರಿಂದಲೇ ಅದನ್ನು 'ಪರಮಪದ'ವೆನ್ನುವರು. ಬಹುಜನ ಸಾಧಕರೂ ಆ ಲೋಕವನ್ನೇ ಬಯಸುತ್ತಿರುವರು. ಅಂಥ ಅಪ್ರಾಕೃತವಾದ ವಿಷ್ಣುಲೋಕವನ್ನು ಯಜ್ಞಕರ್ಮಗಳ ಮೂಲಕ ನಿಮಗೆ ದೊರಕುವಂತೆ ನಾವು ಪ್ರಾರ್ಥಿಸುತ್ತೇವೆ- ಎಂದು ಅಭಿಪ್ರಾಯ.

ಇಲ್ಲಿ ಯಜ್ಞವು ಋತ್ವಿಕ್- ಯಜಮಾನರುಗಳ ವ್ಯಾಪಾರರೂಪವಾದ ವೈದಿಕಕರ್ಮವಾಗಿದ್ದು ಯಜಮಾನನಿಗಾಗಿ ಋತ್ವಿಜರು ಪ್ರಾರ್ಥಿಸುತ್ತಿರುವದು ಸಮಂಜಸವಾಗಿದೆ. ಆದರೆ ಅಧ್ಯಾತ್ಮದೃಷ್ಟಿಯಿಂದ ಆತ್ಮನೇ ಯಜಮಾನನೆಂದೂ ಶ್ರದ್ಧೆಯೇ ಪತ್ನಿಯೆಂದೂ ವಾಕ್-ಪ್ರಾಣಾದಿಗಳೇ ಋತ್ವಿಜರೆಂದೂ ವರ್ಣಿಸಲ್ಪಟ್ಟಿರುವದರಿಂದ ಯಾವ ಸಾಧಕನಾದರೂ ಸರಿ, ತನ್ನ ವಾಕ್ಕುಗಳಿಂದ ಸ್ತುತಿರೂಪವಾದ ವಿಷ್ಣುಯಜ್ಞವನ್ನು ಮಾಡಿ ಆತ್ಮಕಲ್ಯಾಣವನ್ನು ಸಾಧಿಸಿಕೊಳ್ಳಬಹುದೆಂತಲೂ ಅರ್ಥಮಾಡಬಹುದಾಗಿದೆ. ಅಂಥವನಿಗೂ ಭೂರಿಶೃಂಗಗಳಾದ ಎಂದರೆ ಪರಮಪ್ರಕಾಶಮಾನವಾದ ವಿಷ್ಣುಲೋಕದ ಪ್ರಾಪ್ತಿಯಾಗುವದು. ಯಜ್ಞವು ಸ್ತುತಿ, ನಮಸ್ಕಾರ, ಧ್ಯಾನ, ಜಪ, ಪಾರಾಯಣಾದಿ- ಯಾವ ರೂಪದಲ್ಲಾದರೂ ಇರಬಹುದು. ಕಲಿಯುಗಕ್ಕೆ ಈ ಯಜ್ಞಗಳೇ ಶ್ರೇಷ್ಠ. ಏಕೆಂದರೆ ಒಬ್ಬೊಬ್ಬರೇ

ಮಾಡಿಬಿಡಬಹುದಾಗಿದೆ. ಅಂತೂ ಯಜ್ಞದಿದಂಲೇ ಯಜ್ಞಪುರುಷನ ಆನಂದ ಧಾಮವನ್ನು ನಾವು ಸಾಧಿಸಿಕೊಳ್ಳಬೇಕು.

**ಪ್ರ ವಃ ಪಾಂತಮಂಧಸೋ ಧಿಯಾಯತೇ ಮಹೇ ಶೂರಾಯ ವಿಷ್ಣವೇ ಚಾರ್ಚತ । ಯಾ ಸಾನುನಿ ಪರ್ವತಾನಾಮದಾಭ್ಯಾ ಮಹಸ್ತಸ್ಥತುರರ್ವತೇವ ಸಾಧುನಾ ॥೧೩॥**

''ಎಲೈ ಅಧ್ವರ್ಯುಗಳೇ ಮುಂತಾದವರಿರಾ, ನಿಮ್ಮನ್ನು ಕಾಪಾಡುವಂಥ ಸೋಮರೂಪವಾದ ಅನ್ನವನ್ನು, ಸ್ತೋತ್ರವನ್ನು ಬಯಸುವ ಇಂದ್ರ-ವಿಷ್ಣು ಎಂಬೀ ದೇವತೆಗಳಿಂದ ಪಡೆದುಕೊಳ್ಳಿರಿ ; ಈ ಇಬ್ಬರು ದೇವತೆಗಳೂ ತಮ್ಮನ್ನು ಪ್ರೀಣನ ಗೊಳಿಸುವ ಜನರಿಗೆ ವರಪ್ರದರಾಗಿರುವರು. ಹಾಗೂ ಬೇರೆ ಯಾರಿಂದಲೂ ಜಯಿಸಲಸಾಧ್ಯರೂ, ಮಹಾಮಹಿಮರೂ ಆಗಿದ್ದು- ಕುದುರೆಯ ಸವಾರಿಯಿಂದ ಎತ್ತರವಾದ ಪ್ರದೇಶವನ್ನು ತಲುಪುವಂತೆ- ಇವರುಗಳು ಉನ್ನತಸ್ಥಾನವನ್ನು ಗಳಿಸಿಕೊಂಡಿರುವರು'' ಎಂದು ಸಾಮಾನ್ಯಾರ್ಥವಾಗುತ್ತದೆ. ಇಲ್ಲಿ ಶ್ರುತಿಯು ಋತ್ವಿಜರನ್ನು ಸಂಬೋಧಿಸಿ ಹೇಳುತ್ತಿದೆ. ಯಜ್ಞವನ್ನು ಮಾಡಲು ಅನ್ನ ಸಮೃದ್ಧಿಯಿರಬೇಕು. ಇಲ್ಲವಾದರೆ ಅದು ನಡೆಯಲಾರದು. ಯಜ್ಞಕರ್ಮವಿಲ್ಲ ವಾದರೆ ಋತ್ವಿಜರು ನಿರುದ್ಯೋಗಿಗಳಾಗುವರು. ಆದ್ದರಿಂದ ಯಜಮಾನನಿಗಾಗಿ ಅವರು ಕೈಗೊಳ್ಳುವ ಆರ್ತ್ವಿಜ್ಯಕರ್ಮದಲ್ಲಿಯೂ ತಮ್ಮ ಸ್ವಂತ ಉಪಯೋಗ ಕ್ಕಾಗಿಯೂ ಅನ್ನಾದಿಗಳ ಪ್ರಾಪ್ತಿಗಾಗಿಯೂ ಇಂದ್ರ-ವಿಷ್ಣುಗಳನ್ನು ಅವರು ಸ್ತುತಿಸ ಬೇಕಾಗಿದೆ. ವಿಷ್ಣುವು ಯಜ್ಞಾಧಿಪತಿಯಾಗಿರುವಂತೆಯೇ ಇಂದ್ರನು ಬಲಾಧಿಪತಿ ಯಾಗಿರುವನು. ಶರೀರಬಲ, ವಾಗ್ಬಲ, ಮನೋದಾರ್ಢ್ಯಾದಿಗಳಿಲ್ಲದೆ ಋತ್ವಿಜರು ಯಜ್ಞಗಳನ್ನು ಕೈಗೊಳ್ಳಲಾಗುವದಿಲ್ಲ. ಆದ್ದರಿಂದ ಇಂದ್ರನ ಪ್ರಸಾದವೂ ಅಗತ್ಯವಾಗಿದೆ. ಈ ಇಬ್ಬರು ದೇವತೆಗಳೂ ಉಳಿದ ದೇವತೆಗಳಲ್ಲೆಲ್ಲ ಶ್ರೇಷ್ಠರು. ಏಕೆಂದರೆ ಇಂದ್ರನು ದೇವರಾಜನೇ ಆಗಿರುವನು. ವಿಷ್ಣುವು ದೇವತೆಗಳ ರಕ್ಷಕನೂ ಇಂದ್ರನಿಗೆ ಜೊತೆಗಾರನೂ ಆಗಿ ಉಪೇಂದ್ರನೆನಿಸಿರುವನು. ಆದ್ದರಿಂದ ಕರ್ಮ ಮಾರ್ಗದಲ್ಲಿ ಈ ವೇದಮಂತ್ರಗಳಲ್ಲಿ ತಿಳಿಸಿರುವಂತೆ ಈ ಉಭಯದೇವತೆಗಳನ್ನೂ ಪ್ರತ್ಯೇಕವಾಗಿಯೇ ಆರಾಧಿಸಬೇಕಾಗಿರುವದು. ಇಬ್ಬರೂ ಪರ್ವತದ ಮೇಲಿರುವ ವ್ಯಕ್ತಿಗಳಂತೆ ಉನ್ನತರಾಗಿರುವರು. ತಮ್ಮನ್ನು ಆರಾಧಿಸುವವರಿಗೆ ಇಷ್ಟಾರ್ಥಗಳನ್ನು

ತುಂಬಿಕೊಡುವವರಾಗಿರುವರು. ಆದ್ದರಿಂದ ಈ ದೇವತೆಗಳನ್ನು ಸ್ತೋತ್ರಮಾಡಿರಿ-ಎಂದಭಿಪ್ರಾಯ.

ಆಧ್ಯಾತ್ಮಿಕದೃಷ್ಟಿಯಿಂದ ಒಬ್ಬ ದೇವನೇ ಇಂದ್ರನೆಂದೂ ವಿಷ್ಣುವೆಂದೂ ಕರೆಯಲ್ಪಟ್ಟಿರುವನು. 'ಇದಿ ಪರಮೈಶ್ವರ್ಯೇ' - ಎಂಬ ಧಾತ್ವರ್ಥದಂತೆ ಸರ್ವ ಸ್ವತಂತ್ರನೂ 'ವಿಷಲೃ ವ್ಯಾಪ್ತೌ'- ಎಂಬ ಧಾತ್ವರ್ಥದಂತೆ ಸರ್ವವ್ಯಾಪಕನೂ ಆಗಿರುವವನು ಭಗವಂತನೊಬ್ಬನೇ. ಅವನನ್ನೇ ಇಂದ್ರ-ವಿಷ್ಣು ಎಂಬ ನಾಮ ಗಳಿಂದ ನಾವು ಆರಾಧಿಸಿ ಕೃತಾರ್ಥರಾಗಬೇಕೆಂದು ಇಲ್ಲಿ ತಿಳಿಸಲಾಗಿದೆ.

**ತ್ವೇಷಮಿತ್ಥಾ ಸಮರಣಂ ಶಿಮೀವತೋರಿಂದ್ರಾವಿಷ್ಣೂ ಸುತಪಾ ವಾಮುರುಷ್ಯತಿ । ಯಾ ಮರ್ತ್ಯಾಯ ಪ್ರತಿಧೀಯಮಾನಮಿತ್ಕೃಶಾನೋರಸ್ತುರಸನಾಮುರುಷ್ಯಥಃ ॥೧೪॥**

''ಎಲೈ ಇಂದ್ರ ಮತ್ತು ವಿಷ್ಣುದೇವತೆಗಳೆ, ನೀವು ಭಕ್ತರಿಗೆ ಇಷ್ಟಾರ್ಥಗಳನ್ನು ಕೊಡುವ ಕರ್ಮವುಳ್ಳವರಾಗಿದ್ದೀರಿ. ಹುತಶಿಷ್ಟವಾದ ಸೋಮವನ್ನು ಪಾನಮಾಡಿದ ಯಜಮಾನನು ಯಜ್ಞವೇದಿಕೆಯ ಮೇಲೆ ನಿಮ್ಮನ್ನು ಪೂಜಿಸುತ್ತಿರುವನು. ನೀವುಗಳು ಹವಿಸ್ಸನ್ನು ಅರ್ಪಿಸುತ್ತಿರುವ ಮನುಷ್ಯನಾದ ಆ ಯಜಮಾನನಿಗೆ ಅಗ್ನಿಯಮೂಲಕವೇ ಶತ್ರುನಾಶ ಹಾಗೂ ಇತರ ಅಭ್ಯುದಯಫಲಗಳನ್ನು ನೀಡುತ್ತಿರುವಿರಿ.'' ಇದು ಮಂತ್ರದ ಸರಳವಾದ ಅರ್ಥ. ಇಲ್ಲಿ ಶಿಮೀವತಃ- ಎಂದರೆ ಇಷ್ಟಪ್ರದಾನವೇ ಮುಂತಾದ ರೀತಿಯಿಂದ ಯಜಮಾನನ್ನು ಕಾಪಾಡುವ ಇಂದ್ರ, ವಿಷ್ಣು- ಎಂಬ ದೇವತೆಗಳೆ, ನಿಮ್ಮನ್ನು ಯಜ್ಞಶಾಲೆಗೆ ಯಜಮಾನನು ಆಹ್ವಾನಿಸಿ ಗೌರವಿಸಲಿದ್ದಾನೆ- ಆ ಸುತಪನು ಎಂದರೆ ಯಜ್ಞಶಿಷ್ಟವನ್ನು ಪ್ರಸಾದವಾಗಿ ಸ್ವೀಕರಿಸಿದ ಯಜಮಾನನು ಉರುಷ್ಯತಿ- ಯಾಗದಿಂದ ಪೂಜಿಸುವನು- ಎಂದು ಭಾಷ್ಯಕಾರರ ವ್ಯಾಖ್ಯಾನವಿದೆ. ಯಜ್ಞದಲ್ಲಿ ಸೋಮವೆಂಬ ರಸವನ್ನು ಹಿಂಡಿತೆಗೆದು ದೇವತೆಗಳಿಗೆ ಸಮರ್ಪಿಸಿ ಅನಂತರ ಯಜಮಾನಾದಿಗಳು ತಾವೂ ಸೋಮಪಾನ ಮಾಡುವರು. ಈಗಿನ ಕಾಲಕ್ಕೆ ತಕ್ಕಂತೆ ಅರ್ಥಮಾಡುವದಾದರೆ ಸೋಮದಂತೆಯೇ ನೀರಾಗಿರುವ ಪಾಯಸ, ಹಾಲು, ಪಾನಕ- ಮುಂತಾದವುಗಳನ್ನು ದೇವರಿಗೆ ನೈವೇದ್ಯಮಾಡಿ ಭಕ್ತರಿಗೂ ಪ್ರಸಾದವಾಗಿ ಹಂಚುವ ಪದ್ಧತಿಯಿದೆಯಷ್ಟೆ! ಹೀಗೆ ಅರ್ಪಿಸುವಾಗ ವಿಷ್ಣುದೇವತೆಯನ್ನು ನಾವು ಹೆಚ್ಚಾಗಿ ಹೆಸರಿಸುತ್ತೇವೆ.

ರಾಮನವಮಿ, ನರಸಿಂಹಜಯಂತಿ- ಇಂಥವು ಇದಕ್ಕೆ ಉದಾಹರಣೆಗಳು. ವೈದಿಕ ಯಜ್ಞಗಳು ಹೆಚ್ಚಾಗಿ ಪ್ರಚಾರದಲ್ಲಿದ್ದ ಕಾಲಕ್ಕೆ ಸೋಮರಸಪಾನವು ಜಾರಿಯಲ್ಲಿತ್ತು. ಇಂಥ ಸೋಮಯಾಗವನ್ನು ಮಾಡಿದವನು 'ಸೋಮಯಾಜಿ' ಯೆಂದೇ ಗೌರವಿಸಲ್ಪಡುತ್ತಿದ್ದನು. ಸೋಮಯಾಗವಾದರೋ, ಇಂದ್ರ-ವಿಷ್ಣು ಎಂಬ ದೇವತೆಗಳನ್ನೇ ಕುರಿತದ್ದಾಗಿರುವದು. ಬಹಳಮಟ್ಟಿಗೆ ಎಲ್ಲಾ ಯಜ್ಞಗಳೂ ವಿಷ್ಣುದೇವತಾಕವಾಗಿಯೇ ಇರುತ್ತವೆ. ಯಜ್ಞದಲ್ಲಿ ಆದಿತ್ಯ, ವಸು, ರುದ್ರ, ಪೂಷ, ಭಗ- ಮುಂತಾದ ಉಳಿದ ದೇವತೆಗಳೂ ಭಾಗಿಗಳಾಗಿರುತ್ತಾರೆ. ಆದ್ದರಿಂದ ಇಂದ್ರ-ವಿಷ್ಣುಗಳಿಬ್ಬರದೇ ಅತಿಶಯವೇನಿದ್ದೀತು ? ಎಂದು ಯಾರಾದರೂ ಕೇಳಬಹುದು. ಅದಕ್ಕೆ ಉತ್ತರವನ್ನು ಮಂತ್ರದ ಉಳಿದ ಭಾಗದಲ್ಲಿ ತಿಳಿಸಲಾಗಿದೆ. ಏನೆಂದರೆ : ಯಾವ ಇಂದ್ರಾವಿಷ್ಣುಗಳಾದ ನೀವು, ಮರ್ತ್ಯಾಯ- ಮನುಷ್ಯರೂಪ ನಾದ ಯಜಮಾನನಿಗೆ, ಅಸನಾಂ- ಚಲನಸ್ವಭಾವದ ಅನ್ನಾದಿಗಳನ್ನು, ಕೃಶಾನೋಃ - ಅಗ್ನಿಯ ಮೂಲಕವೇ ಕೊಟ್ಟು ಕಾಪಾಡುವಿರಿ. ಹಾಗೂ ಆ ಯಜಮಾನನಿಂದ ಅಗ್ನಿಯಮೂಲಕ ಅದೇ ಅನ್ನಾದಿಗಳನ್ನು ಹವಿಸ್ಸಿನ ರೂಪದಲ್ಲಿ ಸ್ವೀಕರಿಸುವಿರಿ. ಆದ್ದರಿಂದ ಉಳಿದ ಎಲ್ಲಾ ದೇವತೆಗಳಿಗಿಂತಲೂ ನೀವು ಮುಖ್ಯರೂ ಪ್ರಸಿದ್ಧರೂ, ಆಗಿರುವಿರಿ ಎಂದು ಸ್ತುತಿಸಲಾಗಿದೆ. ಅಗ್ನಿಯನ್ನು ಇಲ್ಲಿ ಕೃಶಾನು ಎಂದು ಕರೆದಿರು ವದರಿಂದ ಶತ್ರುನಾಶಕನಾದ ಅಗ್ನಿಯ ಮೂಲಕ ಎಂದೂ ಅರ್ಥಮಾಡಬಹುದು. ಈಗಲೂ ರಾಕ್ಷೋಘ್ನನೆಂದು ಅಗ್ನಿಯನ್ನು ಆರಾಧಿಸಿ ಹೋಮಾದಿಗಳನ್ನು ಮಾಡುವ ವಾಡಿಕೆಯಿದೆ. ಹೀಗೆ 'ಎಲೈ ಇಂದ್ರ - ವಿಷ್ಣುದೇವತೆಗಳೆ, ನಿಮಗೆ ನಮಸ್ಕಾರ ವಿರಲಿ'- ಎಂದು ಪ್ರಾರ್ಥಿಸಿದೆ.

**ತಾ ಈಂ ವರ್ಧಂತಿ ಮಹ್ಯಸ್ಯ ಪೌಂಸ್ಯಂ ನಿ ಮಾತರಾ ನಯತಿ ರೇತಸೇ ಭುಜೇ । ದಧಾತಿ ಪುತ್ರೋಽವರಂ ಪರಂ ಪಿತುರ್ನಾಮ ತೃತೀಯಮಧಿರೋಚನೇ ದಿವಃ ॥೧೫॥**

"ಆ ಸೋಮರೂಪವಾದ ಆಹುತಿಗಳು ಇಂದ್ರನ ಪೌಂಸ್ಯ ಎಂದರೆ ಬಲವನ್ನು ಬೆಳೆಯಿಸುವವು. ಆ ಬಲವು ಪ್ರಾಣಿಗಳ ಉತ್ಪತ್ತಿಗೆ ಹಾಗೂ ರಕ್ಷಣೆಗೆ ಉಪಯುಕ್ತವಾಗುವವು. ಎಲ್ಲಿ ? ಎಂದರೆ ದ್ಯುಲೋಕದಲ್ಲಿ ವಿರಾಜಮಾನ ನಾಗಿರುವ, ಪುತ್ರ, ಎಂದರೆ ಮನುಷ್ಯರನ್ನೆಲ್ಲ ಕಾಪಾಡುವ, ತಂದೆಯಾದ ವಿಷ್ಣುವಿನ ದಯೆಯಿಂದ, ಅವರ- ಪೌತ್ರನಾಗಿಯೂ ತೋರಿಕೊಳ್ಳುವ ರೂಪದಿಂದ

(ಆಹುತಿಗಳು) ಬಲವರ್ಧಕವಾಗಿರುವವು'' ಎಂದು ಈ ಮಂತ್ರದ ಅರ್ಥವಿದೆ. ಭಾವಾರ್ಥವೇನೆಂದರೆ: ತಂದೆ, ಮಗ, ಮೊಮ್ಮಗ- ಎಂಬೀ ರೂಪದಿಂದ ತಾನೇ (ಜೀವನೇ) ಮೂರು ಜನ್ಮಗಳನ್ನು ಪಡೆಯುತ್ತಾನೆ ಎಂದು ಶ್ರುತಿಯಲ್ಲಿದೆ. ಹಾಗೆ ರೇತೋರೂಪನಾಗಿ ಹುಟ್ಟಬೇಕಾದರೆ ಬಲವೂ ವೀರ್ಯವೂ ಬೇಕು. ಇಂಥ ಬಲವೀರ್ಯಗಳು ಇಂದ್ರವಿಷ್ಣುಗಳಲ್ಲಿ ಸ್ವರೂಪಭೂತವಾಗಿದ್ದುಕೊಂಡಿವೆ. ಆದರೂ ಅವು ನಮಗೆ ದೊರಕಬೇಕಾದರೆ- ಹೇಗೆ ಗಾಳಿಯಿದ್ದರೂ ಸೆಕೆಯಾದಾಗ ಅದನ್ನು ಉತ್ಪತ್ತಿಮಾಡಲು ಬೀಸಣಿಗೆಯನ್ನಾಡಿಸುವಂತೆ- ವೈದಿಕಯಜ್ಞಗಳನ್ನು ಮಾಡಬೇಕು. ವಿಷ್ಣುವಿಗಾಗಿ ನಾವು ಮಾಡಿದ ಇಂಥ ಸೋಮಯಾಗದಿಂದಲೇ ಇಂದ್ರನು ತಾನೂ ತೃಪ್ತನಾಗಿ ತನ್ನ ಬಲವನ್ನು ಆದಿತ್ಯನಲ್ಲಿಡುವನು. ಆದಿತ್ಯನು ತನ್ನ ಕಿರಣಗಳಿಂದ ನೀರನ್ನು ಸೆಳೆದುಕೊಂಡು ಮೋಡಗಳ ರೂಪದಿಂದ ಮಳೆಯನ್ನು ಸುರಿಸುವನು. ಮಳೆಯಿಂದ ಅನ್ನವೂ ಯಜ್ಞವೂ ಯಜ್ಞದಿಂದ ಬಲವೀರ್ಯಗಳೂ ಬೆಳೆಯುವವು. ಹೀಗೆ ಚಕ್ರಾಕಾರವಾಗಿ ಕರ್ಮವು ಉರುಳುತ್ತಿರುವದರಿಂದ ಇಂದ್ರಾದಿದೇವತೆಗಳೊಡನೆ ಮನುಷ್ಯರು ಯಜ್ಞದ ಮೂಲಕವೇ ಸಂಬಂಧವನ್ನು ಬೆಳೆಯಿಸಿಕೊಳ್ಳಬೇಕು. ಆಗಲೇ ಸಂತತಿವಿಚ್ಛೇದವಾಗದಂತೆ ಮನುಷ್ಯರು ಹುಟ್ಟುವರು. ಈ ಪುತ್ರಪೌತ್ರಪ್ರಪೌತ್ರಪರಂಪರೆಯನ್ನು ರಕ್ಷಿಸಲು ಹಾಗೂ ಸೃಷ್ಟಿಸಲು ಇಂದ್ರವಿಷ್ಣುಗಳೇ ಸಮರ್ಥರು. ಇಂಥ ಮಹಾನುಭಾವರಾದ ಈ ದೇವತೆಗಳನ್ನು ನಾವು ಯಾವಾಗಲೂ ಸ್ತುತಿಸಿ ಆರಾಧಿಸಿ ಕೃತಾರ್ಥರಾಗಬೇಕೆಂದು ಅಭಿಪ್ರಾಯ.

**ತತ್ತದಿದಸ್ಯ ಪೌಂಸ್ಯಂ ಗೃಣೀಮಸೀನಸ್ಯ ತ್ರಾತುರವೃಕಸ್ಯ ಮೀಳ್ಹುಷಃ । ಯಃ ಪಾರ್ಥಿವಾನಿ ತ್ರಿಭಿರಿದ್ವಿಗಾಮಭಿರುರು ಕ್ರಮಿಷ್ಟೋರುಗಾಯಾಯ ಜೀವಸೇ ॥೧೬॥**

''ಈ ಮಹಾನುಭಾವನ ಬಲವನ್ನು ನಾವು ಸ್ತುತಿಸುವೆವು. ಸರ್ವಕ್ಕೂ ಒಡೆಯನಾದ ಹಾಗೂ ಪಾಲಕನಾದ, ಅಹಿಂಸಕನಾದ ಬಲಸೇಚನಮಾಡುವ (ನಿತ್ಯತರುಣನಾದ) ಯಾವ ವಿಷ್ಣುವು ಈ ಮೂರು ಲೋಕಗಳನ್ನೂ ತನ್ನ ಪಾದಕ್ರಮಣದಿಂದ ಲೋಕಕಲ್ಯಾಣಕ್ಕಾಗಿ ವ್ಯಾಪಿಸಿಕೊಂಡನೋ ಅಂಥವನನ್ನು ಸ್ತುತಿಸುವೆವು'' ಎಂದು ಈ ಮಂತ್ರದ ಅಭಿಪ್ರಾಯ. ಹಿಂದಿನ ಮಂತ್ರಗಳಂತೆಯೇ ಇಲ್ಲಿಯೂ ವಿಷ್ಣುವಿನ ಪಾದಕ್ರಮಣದ ಪ್ರಸ್ತಾಪವಿದೆ. ದೇವತೆಗಳಲ್ಲಿ ವಿಷ್ಣುವೇ ಪರಮನೆಂಬುದು ವೇದಗಳ ಅಭಿಪ್ರಾಯ. ಏಕೆಂದರೆ ಪ್ರಪಂಚದ ಸ್ಥಿತಿಕಾಲದಲ್ಲಿ

ಮಾತ್ರ ವೇದಶಾಸ್ತ್ರಾದಿಗಳಿಗೆ ಸ್ಥಾನವಿರುತ್ತದೆ. ಹಾಗೆಯೇ ನಾವು ಯಾವದೇ ವಿಚಾರಮಾಡುವದಾಗಲಿ, ಜನ್ಮಾಂತರ ಲೋಕಾಂತರಗಳನ್ನು ಪಡೆಯುವದಾಗಲಿ, ಕಡೆಗೆ ಮೋಕ್ಷಸಾಮ್ರಾಜ್ಯವನ್ನೇ ಹೊಂದುವದಾಗಲಿ ಜಗತ್ತಿನ ಸ್ಥಿತಿಕಾಲದ ವ್ಯವಹಾರಕ್ಕೇ ಸೇರಿರುತ್ತದೆ. ಆದ್ದರಿಂದ ಪ್ರಪಂಚದ ಸೃಷ್ಟಿಸ್ಥಿತಿಲಯಗಳೆಂಬ ಮೂರು ಅವಸ್ಥೆಗಳಲ್ಲಿ ಸ್ಥಿತಿಯ ಅವಸ್ಥೆಯೇ ಮುಖ್ಯವಾದುದು. ಸ್ಥಿತಿಕಾರಕನೇ ವಿಷ್ಣುವಾಗಿರುವದರಿಂದ ಮೂರು ಲೋಕಗಳಲ್ಲಿಯೂ ಇರುವ, ಬ್ರಹ್ಮನಿಂದ ಹಿಡಿದು ಸ್ತಂಬಪರ್ಯಂತವಾದ ಸಮಸ್ತಪ್ರಾಣಿಗಳೂ ವಿಷ್ಣುವನ್ನೇ ಆಶ್ರಯಿಸಿರುವವು. ಅವನಾದರೊ, ತನ್ನ ಏಕಾಂಶಮಹಿಮೆಯಿಂದ ಜಗತ್ತನ್ನು ಧರಿಸಿ ತಾನು ಅದಕ್ಕೂ ಮಿೂರಿದ ಪುರುಷೋತ್ತಮನಾಗಿರುವನು. ಹೀಗೆ ಸರ್ವಸ್ವಂತಂತ್ರನೂ ಪಾಲಕನೂ ಆಶ್ರಯನೂ ಆದ ನಾರಾಯಣನು ತನ್ನ ಬಲವೀರ್ಯತೇಜಸ್ಸುಗಳ ಅತಿಶಯದಿಂದ ಭಗವಂತನೆನಿಸಿರುವನು. ಇಂಥ ವಿಷ್ಣುವು ದೇವಶ್ರೇಷ್ಠನೆಂದು ಬೇರೆ ಹೇಳತಕ್ಕದ್ದೇನಿದೆ? ಅನ್ನದಿಂದ ಪ್ರಾಣ, ಮನಸ್ಸು, ಸತ್ಯ, ಲೋಕಗಳು, ಕರ್ಮಗಳು, ಕರ್ಮಫಲಗಳು- ಹೀಗೆ ಕೊಂಡಿಯಾಗಿದ್ದುಕೊಂಡಿರುವ ಜಗತ್ತಿನ ಚಾಲನೆ, ರಕ್ಷಣೆಗಳು ವಿಷ್ಣುವಿಗೇ ಸೇರಿದ್ದು. ಆತನೇ ಪರಬ್ರಹ್ಮವೂ ಹೌದು. ಆದರೆ ಅದು ನಿವೃತ್ತಿಮಾರ್ಗದವರ ಹೇಳಿಕೆ. ಅದು ಹಾಗಿರಲಿ. ಪ್ರವೃತ್ತಿಧರ್ಮಪ್ರಧಾನವಾದ ಸ್ಥಿತಿಕಾಲದಲ್ಲಿ ಸಕಲವರ್ಣಾಶ್ರಮಧರ್ಮದವರೂ ವಿಷ್ಣುವಿನ ಆರಾಧಕರೇ ಆಗಲೇಬೇಕು. ಬೇರೆಯ ದೇವತೆಗಳ ಆರಾಧನೆಯೂ ರೂಪಾಂತರದಿಂದ ವಿಷ್ಣುವಿನ ಆರಾಧನೆಯೇ-ಎಂದು ಗೀತೆಯಲ್ಲಿದೆ. ಇಂಥ ಮಹಾನುಭಾವನನ್ನು ನಾವು ಸ್ತುತಿಸೋಣ- ಎಂದಭಿಪ್ರಾಯ.

**ದ್ವೇ ಇದಸ್ಯ ಕ್ರಮಣೇ ಸ್ವರ್ದೃಶೋಽಭಿಖ್ಯಾಯ ಮರ್ತ್ಯೋ ಭುರಣ್ಯತಿ ।**
**ತೃತೀಯಮಸ್ಯ ನ ಕಿರಾದಧರ್ಷತಿ ವಯಶ್ಚನ ಪತಯಂತಃ ಪತತ್ರಿಣಃ ॥೧೭॥**

''ಆ ಮಹಾವಿಷ್ಣುವಿನ ಎರಡೇ ಕ್ರಮಣ (ಹೆಜ್ಜೆ)ಗಳನ್ನು ಮನುಷ್ಯನು ಸೇವಿಸುತ್ತಾನೆ. ಮೂರನೆಯದನ್ನು ತನ್ನ ಬುದ್ಧಿಯಿಂದ ಅರಿಯಲಾರವದನಾಗಿದ್ದಾನೆ. ಅಷ್ಟೇ ಅಲ್ಲ; ಮರುದ್ದೇವತೆಗಳೂ ಪತತ್ರಿಗಳಾದ (ಗರುಡಾದಿಗಳು ಕೂಡ) ಅರಿತಿರುವದಿಲ್ಲ'' ಎಂದು ಈ ಮಂತ್ರದ ಸರಳವಾದ ಅರ್ಥವು. ಭಾವಾರ್ಥವೇನೆಂದರೆ: ಸ್ವರ್ದೃಶಃ ಎಂದರೆ ಸ್ವರ್ಗಾದಿಲೋಕಗಳನ್ನೂ ತನ್ನ ಮಹಿಮೆಯಿಂದ ವ್ಯಾಪಿಸಿಕೊಂಡಿರುವ ತ್ರೈಲೋಕ್ಯಶರೀರಿಯಾದ ಶ್ರೀಮಹಾವಿಷ್ಣುವಿನ ಹೆಜ್ಜೆಗಳ

ಕ್ರಮಣವುಳ್ಳ ಮೂರುಲೋಕಗಳಲ್ಲಿ ಭೂಲೋಕ, ಅಂತರಿಕ್ಷಲೋಕ-ಇವೆರಡನ್ನು ಮಾತ್ರವೇ ಮರ್ತ್ಯರಾದ ಮನುಷ್ಯರು ಭುರಣ್ಯತಿ- ಸೇವಿಸುತ್ತಿರುವರು ; ಎಂದರೆ ಮಾನವರಿಗೆ ತಿಳಿದಿರುವದು ಈ ಎರಡುಲೋಕಗಳು ಮಾತ್ರವೇ-ಎಂದಭಿಪ್ರಾಯ. ಹೇಗೆಂದರೆ ಭೂಮಿಯಲ್ಲಿ ಮನುಷ್ಯರೆಲ್ಲರೂ ವಾಸಿಸುತ್ತಾರೆ. ಮಳೆ, ಗಾಳಿ, ಬಿಸಿಲು- ಮುಂತಾದವನ್ನು ಅಂತರಿಕ್ಷದಿಂದ ಪಡೆಯುತ್ತಾರೆ. ಇಷ್ಟು ಹೊರತು ಶ್ರೀಮಹಾವಿಷ್ಣುವಿನ ಮೂರನೆಯ ಪಾದಕ್ರಮಣಕ್ಕೆ ಒಳಪಟ್ಟ ದ್ಯುಲೋಕವು ಇವರಿಗೆ ತಿಳಿಯದು-ಎಂದು ಶ್ರುತಿಯು ವಿಷ್ಣುವಿನ ಮಹಿಮೆಯನ್ನು ಹೊಗಳುತ್ತಿದೆ. ಈ ಸಂದರ್ಭದಲ್ಲಿ ಭೌತಿಕವಿಜ್ಞಾನಿಗಳನ್ನೂ ಸೇರಿಸಿಕೊಳ್ಳಬೇಕು. ಬಹಿರ್ಮುಖರೂ ಬುದ್ಧಿಪ್ರಧಾನರೂ ತರ್ಕಾವಲಂಬಿಗಳೂ ಇಂದ್ರಿಯಮನೋಪರ ತಂತ್ರರೂ ಆದ ವಿಜ್ಞಾನಿಗಳು ಇನ್ನು ಎಷ್ಟು ಕಾಲವಾದರೂ- ರಾಕೆಟ್ಟು, ಉಪಗ್ರಹ ಗಳನ್ನು ಹಾರಿಸಲಿ, ಅದರಲ್ಲೇ ಕುಳಿತು ಸಂಚರಿಸಲಿ- ಅವರುಗಳಿಗೆ ಅಂತರಿಕ್ಷ ಲೋಕವನ್ನು ಮೀರಿ ಹೋಗಲಾಗುವದಿಲ್ಲ. ಭೌತಿಕವಿಜ್ಞಾನಬಲದಿಂದ ಸ್ವರ್ಗ ಲೋಕವನ್ನು ವಶಪಡಿಸಿಕೊಳ್ಳುವದೂ ಸಾಧ್ಯವಿಲ್ಲ. ಆದ್ದರಿಂದ ಮೂರನೆಯ ದ್ಯುಲೋಕವು ಮಾನವನ ಬುದ್ಧಿಗೆ ಮೀರಿದ್ದು. ಸದಾಗತಿಶೀಲರೂ ಅಂತರಿಕ್ಷವನ್ನೆಲ್ಲ ವ್ಯಾಪಿಸಿರುವವರೂ ಆದ ಮರುದ್ದೇವತೆಗಳಿಗಾಗಲಿ, ಗರುಡನಂಥ ಪಕ್ಷಿಶ್ರೇಷ್ಠರಿಗಾಗಲಿ- ಈ ದ್ಯುಲೋಕವು ಇಂದಿಗೂ ಎಟುಕಿರಲಾರದು-ಎಂದಮೇಲೆ ಹುಲು ಮಾನವರ ಪಾಡೇನು ? ಭಗವಂತನ ಮೂರನೆಯ ಹೆಜ್ಜೆಯನ್ನೇ ಅರಿಯಲಾರದವರು ಅವನ ಪೂರ್ಣಸ್ವರೂಪವನ್ನು ಹೇಗೆ ತಾನೆ ಅರಿತಾರು ? ಏಕೆಂದರೆ ದ್ಯುಲೋಕದ ಆಚೆಗೂ ಆ ವಿಷ್ಣು ತತ್ತ್ವವೇ ಬೆಳಗುತ್ತಿರುವದು. 'ಪರೋ ದಿವೋ ಜ್ಯೋತಿಃ' ಎಂಬ ಉಪನಿಷದ್ವಾಕ್ಯವನ್ನು ನೆನೆಯಿರಿ. ಹೀಗೆ ಭಗವಂತನು ಅಪಾರ ಮಹಿಮನೂ ನಿರತಿಶಯವಾದ ಜ್ಞಾನಶಕ್ತಿಬಲೈಶ್ವರ್ಯವೀರ್ಯ ತೇಜಸ್ಸಂಪನ್ನನೂ ಆಗಿರುವನು. ಎಂದಭಿಪ್ರಾಯ.

**ಚತುರ್ಭಿಃ ಸಾಕಂ ನವತಿಂ ಚ ನಾಮಭಿಶ್ಚಕ್ರಂ ನ ವೃತ್ತಂ ವ್ಯತೀರವೀವಿಪತ್।**
**ಬೃಹಚ್ಛರೀರೋ ವಿಮಿಮಾನ ಋಕ್ವಭಿರ್ಯುವಾ ಽಕುಮಾರಃ ಪ್ರತ್ಯೇತ್ಯಾಹವಮ್**
**॥೧೮॥**

'ಆದಿತ್ಯಾತ್ಮಕನಾದ ಈ ವಿಷ್ಣುವು ತೊಂಭತ್ತುನಾಲ್ಕು ಕಾಲಾವಯವಗಳೊಡಗೂಡಿ ತನ್ನ ಪ್ರೇರಣೆಗಳಿಂದ ಜಗತ್ತನ್ನೆಲ್ಲ ಅಲ್ಲಾಡಿಸುತ್ತಿರುವನು. ವಿರಾಟ್

ಶರೀರನೂ ಮಂತ್ರವಿದರಿಂದ ಸ್ತುತಿಸಲ್ಪಡುವವನೂ ಯುವಕನೂ ಅನಲ್ಪನೂ ಆದ ಮಹಾವಿಷ್ಣುವು ಯಜ್ಞವನ್ನು ಕುರಿತು ಬರುತ್ತಿರುವನು' ಎಂದು ಈ ಮಂತ್ರದ ಅರ್ಥ. ಇಲ್ಲಿ ವಿಷ್ಣುವನ್ನು ಸೂರ್ಯರೂಪದಿಂದ ಸ್ತುತಿಸಲಾಗಿದೆ. ಸೂರ್ಯನಿಗೆ ಕಾಲಾತ್ಮನೆಂದೂ ಹೆಸರಿದೆ. ಏಕೆಂದರೆ ನಾವು ಕಾಲವನ್ನು ಸೂರ್ಯನ ಸಹಾಯ ದಿಂದಲೇ ಅಳೆಯುತ್ತೇವೆ. ಆದ್ದರಿಂದ ಕಾಲಚಕ್ರವೆಂಬ ಆಯುಧವನ್ನು ಹಿಡಿದಿರುವ ಸೂರ್ಯಾತ್ಮಕನಾದ ಮಹಾವಿಷ್ಣುವು ಜಗತ್ತನ್ನೆಲ್ಲ ವಶಗೊಳಿಸಿಕೊಂಡಿರುವನು. ಆ ಕಾಲಚಕ್ರಕ್ಕೆ ತೊಂಭತ್ತುನಾಲ್ಕು ಚೂಪಾದ ಹಲ್ಲುಗಳಿವೆ. ಅವು ಯಾವವೆಂದರೆ : ಸಂವತ್ಸರ (೧); ಅಯನಗಳು (೨) ಋತುಗಳು (೫) ಮಾಸಗಳು (೧೨) ಪಕ್ಷಗಳು (೨೪) ಹಗಲು-ರಾತ್ರಿಗಳು (೩೦) ಯಾಮಗಳು (೮) ಮೇಷಾದಿ ಲಗ್ನಗಳು (೧೨) ಹೀಗೆ ಒಟ್ಟುಗೂಡಿ ೯೪ ಹಲ್ಲುಗಳುಳ್ಳ ಕಾಲಚಕ್ರವನ್ನು ಧರಿಸಿ ಭಗವಂತನು ಆದಿತ್ಯರೂಪದಿಂದ ಜಗತ್ತನ್ನೆಲ್ಲ ನುಂಗುತ್ತಿರುವನು. ಹೇಗೆ ಯುದ್ಧದಲ್ಲಿ ಶತ್ರುವು ಎದುರಾದಾಗ ಅವನ ಮೇಲೆ ಚಕ್ರವನ್ನು ತಿರುಗಿಸಿ ಎಸೆದು ಅಲ್ಲಾಡಿಸುವರೋ ಹಾಗೆ ಸೂರ್ಯರೂಪದಿಂದ ಮಹಾವಿಷ್ಣುವು ಪ್ರಪಂಚವನ್ನೆಲ್ಲ ನಡುಗಿಸುತ್ತಿರುವನು. ಭಗವದ್ಗೀತೆಯಲ್ಲಿ 'ನೀನು ಯಾರು ?' ಎಂಬ ಅರ್ಜುನನ ಪ್ರಶ್ನೆಗೆ ಭಗವಂತನು ತಾನು ಕಾಲರೂಪನೆಂದೇ ೧೧ನೆಯ ಅಧ್ಯಾಯದಲ್ಲಿ ತಿಳಿಸಿರುತ್ತಾನೆ. ಇಂಥ ಭಗವಂತನಿಗೆ ಹೆದರದೆ ಇರುವವರು ಯಾರಿದ್ದಾರು ? ಮತ್ತು ದೇವಾಸುರ ನರತಿರ್ಯಗಾದಿಸಮಸ್ತಶರೀರಗಳಿಂದಲೂ ಹೊರತೋರಿಕೊಳ್ಳುತ್ತಾ ಬ್ರಹ್ಮಾಂಡ ಶರೀರಿಯಾಗಿ, ವೇದಾಭಿಜ್ಞರಾದ ಋಷಿಗಳ ಋಗ್ರೂಪವಾದ ಸ್ತೋತ್ರಗಳಿಂದ ಹೊಗಳಲ್ಪಡುತ್ತಾ ನಿತ್ಯಯೌವನಸಂಪನ್ನನಾಗಿ, ಅಕುಮಾರಃ ಎಂದರೆ ಅಲ್ಪನಲ್ಲ ದವನಾಗಿ ಈ ಭಗವಂತನು ವಿರಾಜಮಾನನಾಗಿರುವನು. ಈತನು ಆಹ್ವಾನಗಳನ್ನು ಸ್ವೀಕರಿಸಿ ಬರುತ್ತಿರುವನು-ಎಂದರೆ ಯಜ್ಞಗಳಲ್ಲಿ ಈತನನ್ನು ಋತ್ವಿಜರು ಕರೆಯಲಾಗಿ ಆಯಾ ಯಜ್ಞಶಾಲೆಗಳಿಗೆ ಸ್ನೇಹಪೂರ್ವಕವಾಗಿ ಬರುತ್ತಿರುವನು. ತಾನು ಎಂಥ ಮಹಾಮಹಿಮನಾದರೂ ಕರೆದವರ ಹಿಂಬಾಲಕನಾಗಿ ಬಂದು ಭಕ್ತಿಯಿಂದರ್ಪಿಸಿದ ಹವಿಸ್ಸನ್ನು ಸ್ವೀಕರಿಸಿ ಅನುಗ್ರಹಿಸುವನು. ಆದ್ದರಿಂದ ನಾವು ಸಮಯವನ್ನು ವ್ಯರ್ಥಮಾಡದೆ ಆತನ ಆಯುಧಾವಯವವೇ ಆದ ಕಾಲವನ್ನು ಆತನ ಆರಾಧನೆಗೇ ವಿನಿಯೋಗಿಸಿ ಕೃತಾರ್ಥರಾಗಬೇಕು.

**ಭವಾ ಮಿತ್ರೋ ನ ಶೇವ್ಯೋ ಘೃತಾಸುತಿರ್ವಿಭೂತದ್ಯುಮ್ನ ಏವಯಾ ಉ ಸಪ್ರಥಾಃ । ಅಧಾ ತೇ ವಿಷ್ಣೋ ವಿದುಷಾ ಚಿದರ್ಧ್ಯಃ ಸ್ತೋಮೋ ಯಜ್ಞಶ್ಚ ರಾಧ್ಯೋ ಹವಿಷ್ಮತಾ ॥೧೯॥**

'ಎಲೈ ವಿಷ್ಣುವೆ, ಮಿತ್ರನೂ ಶೇವ್ಯನೂ, ಘೃತಾಸುತಿಯೂ, ವಿಭೂತದ್ಯುಮ್ನನೂ, ಏವಯನೂ ಸಪ್ರಥನೂ ಆಗಿ ನೀನು ಪ್ರಸನ್ನನಾಗು. ಇನ್ನು ನಿನ್ನ ಸಂಬಂಧವಾದ ಸ್ತೋತ್ರವೂ ಯಜ್ಞವೂ ಮತ್ತೆ ಮತ್ತೆ ಬೆಳೆಯುತ್ತಿರಲಿ ! ಹಾಗೆಯೇ ಹವಿಷ್ಮಂತನಾದ ವಿದ್ವಾಂಸನಾದ ಯಜಮಾನನಿಂದ ನೀನು ಯಾವಾಗಲೂ ಆರಾಧ್ಯನಾಗು.' ಎಂದು ಇದರ ಅರ್ಥವು. ಮಿತ್ರನೆಂದರೆ ಸೂರ್ಯರೂಪನಾಗಿರುವವನು, ಅಥವಾ ದುಃಖದಿಂದ ಕಾಪಾಡುವ ಸಖನು ಎಂದಭಿಪ್ರಾಯ. ಶೇವ್ಯನೆಂದರೆ ಸಾಧುವೆಂದರ್ಥ. ಘೃತಾಸುತಿಯೆಂದರೆ ಜಲವನ್ನು ಸೃಷ್ಟಿಸಿರುವವನು. ವಿಭೂತದ್ಯುಮ್ನನೆಂದರೆ ಅತಿಶಯವಾದ ಯಶಸ್ಸುಳ್ಳವನು. ಏವಯನೆಂದರೆ ರಕ್ಷಣೆಯ ಭಾರವನ್ನು ಹೊತ್ತಿರುವವನು. ಸಪ್ರಥನೆಂದರೆ ಎಲ್ಲೆಲ್ಲಿಯೂ ದಟ್ಟವಾಗಿ ಹರಡಿಕೊಂಡಿರುವವನು. ಹೀಗೆ ಗುಣಸಂಪನ್ನನಾದ ನೀನು ಆಯಾ ಗುಣವಿಶೇಷಗಳಿಂದ ಯಾವಾಗಲೂ ನನಗೆ ಪ್ರಸನ್ನನಾಗಿರು- ಎಂದು ಭಗವಂತನನ್ನು ಭಕ್ತನು ಬೇಡಿಕೊಳ್ಳುತ್ತಿದ್ದಾನೆ. ಮತ್ತು ಆ ಮಹಾವಿಷ್ಣುವು ಯಜ್ಞಕರ್ಮದೀಕ್ಷಿತನೂ ಶ್ರದ್ಧಾಭಕ್ತಿಗಳಿಂದ ಹವಿಸ್ಸನ್ನು ಅರ್ಪಿಸುವಂಥವನೂ ಆದ, ಮತ್ತು ಮಂತ್ರಾರ್ಥಗಳನ್ನರಿತು ಭಗವಂತನ ಮಹಿಮಾತಿಶಯಗಳನ್ನೂ ಬಲ್ಲ ವಿದ್ವಾಂಸನಾದ ಯಜಮಾನನಿಂದ ಯಾವಾಗಲೂ ಪೂಜಿಸಲ್ಪಡುತ್ತಿರಲಿ ! ಎಂದೂ ಹಾರೈಸುತ್ತಿರುವನು. ಯಜ್ಞವನ್ನು ಒಮ್ಮೆ ಮಾತ್ರ ಮಾಡಿದರೆ ಸಾಲದು. ಜನರು ಮತ್ತೆ ಮತ್ತೆ ಮಾಡುತ್ತಲೇ ಇರಲಿ ; ಯಜ್ಞಕರ್ಮನಿಷ್ಠರಾದ ಭಗವದ್ಭಕ್ತರಾದ ಸಜ್ಜನರ ಪರಂಪರೆಯು ಬೆಳೆಯಲಿ ; ಆ ಮೂಲಕ ಜಗತ್ಕಲ್ಯಾಣವಾಗಲಿ- ಎಂದೂ ಇಲ್ಲಿ ತಿಳಿಸಿದಂತಾಗಿದೆ.

ವಾಚಕರೆ, ಶ್ರೀ ಮಹಾವಿಷ್ಣುವಿನ ಮಹಿಮೆಯನ್ನರಿತ ಯಾವ ಸಾಧಕನು ತಾನೆ ಯಜ್ಞವನ್ನು ಕೈಗೊಳ್ಳದೆ ಇರಲು ಸಾಧ್ಯವಾದೀತು ? ಆದ್ದರಿಂದಲೇ ಇಂಥ ಕಲಿಗಾಲದಲ್ಲಿಯೂ ಪ್ರತಿಯೊಂದು ಊರಿನಲ್ಲಿಯೂ ದೇವತಾರಾಧನೆಗಳು ಯಾವದಾದರೊಂದು ರೂಪದಿಂದ ನಡೆಯುತ್ತಲೇ ಇವೆ. ಹೊಸ ಹೊಸ ದೇವಾಲಯಗಳೂ ನಿರ್ಮಾಣವಾಗುತ್ತಲೇ ಇವೆ. ಇವೇ ವಿಷ್ಣುಯಜ್ಞಗಳು.

ಬೆಂಗಳೂರಿನಂಥ ಕೈಗಾರಿಕಾನಗರದಲ್ಲೇ ದೇವಾಲಯಗಳ ಹಾಗೂ ಭಗವಂತನ ಸೇವಾಕಾರ್ಯಗಳ ಸಂಖ್ಯೆಯು ಬೆಳೆಯುತ್ತಿದೆ. ಇನ್ನು ತೀರ್ಥಕ್ಷೇತ್ರಗಳಲ್ಲಿ ಕೇಳಬೇಕೆ ? ವಿಷ್ಣುವು ಎಂದೆಂದಿಗೂ ತನ್ನ ಮಹಿಮಾತಿಶಯದಿಂದ ಬೆಳಗುತ್ತಲೇ ಇರುವನು- ಎಂದು ಅಭಿಪ್ರಾಯ.

**ಯಃ ಪೂರ್ವ್ಯಾಯ ವೇಧಸೇ ನವೀಯಸೇ ಸುಮಜ್ಜಾನಯೇ ವಿಷ್ಣವೇ ದದಾಶತಿ । ಯೋ ಜಾತಮಸ್ಯ ಮಹತೋ ಮಹಿ ಬ್ರವತ್ಸೇದುಶ್ರವೋಭಿರ್ಯುಜ್ಯಂಚಿದಭ್ಯಸತ್ ॥ ೨೦ ॥**

''ಯಾವ ಮನುಷ್ಯನು ಅತ್ಯಂತ ಸನಾತನನೂ ವಿವಿಧಜಗತ್ಸೃಷ್ಟಿಕರ್ತನೂ ನಿತ್ಯನೂತನನೂ ಅತಿಯಾಗಿ ಜಗತ್ತನ್ನು ಮದಗೊಳಿಸುವ ಲಕ್ಷ್ಮಿಯನ್ನು ಪತ್ನಿಯಾಗಿ ಉಳ್ಳವನೂ ವ್ಯಾಪಕನೂ ಆದ (ಭಗವಂತನಿಗೆ) ಹವಿಸ್ಸೇ ಮುಂತಾದವುಗಳನ್ನು ಸಮರ್ಪಿಸುವನೋ ಮತ್ತು ಯಾವನು ಈ ಮಹಾನುಭಾವನಾದ, ಪೂಜ್ಯನಾದ ಹಿರಣ್ಯಗರ್ಭನ ರೂಪದಿಂದ ತೋರಿಕೊಂಡವನ ಮಹಿಮೆಯನ್ನು ಹೇಳುತ್ತಿರುವನೋ ಅವನೂ ಎಂದರೆ ಹವಿಸ್ಸನ್ನು ದಾನಮಾಡುವನೂ ಮಹಿಮೆಯನ್ನು ಕೀರ್ತನೆಮಾಡುವವನೂ (ಇಬ್ಬರೂ) ಅನ್ನದಿಂದಲೂ ಕೀರ್ತಿಯಿಂದಲೂ ಕೂಡಿದವರಾಗಿ ಎಲ್ಲಾ (ಜ್ಞಾನಿಗಳೂ) ಪಡೆಯುವ ಪರಮಪದವನ್ನೇ ಹೊಂದುವರು'' ಎಂದು ಈ ಮಂತ್ರದ ಸರಳವಾದ ಅಭಿಪ್ರಾಯವು. ಇಲ್ಲಿ ಕೊಟ್ಟಿರುವ ಮಹಾವಿಷ್ಣುವಿನ ಗುಣವಿಶೇಷಗಳು ಈಗಾಗಲೆ ನಮಗೆ ಪರಿಚಿತವಾಗಿವೆ. 'ಸುಮಜ್ಜಾನಯೇ' ಎಂಬುದಕ್ಕೆ ಮಾತ್ರ ಹೆಚ್ಚಿನ ಅರ್ಥವನ್ನು ಅನುಸಂಧಾನಮಾಡಬೇಕಾಗಿದೆ. 'ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ' ಎಂದು ಪುರುಷಸೂಕ್ತದಲ್ಲಿ ಹೇಳಿರುವ ಹ್ರೀ- ಮತ್ತು ಲಕ್ಷ್ಮಿಯರು ವಿಷ್ಣುವಿನ ಪತ್ನಿಯರು. ಇವರಲ್ಲಿ ಲಕ್ಷ್ಮಿಯು ಜಗತ್ತಿನ ಬಹುಜನರಿಗೆ ಚೆನ್ನಾಗಿ ಪರಿಚಿತಳು. ಹ್ರೀ- ಎಂಬವಳು ಕೆಲವರಿಗೆ ಮಾತ್ರ ಗೊತ್ತು. ಹ್ರೀ ಎಂದರೆ ನಾಚಿಕೆ ಎಂದು ಸಾಮಾನ್ಯಾರ್ಥವಾದರೂ ನಮಗೆಲ್ಲ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಟ್ಟು ನಮ್ಮನ್ನು ಯಾವಾಗಲೂ ರಕ್ಷಿಸುತ್ತಿರುವ ಮಹಾವಿಷ್ಣುವನ್ನು ನಾವು ನೆನೆಯದೆ ಮರೆತಿರುವೆವಲ್ಲ- ಎಂಬ ನಾಚಿಕೆಯು ಎಷ್ಟು ಜನರಿಗೆ ಇದ್ದೀತು ? ವ್ಯವಹಾರದಲ್ಲಿ ಕೂಡ ನಾವು ಯಾರಾದರೊಬ್ಬ ಅಧಿಕಾರಿಯು ನಮಗೆ ಒಂದು ಹುದ್ದೆಯನ್ನು ಕೊಡಿಸಿದರೆ ಅಂಥವನನ್ನು ನೆನಪಿನಲ್ಲಿಟ್ಟುಕೊಂಡಿರುವೆವು. ಅಂಥವನು ಎದುರಾದಾಗ ನಾಚಿಕೆಯಿಂದ ತಲೆಬಾಗುವೆವು. ಇನ್ನು

ನಾವು ಮಹಾವಿಷ್ಣುವಿಗೆ ಎಷ್ಟರಮಟ್ಟಿಗೆ ಹ್ರೀಯುಕ್ತರಾಗಿ ನಮ್ರತೆಯಿಂದ ನಡೆದು ಕೊಳ್ಳಬೇಕೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಹೀಗಿದ್ದರೂ ಧನಮದದಿಂದ ನಾರಾಯಣನನ್ನು ನಾವು ತಿರಸ್ಕರಿಸಿರುವೆವು. ಆದರೆ ಆ ಧನಲಕ್ಷ್ಮಿಯು ವಿಷ್ಣುವಿನ ಪತ್ನಿಯೇ ಆಗಿರುವಳೆಂಬುದನ್ನೂ ಆಕೆಯು ನಮ್ಮ ವರ್ತನೆಯಿಂದ ಬೇಸರ ಗೊಂಡಿರುವಳೆಂದೂ ಅರಿಯಲಾರದೆ ಇರುವೆವು. ಲೋಕದಲ್ಲಿ ಧನಿಕರಾದ ಮೇಲೂ ಸುಖಿಗಳಾಗಿ ನಾವು ಬಾಳದೆ ಇರುವದಕ್ಕೆ ಇದೇ ಕಾರಣವು. ಆದ್ದರಿಂದ ಶ್ರುತಿಯು, ಲೋಕಕ್ಕೆ ಮದವುಂಟುಮಾಡುವ ಲಕ್ಷ್ಮಿಯನ್ನು ತನ್ನ ಪತ್ನಿಯಾಗಿಯೇ ಹೊಂದಿರುವ ಹಾಗೂ ಆಕೆಯನ್ನು ಅನಪಾಯಿನಿಯಾಗಿ ಎಂದೆಂದೂ ತನ್ನಲ್ಲಿಯೇ ನೆಲೆಸುವಂತೆ ಮಾಡಿಕೊಂಡಿರುವ ವಿಷ್ಣುವಿಗೇ ನಿಮ್ಮ ಆಹುತಿಪ್ರದಾನಗಳನ್ನು ಅರ್ಪಿಸಿರಿ- ಎಂದು ತಿಳಿಸುತ್ತಿದೆ. ಇನ್ನು ಯಜ್ಞವೆಂಬ ಶಬ್ದಾರ್ಥಕ್ಕೆ ಇಲ್ಲಿ ಹವಿಸ್ಸಿನ ಸಮರ್ಪಣೆಯ ಜೊತೆಗೆ ಭಗವಂತನ ಸ್ತುತಿಮಾಡುವದನ್ನೂ ಜೋಡಿಸಲಾಗಿದೆ. ವೇದಮಂತ್ರಗಳಿಂದ ನಾರಾಯಣನನ್ನು ಹೊಗಳುವದೇನೂ ಸಾಮಾನ್ಯಯಜ್ಞವಲ್ಲ. ವೇದದ ಒಂದೊಂದು ಅಕ್ಷರಪಾಠಕ್ಕೂ ಒಂದೊಂದು ಹರಿನಾಮವನ್ನು ಕೀರ್ತನೆ ಮಾಡಿದ ಫಲವುಂಟು- ಎಂದು ಸ್ಮೃತಿಗಳಲ್ಲಿ ತಿಳಿಸಿರುತ್ತದೆ. ಹೀಗೆ ಉಭಯ ವಿಧವಾದ ಯಜ್ಞವನ್ನು ಕೈಗೊಳ್ಳುವವನು ಶ್ರವೋಭಿಃ- ಅನ್ನಗಳಿಂದ ಅಥವಾ ಕೀರ್ತಿಗಳಿಂದ ಕೂಡಿದವನಾಗಿ ಯುಜ್ಯಂಚಿತ್ - ವಿಷ್ಣುಸಾಯುಜ್ಯಗತಿಯನ್ನೇ ಹೊಂದುವನು.

**ತಮು ಸ್ತೋತಾರಃ ಪೂರ್ವ್ಯಂ ಯಥಾ ವಿದ ಋತಸ್ಯ ಗರ್ಭಂ**
**ಜನುಷಾ ಪಿಪರ್ತನ । ಆಸ್ಯ ಜಾನಂತೋ ನಾಮ ಚಿದ್ವಿವಕ್ತನ**
**ಮಹಸ್ತೇ ವಿಷ್ಣೋ ಸುಮತಿಂ ಭಜಾಮಹೇ ॥ ೨೧ ॥**

"ಎಲೈ ಸ್ತೋತೃಗಳೆ, ಆ ವಿಷ್ಣುವನ್ನೇ- ಎಂದರೆ ಅನಾದಿಸಿದ್ಧನೂ ಋತ (ಯಜ್ಞ) ಗರ್ಭನೂ ಆದ ಅವನನ್ನು ಅರಿತುಕೊಳ್ಳಿರಿ. ಮತ್ತು ಅವನ (ಜನುಷಾ) ಕಡೆಯಿಂದಲೇ ವರಗಳನ್ನು ಪಡೆದುಕೊಂಡು ಸ್ತೋತ್ರಾದಿಗಳಿಂದ ಆರಾಧಿಸಿರಿ. ಹಾಗೂ ಈ ಮಹಾನುಭಾವನ ಹೆಸರನ್ನು (ಅತಿಹೆಚ್ಚಿನದೆಂದು) ಕಂಡು ಕೊಂಡವರಾಗಿ ಕೀರ್ತನೆಮಾಡಿರಿ. ಎಲೈ ವಿಷ್ಣುವೆ, ನಿನ್ನ ಪೂಜ್ಯವಾದ ಬುದ್ಧಿ (ಜ್ಞಾನ)ಯನ್ನು ನಾವು ಸೇವಿಸುವೆವು"- ಎಂದು ಈ ಮಂತ್ರದ ಸಾಮಾನ್ಯಾರ್ಥವು. ಋತಗರ್ಭನೆಂದರೆ ಉದಕತತ್ತ್ವಕ್ಕೆ ಮೂಲನೆಂದೂ ಮತ್ತೊಂದು ಅರ್ಥವಿದೆ. ಆಗ

ನಾರಾಯಣನಾಮನಿರ್ವಚನದಲ್ಲಿ ಹೇಳಿರುವಂತೆ ಜಗತ್ತಿನಲ್ಲಿ ಮೊದಲು ಸೃಷ್ಟಿಯಾದ ಜಲತತ್ತ್ವವೇ ನಾರವು. ಅದಕ್ಕೆ ಆಶ್ರಯನಾದವನೇ ನಾರಾಯಣ ನೆಂಬ ಋತಗರ್ಭನಾಗಿರುವನು. ಈತನು ಆದಿದೇವನಾದ್ದ ರಿಂದ ಪೂಜ್ಯನೆನಿಸಿರು ವನು. ಇವನ ಸ್ವರೂಪವನ್ನು 'ಯಥಾವಿದ' ಎಂದರೆ ಯಥಾರ್ಥವಾಗಿ ಅರಿತು ಕೊಳ್ಳಿರಿ- ಎಂದು ಶ್ರುತಿಯು ತಿಳಿಸುತ್ತಿದೆ. ನಾರಾಯಣನು ಮಹಾಜ್ಞೇಯನೂ ವಿಶ್ವಾತ್ಮನೂ ಪರಾಯಣನೂ ಆಗಿರುವನು. ಅವನೇ ಪರಂಜ್ಯೋತಿಯೂ ಪರಮಾತ್ಮನೂ ಪರತತ್ತ್ವವೂ ಆಗಿದ್ದು ಈ ಬ್ರಹ್ಮಾಂಡದಲ್ಲಿ ಏನೇನು ಕಾಣಬರುವದೋ ಕೇಳಬರುವದೋ ಅವನ್ನೆಲ್ಲವನ್ನೂ ಒಳಗೂ ಹೊರಗೂ ವ್ಯಾಪಿಸಿಕೊಂಡು ನಾರಾಯಣನೇ ಇದ್ದುಕೊಂಡಿರುವನು. ಹೀಗೆ ಅವ್ಯಯನೂ ಕವಿಯೂ ಸಂಸಾರಸಮುದ್ರದಾಚೆಗೆ ಇರುವವನೂ ಆದ ವಿಷ್ಣುವು ತನ್ನ ಭಕ್ತರಿಗೆ ಮಾತ್ರವೇ ತನ್ನ ಸ್ವರೂಪವನ್ನು ಬಿಚ್ಚಿ ತೋರಿಸುವನು. ಆದ್ದರಿಂದ ನಾರಾಯಣನ ಭಕ್ತಿಯಿಂದಲೇ ಆತನ ಯಥಾರ್ಥವಾದ ಅರಿವು ಉಂಟಾಗ ಬೇಕಾಗಿದೆ. ಇಂಥ ಅರಿವನ್ನು ಸಂಪಾದಿಸಲು ಆತನನ್ನು ಸೇವಿಸುತ್ತಾ ಯಜ್ಞಾದಿಗಳಿಂದ ಆರಾಧಿಸುತ್ತಾ ಸ್ತೋತ್ರಮಾಡುತ್ತಾ ಜನ್ಮಸಾರ್ಥಕ್ಯವನ್ನು ಪಡೆಯಿರಿ- ಎಂದಭಿಪ್ರಾಯ.

ಈಗ ಈ ಮಂತ್ರದಲ್ಲಿ ಸ್ಫುಟಗೊಳಿಸಿರುವ ಮತ್ತೊಂದು ವಿಷಯ ವೇನೆಂಬುದನ್ನು ನೋಡೋಣ. 'ನಾಮ ಚಿದ್ವಿವಕ್ತನ' ಎಂಬಲ್ಲಿ ಭಗವಂತನ ನಾಮವನ್ನು ಸಂಕೀರ್ತನೆಮಾಡಬೇಕೆಂದು ತಿಳಿಸಲಾಗಿದೆ. ವೈದಿಕಸಾಹಿತ್ಯದಲ್ಲಿ ನಾಮಕೀರ್ತನೆಯ ವಿಷಯವೆಲ್ಲಿದೆ ? ಎಂದು ಕೇಳುವವರಿಗೆ ಇದು ಉತ್ತರವಾಗಿದೆ. ಪುರಾಣಸಾಹಿತ್ಯಗಳಲ್ಲೆಲ್ಲ ಭಗವನ್ನಾಮಕೀರ್ತನೆಗೆ ಪ್ರಾಶಸ್ತ್ಯವನ್ನು ನೀಡಿ ಅಧ್ಯಾತ್ಮ ಸಾಧನಗಳಲ್ಲಿ ಅದು ಬಹಳ ಸುಲಭಸಾಧ್ಯವೂ ಸರ್ವಶ್ರೇಷ್ಠವೂ ಸರ್ವರಿಗೂ ಸಮಾನವಾಗಿ ದೊರಕತಕ್ಕದ್ದೂ ಆಗಿರುವದೆಂದು ಕೊಂಡಾಡಿರುವದಕ್ಕೆ ಈ ಮಂತ್ರದ ಅಭಿಪ್ರಾಯವೇ ಮೂಲವಾಗಿರುತ್ತದೆ. ವಿಷ್ಣು ಎಂಬ ನಾಮವನ್ನು ಮಹಿಮಾಜ್ಞಾನಪೂರ್ವಕವಾಗಿ ಘೋಷಿಸಿರಿ- ಎಂದೇ ಇಲ್ಲಿ ಅಪ್ಪಣೆಮಾಡಿರುತ್ತದೆ. ಹೀಗೆ ಘೋಷಿಸುವದರ ಜೊತೆಗೆ ವಿಷ್ಣುವಿನ 'ಸುಮತಿ'ಯನ್ನೂ ನಾವು ಸೇವಿಸಬೇಕು. ಸುಮತಿ ಎಂದರೆ ಸದ್ಬುದ್ಧಿಯು. ಅದು ವಿಷ್ಣುವಿನಿಂದಲೇ ದೊರಕಬೇಕಾಗಿದೆ. ಹಾಗಾದರೆ ಮಾತ್ರವೇ ನಾಮಕೀರ್ತನೆಯಲ್ಲಿ ನಮಗೆ ಶ್ರದ್ಧೆಯುಂಟಾದೀತು. ಕರ್ಮಕಾಂಡಪ್ರವೀಣರಾದ ಋಷಿಗಳು ಕೂಡ ಎಲ್ಲಾ

ಕರ್ಮವಿಧಿಗಳು ಪೂರೈಸಿದ ಅನಂತರ ನಡುವೆ ಸಂಭವಿಸಿರಬಹುದಾದ ಮಂತ್ರ ತಂತ್ರ ಸ್ವರವರ್ಣಗಳ ಉಚ್ಚಾರಣೆಯಲ್ಲಿನ ಲೋಪದೋಷಗಳ ಪರಿಹಾರಕ್ಕೂ ಕರ್ಮಗಳನ್ನು ಮಾಡುವಾಗ ಮನುಷ್ಯಬುದ್ಧಿಯ ಪ್ರಮಾದದಿಂದ ಸಂಭವಿಸಿದ ನ್ಯೂನಾತಿರೇಕಗಳ ಪ್ರಾಯಶ್ಚಿತ್ತಾರ್ಥವಾಗಿಯೂ 'ಅಚ್ಯುತಾನಂತಗೋವಿಂದ' ನಾಮಗಳ ಜಪವನ್ನೇ ವಿಧಿಸಿರುತ್ತಾರೆ. ಈ ನಾಮಗಳು ಬೆಸುಗೆಗಳಂತಿದ್ದು-ತೂತಾದ ಪಾತ್ರೆಯನ್ನು ಸೀಸದಿಂದ ಬೆಸೆಯುವಂತೆ- ಕರ್ಮಚ್ಛಿದ್ರಗಳನ್ನೆಲ್ಲ ಬೆಸೆದು ಪರಿಪೂರ್ತಿಗೊಳಿಸುವವು. ನಾಮಗಳ ಮಹಿಮೆಯೇ ಹೀಗಿರುವಲ್ಲಿ ನಾಮಿಯಾದ ಭಗವಂತನ ನಿರತಿಶಯಸ್ವರೂಪವನ್ನು ಹೇಳತಕ್ಕದ್ದೇನಿದೆ? ಶ್ರುತಿಯು ಎಲ್ಲಾ ವೈದಿಕವಿದ್ವನ್ಮಣಿಗಳಿಗೂ ಈಗ ಎಚ್ಚರಿಕೆಯನ್ನು ಕೊಡುತ್ತಿದೆ. ''ವೇದಮಂತ್ರಗಳ ಅಭಿಜ್ಞರು ನಾವು'' ಎಂಬ ಅಹಂಕಾರವನ್ನು ಬಿಡಿರಿ. ವೇದಪಾರಾಯಣವಾಗಲಿ, ವೇದೋಕ್ತಾನುಷ್ಠಾನಗಳಾಗಲಿ ನಾಮಕೀರ್ತನೆಯಿಲ್ಲದೆ ಪರಿಪೂರ್ಣವಾಗಲಾರವು. ವಿಷ್ಣುವಿನ ನಾಮಗಳಲ್ಲಿ ಸಕಲವೇದಫಲವೂ ಅಡಗಿರುತ್ತದೆ. ವೇದಾಧಿಕಾರಿಗಳಲ್ಲದವರು ಕೂಡ ನಾಮಕೀರ್ತನಕ್ಕೆ ಅಧಿಕಾರಿಗಳೇ ಆಗಿರುತ್ತಾರೆ. ಆದ್ದರಿಂದ ನೀವು ನಿಮ್ಮ ಎಲ್ಲಾ ಕರ್ಮಗಳನ್ನೂ ಮಹದ್ಯಶನಾದ ನಾಮಕೀರ್ತನಪ್ರಿಯನಾದ ವಿಷ್ಣುವಿಗೆ ಸಮರ್ಪಿಸಿರಿ'' ಎಂದು ಇಲ್ಲಿ ತಿಳಿಸಿದಂತಾಗಿದೆ.

**ತಮಸ್ಯ ರಾಜಾ ವರುಣಸ್ತಮಶ್ವಿನಾ ಕ್ರತುಂ ಸಚನ್ತಮಾರುತಸ್ಯ ವೇಧಸಃ । ದಾಧಾರ ದಕ್ಷಮುತ್ತಮಮಹರ್ವಿದಂ ವ್ರಜಂ ಚ ವಿಷ್ಣುಃ ಸಖಿವಾನ್ ಅರ್ಪೋರ್ಣುತೇ ॥ ೨೨ ॥**

''ಋತ್ವಿಜರ ಸಮೂಹದಿಂದ ಕೂಡಿರುವ ಮೇಧಾವಿಯಾದ ಯಜಮಾನನ ಆ ಪ್ರಸಿದ್ಧವಾದ ಯಾಗವನ್ನು- ಎಂದರೆ ಯಜ್ಞವೆಂಬ ಹೆಸರಿನ ವಿಷ್ಣುವನ್ನು ವಿರಾಜಮಾನನಾದ ವರುಣನೂ ಅಶ್ವಿನೀದೇವತೆಗಳೂ ಸೇವಿಸುತ್ತಿರುವರು. ಆ ವಿಷ್ಣುವು ಯಜಮಾನನೇ ಮುಂತಾದ ಸ್ನೇಹಿತರುಳ್ಳವನಾಗಿ ಉತ್ತಮನಾದ ಸ್ವರ್ಗವನ್ನುಂಟುಮಾಡುವ ಸಮರ್ಥಫಲರೂಪನಾಗಿ ತೋರಿಕೊಳ್ಳುತ್ತಿರುವನು ಎಂದರೆ ಅಂಥ ರೂಪವನ್ನು ಧರಿಸಿರುವನು. ಮತ್ತು ಮೋಡವನ್ನು ನೀರು ಸುರಿಸುವದಕ್ಕಾಗಿ ಅಪಾವರಣ (ಬಿಡುಗಡೆ) ಮಾಡುತ್ತಿರುವನು'' ಎಂದು ಈ ಮಂತ್ರದ ಸರಳವಾದ ಅರ್ಥವು.

ಇಲ್ಲಿ ಭಾಷ್ಯಕಾರರು ಮಾರುತ, ಅಹರ್ವಿದ, ವ್ರಜ- ಎಂಬ ಶಬ್ದಗಳಿಗೆ ಕ್ರಮವಾಗಿ ಯಜಮಾನ, ಸ್ವರ್ಗೋತ್ಪಾದಕ, ಮೇಘ- ಎಂಬರ್ಥಗಳನ್ನು ನೀಡಿರುತ್ತಾರೆ. ಯಜಮಾನನು ಋತ್ವಿಜರ ಸಹಾಯವಿಲ್ಲದೆ ಯಾವ ಯಾಗವನ್ನೂ ಮಾಡಲಾರನು. ಆದ್ದರಿಂದ ಋತ್ವಿಜರ ಗುಂಪಿನಿಂದ ಆವೃತನಾಗಿರುವ ಯಜಮಾನನು ಮಾರುತನೆನಿಸಿರುವನು. ಅವನು ಇಷ್ಟಪ್ರಾಪ್ತಿಗಾಗಿ ಮಾಡುವ ಯಾಗರೂಪವಾದ ವೈದಿಕಕರ್ಮವೇ ವಿಷ್ಣುವಾಗಿರುವದು. 'ಯಜ್ಞವೇ ವಿಷ್ಣುವು' ಎಂದು ಶ್ರುತಿಯೂ ಇದೆ. ಈಗಲೂ ಸತ್ಯನಾರಾಯಣವ್ರತದಲ್ಲಿ ಕಥಾ ಭಾಗದಲ್ಲಿರುವ ಒಂದು ಶ್ಲೋಕದಲ್ಲಿ ''ಕಲಿಯುಗದಲ್ಲಿ ನಾರಾಯಣನು ಸತ್ಯವ್ರತರೂಪನಾಗಿಯೇ ಅವತಾರಮಾಡಿರುತ್ತಾನೆ'' ಎಂದಿದೆ. ಇದಕ್ಕೆ ವೇದವೇ ಆಧಾರವೆಂತ ಈಗ ಗೊತ್ತಾಯಿತು. ಇಂಥ ಯಾಗವು ದರ್ಶನಮಾತ್ರದಿಂದಲೇ ವಿಷ್ಣುಸಾಕ್ಷಾತ್ಕಾರದ ಫಲವನ್ನೇ ಬಲ್ಲವರಿಗೆ ಉಂಟುಮಾಡಲಿದೆ. ಯಜಮಾನನಾದರೋ ಇಂಥ ವಿಷ್ಣುವಿನ ಆರಾಧಕನಾಗಿರುವಲ್ಲಿ ವಿಷ್ಣುವಿನ ಸೇವೆಯನ್ನು ಉಳಿದ ದೇವತೆಗಳೂ ಕೈಗೊಂಡಿರುವರು. ಅಂಥವರಲ್ಲಿ ವರುಣನೂ ಅಶ್ವಿನೀದೇವತೆಗಳೂ ಮುಖ್ಯರಾಗಿರುವರು. ಹೀಗೆ ದೇವತೆಗಳಿಂದಲೂ ಋತ್ವಿಗ್ಯಜಮಾನರುಗಳಿಂದಲೂ ಪರಿವೃತನಾದ ವಿಷ್ಣುವು ಯಜ್ಞಫಲರೂಪದಲ್ಲಿ ಪ್ರತ್ಯಕ್ಷನಾಗಿರುವನು. ಹೇಗೆಂದರೆ : ಕರ್ಮಫಲವು ಐಹಿಕ, ಆಮುಷ್ಮಿಕ- ಎಂದು ಎರಡು ವಿಧವಾಗಿದೆ. ಆಮುಷ್ಮಿಕವೆಂದರೆ ಶರೀರವನ್ನು ಬಿಟ್ಟಮೇಲೆ ಪಡೆಯುವ ಸ್ವರ್ಗಾದಿಗಳು. ಐಹಿಕವೆಂದರೆ ಮಳೆ, ಬೆಳೆ, ಮುಂತಾದವುಗಳು. ಯಜ್ಞಕ್ಕೆ ಆಮುಷ್ಮಿಕಫಲವು ಉಂಟೆಂಬುದನ್ನು ಐಹಿಕಫಲಪ್ರಾಪ್ತಿಯ ಮೂಲಕವೇ ನಂಬಬೇಕಾಗಿರುವದರಿಂದ ವಿಷ್ಣುವು ಯಜಮಾನನಿಗೆ ಮೊದಲು ಐಹಿಕಪ್ರತ್ಯಕ್ಷ ಫಲವನ್ನೇ ದಯಪಾಲಿಸುತ್ತಾನೆ. ಅದೇನೆಂದರೆ : ಮೋಡಗಳ ಆವರಣ (ಅಡ್ಡಿ)ಯನ್ನು ತೆರವು ಮಾಡುವ ಮೂಲಕ ಒಳ್ಳೆಯ ಮಳೆಯಾಗುವಂತೆ ಮಾಡುವದು. ಇದನ್ನೇ ಗೀತೆಯಲ್ಲಿ 'ಯಜ್ಞಾದ್ ಭವತಿ ಪರ್ಜನ್ಯಃ' ಎಂದು ತಿಳಿಸಿದೆ. ಯಜ್ಞವಿಲ್ಲದಾಗಲೂ ಮಳೆಯು ಬರುವದಲ್ಲವೆ ? ಎಂದು ಕೇಳಬಾರದು. ಆ ಮಳೆಯೂ ಅದರಿಂದ ಬೆಳೆಯುವ ಸಸ್ಯಗಳೂ ಅದನ್ನು ತಿಂದ ಮನುಷ್ಯರೂ ರಾಜಸತಾಮಸರೂ ಲೋಕಕಂಟಕರೂ ಆಗುತ್ತಾರೆ. ಅಂಥವರಲ್ಲಿ ಸ್ವಾರ್ಥವೇ ತುಂಬಿದ್ದು ಜಗತ್ತಿನ ಕ್ಷಯಕ್ಕೆ ಆ ಪ್ರಜೆಗಳು ಕಾರಣರಾಗುವರು. ಆದರೆ

ಯಜ್ಞರೂಪಿಯಾದ ಭಗವಂತನ ಪ್ರಸಾದವಾಗಿ ಭೂಮಿಗೆ ಬಿದ್ದ ಮಳೆಯೂ ಅದರಿಂದ ಬೆಳೆದ ಸಸ್ಯಗಳೂ ಸಾತ್ತ್ವಿಕಜನರ ಹುಟ್ಟಿಗೆ ಕಾರಣವಾಗಿದ್ದು ಲೋಕಕಲ್ಯಾಣವಾಗುವದು. ಇವೆಲ್ಲವೂ ಕಣ್ಣಿಗೆ ಗೋಚರವಾಗತಕ್ಕವುಗಳಲ್ಲ. ಇಂಥ ವಿಷಯಗಳಿಗೆ ವೈಜ್ಞಾನಿಕಪರೀಕ್ಷೆಯೂ ಕೂಡದು. ಭೌತಿಕವಿಜ್ಞಾನಕ್ಕೂ ಭಗವತ್ತತ್ತ್ವಕ್ಕೂ ತೀರ ದೂರವಿದೆ. ಆದ್ದರಿಂದ ಭಗವತ್ತತ್ತ್ವದ ಅರಿವಿನಿಂದ ಪರಮಪುರುಷಾರ್ಥವನ್ನು ಬಯಸುವವರು ಶ್ರದ್ಧಾಭಕ್ತಿಗಳನ್ನೇ ಬಂಡವಾಳ ವಾಗಿಟ್ಟುಕೊಂಡು ಯಜ್ಞಗಳನ್ನು ಅನುಷ್ಠಾನಮಾಡಿ ಆ ಮೂಲಕ ಜಗತ್ಕಲ್ಯಾಣ ವನ್ನೂ ಆತ್ಮಕಲ್ಯಾಣವನ್ನೂ ಸಾಧಿಸಿಕೊಳ್ಳಬೇಕು.

**ಆ ಯೋ ವಿವಾಯ ಸಚಥಾಯ ದೈವ್ಯ ಇಂದ್ರಾಯ ವಿಷ್ಣುಃ ಸುಕೃತೇ ಸುಕೃತ್ತರಃ । ವೇಧಾ ಅಜಿನ್ವನ್ ತ್ರಿಷಧಸ್ಥ ಆರ್ಯಂ ಋತಸ್ಯ ಭಾಗೇ ಯಜಮಾನಮಾಭಜತ್ ॥೨೩॥**

''ಯಾವ ವಿಷ್ಣುವು ದ್ಯುಲೋಕನಿವಾಸಿಯಾಗಿರುವನೋ ಹಾಗೂ ಸತ್ಕರ್ಮಗಳಿಗೆ ಅತಿಹೆಚ್ಚಿನ ಸತ್ಫಲಗಳನ್ನು ನೀಡುವವನಾಗಿರುವನೋ ಅವನು ಅನ್ನದಾನಮಾಡುವ ಯಜ್ಞಕರ್ತೃವಾದ ಯಜಮಾನನಿಗೆ ಸಹಾಯಮಾಡುವದ ಕ್ಕಾಗಿ ಬರುತ್ತಿರುವನು. ಸ್ತುತಿಮಾಡುತ್ತಿರುವ ಕರ್ತೃವಿಗೆ ಅಭೀಷ್ಟದಾತೃವಾದ ಆತನು ಮೂರು ಸವನಗಳಲ್ಲಿಯೂ ಹಾಜರಿದ್ದು ಹವಿಸ್ಸನ್ನು ಸ್ವೀಕರಿಸಿ ಮುಂದೆ ಬರಲಿರುವ ಯಜ್ಞಫಲದೊಡನೆ ಯಜಮಾನನನ್ನು ಕೂಡಿಸುವನು'' ಎಂದು ಈ ಮಂತ್ರದ ಭಾವಾರ್ಥ.

ಈ ಮಂತ್ರದಲ್ಲಿ ಸವನತ್ರಯಗಳ ವಿಚಾರವಿದೆ. ಯಜ್ಞವು ಬಹು ಪ್ರಯಾಸಸಾಧ್ಯವಾದ ಕರ್ಮವು. ಅದು ಬೆಳಗಿನ ವೇಳೆ, ಮಧ್ಯಾಹ್ನ, ಹಾಗೂ ಸಂಜೆ- ಈ ರೀತಿ ಮೂರು ಕಾಲದಲ್ಲಿಯೂ ಮುಂದುವರೆಯುತ್ತಲೇ ಇರುವದು. ಇಷ್ಟಾದರೂ ಚುರುಕಾಗಿ ಕಾಲಕಾಲಕ್ಕೆ ಆಯಾ ವಿಧಿವಿಧಾನಗಳನ್ನು ಮಾಡದೆ ಹೋದರೆ ಪೂರೈಸುವದೇ ಇಲ್ಲ. ಆದ್ದರಿಂದ ಯಜ್ಞಕ್ಕೆ ಯಜ್ಞವಿದ್ಯಾಕುಶಲರೂ ಸಮರ್ಥರೂ ಆದವರನ್ನೇ ಋತ್ವಿಜರನ್ನಾಗಿ ಸೇರಿಸಿಕೊಳ್ಳಬೇಕು. ಇರಲಿ. ಯಜ್ಞದಲ್ಲಿ ಬೆಳಗಿನ ವೇಳೆ ಮಾಡುವ ಹೋಮಾದಿಗಳನ್ನು ಪ್ರಾತಃಸವನವೆಂದೂ ಮಧ್ಯಾಹ್ನದಲ್ಲಿ ಮಾಡುವ ಹವನಾದಿಗಳನ್ನು ಮಾಧ್ಯಂದಿನಸವನವೆಂದೂ ಸಂಜೆಯಲ್ಲಿ ಮಾಡುವದನ್ನು ಸಾಯಂಸವನವೆಂದೂ ಕರೆಯುತ್ತಾರೆ. ಈ ಮೂರು

ಸವನಗಳಲ್ಲಿಯೂ ಯಾವ ದೇವತೆಯನ್ನೇ ಕರೆಯಲಿ, ಹವಿಸ್ಸನ್ನು ಅರ್ಪಿಸಲಿ, ವಿಷ್ಣುವು ಮಾತ್ರ ಎಲ್ಲಾ ದೇವತೆಗಳೊಡನೆಯೂ ಇದ್ದೇಇರುವನು. ಏಕೆಂದರೆ ಸರ್ವದೇವತೆಗಳೂ ವಿಷ್ಣುವಿನಲ್ಲಿಯೇ ಅಡಕರಾಗಿರುವರು. ಆದ್ದರಿಂದ ಸವನತ್ರಯರೂಪವಾದ ಯಜ್ಞಾಧಿಪತಿಯು ಪ್ರಧಾನವಾಗಿ ವಿಷ್ಣುವೇ. ಈತನು ಸರ್ವವ್ಯಾಪಕನೆಂದು ವೇದಾಂತಗಳಲ್ಲಿ ಹೇಳಿದ್ದರೂ ಕರ್ಮಿಗಳ ದೃಷ್ಟಿಯಿಂದ ಇವನು ದ್ಯುಲೋಕನಿವಾಸಿಯೂ ಕರ್ಮಫಲಕ್ಕೂ ಯಜಮಾನನಿಗೂ ಪರಸ್ಪರ ಸಂಬಂಧವನ್ನು ಕಲ್ಪಿಸುವವನೂ ಆಗಿರುವನು. ಇಲ್ಲವಾದರೆ ಜಡವಾದ ಕರ್ಮವು ಅನುಷ್ಠಾನಮಾಡಿದಕೂಡಲೆ ಕಣ್ಮರೆಯಾಗಿಬಿಡುವದರಿಂದ ಅದು ಕಾಲಾಂತರದಲ್ಲಿ ಹೇಗೆ ತಾನೆ ಫಲವನ್ನು ಕೊಟ್ಟೀತು ? ಇದಕ್ಕಾಗಿ ಇಲ್ಲಿ ಸವನತ್ರಯದೇವತೆಯೂ ಯಜ್ಞಫಲದಾತೃವೂ ಆದ ವಿಷ್ಣುವನ್ನು ಸ್ತುತಿಸಲಾಗಿದೆ. ಈ ಮಹಾವಿಷ್ಣುವು ಯಜ್ಞಪತಿಯಾಗಿರುವದರ ಜೊತೆಗೆ ಕರ್ಮಕ್ಕೆ ಸಹಾಯಕನೂ ಆಗಿರುವನು. ಅದಕ್ಕಾಗಿಯೇ ದ್ಯುಲೋಕದಿಂದ ಹೊರಟು ಯಜ್ಞವೇದಿಕೆಗೆ ಒಲಿದು ಬಂದಿರುವನು. ಋತ್ವಿಜನು ಯಜ್ಞದಲ್ಲಿ ದೇವತೆಯನ್ನುದ್ದೇಶಿಸಿ ಅಗ್ನಿಯಲ್ಲಿ ಹೋಮಮಾಡಿದಾಗ ಆ ಕರ್ತೃವಿಗೆ ಮಂತ್ರಸ್ಮರಣಪಠನಶಕ್ತಿಯನ್ನೂ ಅಗ್ನಿಗೆ ಆಹುತಿಯನ್ನು ಸುಟ್ಟು ಜೀರ್ಣಗೊಳಿಸಿಕೊಳ್ಳುವ ಶಕ್ತಿಯನ್ನೂ ಅಗ್ನಿಯು ಉರಿಯುವದಕ್ಕೆ ಸಹಾಯವಾಗಿ ಗಾಳಿಬೀಸುವಿಕೆಯನ್ನೂ ಪದಾರ್ಥಗಳು ಬೆಳಗುವದಕ್ಕೆ ಸೂರ್ಯನಿಂದ ಬೆಳಕಿನ ಸಹಾಯವನ್ನೂ ಒದಗಿಸಿರುವವನಾರು ? ವಿಷ್ಣುವೇ ಅಲ್ಲವೆ ? ಹೀಗೆಯೇ ಚಿಂತಿಸುತ್ತಾ ಹೋದರೆ ವಿಷ್ಣುವನ್ನು ಬಿಟ್ಟು ಬೇರೇನಿದ್ದೀತು ? ವಿಷ್ಣುವಿಲ್ಲದೆ ಎಂದಿಗಾದರೂ ಯಜ್ಞವು ನೆರವೇರೀತೆ ? ಆದ್ದರಿಂದ ಯಜ್ಞವೇ ವಿಷ್ಣುವೆಂಬುದು ಸ್ತುತಿಯಲ್ಲ. ವಸ್ತುಸ್ಥಿತಿಯನ್ನೇ ತಿಳಿಸಿದಂತಾಗಿದೆ.

ಇಷ್ಟೇ ಅಲ್ಲ. ನಮ್ಮ ಜೀವನಯಜ್ಞವೂ ವಿಷ್ಣುಮಯವೇ ಆಗಿದೆ. ಆದರೆ ನಾವು ಅದನ್ನು ಮರೆತಿದ್ದೇವೆ. ನಮ್ಮ ದೈನಂದಿನವ್ಯವಹಾರವನ್ನೇ ನೋಡೋಣ. ನಮಗೆ ಅಗತ್ಯವಾಗಿರುವ ಗಾಳಿ, ನೀರು, ಆಹಾರ, ಬೆಳಕು, ಆಶ್ರಯ, ಆಧ್ಯಾತ್ಮಿಕವಾಗಿ ಶರೀರೇಂದ್ರಿಯಮನೋಬುದ್ಧಿಗಳು, ಆರೋಗ್ಯ-ಬಲ-ಪ್ರಜ್ಞಾ ವೀರ್ಯಾದಿಗಳು- ಎಲ್ಲವೂ ಎಲ್ಲಿಂದ ಬರುತ್ತವೆ ? ಇವುಗಳನ್ನು ಪ್ರತಿಯೊಂದು ಪ್ರಾಣಿಗೂ ವಂಚನೆಯಿಲ್ಲದಂತೆ ನೀಡುವವನಾರು ? ಇಷ್ಟನ್ನೆಲ್ಲ ದಯಪಾಲಿಸಿದ

ಆತನಿಗೆ ನಾವು ಕೊಡುವದೇನು ? ಆದ್ದರಿಂದ ನಾವು ಎಂದಿಗೂ ವಿಷ್ಣುವನ್ನು ಮರೆಯಬಾರದು. ಯಜ್ಞಗಳಿಂದ ವಿಮುಖರಾಗಬಾರದು- ಎಂದು ಈ ಮಂತ್ರಗಳಲ್ಲಿ ತಿಳಿಸಿರುತ್ತದೆ.

**ಸಂ ವಾಂ ಕರ್ಮಣಾ ಸಮಿಷಾ ಹಿನೋಮೀಂದ್ರಾವಿಷ್ಣೂ ಅಪಸಸ್ಪಾರೇ ಅಸ್ಯ । ಜುಷೇಥಾಂ ಯಜ್ಞಂ ದ್ರವಿಣಂ ಚ ಧತ್ತಂ ಅರಿಷ್ಟೈರ್ನಃ ಪಥಿಭಿಃ ಪಾರಯಂತಾ ॥ ೨೪ ॥**

''ಎಲೈ ಇಂದ್ರಾವಿಷ್ಣುಗಳೆ, ನಿಮ್ಮಿಬ್ಬರನ್ನೂ ಸ್ತೋತ್ರರೂಪವಾದ ಕರ್ಮದಿಂದಲೂ ಹವಿರ್ದಾನದಿಂದಲೂ ನಾನು ಚೆನ್ನಾಗಿ ಪ್ರೇರಿಸುತ್ತಿರುವೆನು. ಕರ್ಮದ ಕೊನೆಯಲ್ಲಿ ನೀವು ಅನುಗ್ರಹಮಾಡಿರಿ. ಮತ್ತು ಉಪದ್ರವಗಳಿಲ್ಲದ ಹಾದಿಯಿಂದ ನಮ್ಮನ್ನು ಪಾರುಗೊಳಿಸಿರಿ ; ಧನವನ್ನೂ ದಯಪಾಲಿಸಿರಿ'' ಎಂದು ಈ ಮಂತ್ರದ ಸರಳವಾದ ಅರ್ಥವು.

ಇಂದ್ರನು ಬಲಾಧಿಪತಿಯು. ಆತನು ಯಜ್ಞವನ್ನು ರಕ್ಷಿಸಲು ಸಮರ್ಥನಾಗಿರುವನು. ಅವನನ್ನು ಎದುರಾಳಿಯಿಲ್ಲದವನೆಂದೂ ಯಜ್ಞವನ್ನು ಮಾಡುವ ಯಜಮಾನನಿಗೆ ರಕ್ಷಣೆಯನ್ನು ಕೊಡುವವನೆಂದೂ ವೇದಗಳಲ್ಲಿ ಸ್ತುತಿಸಲಾಗಿದೆ. ಅಸುರರನ್ನು ಜಯಿಸುವದರಲ್ಲಿಯೂ ಆತನು ಅಪ್ರತಿಮ ಪರಾಕ್ರಮನು. ಹಾಗೆಯೇ ವಿಷ್ಣುವು ಫಲಪ್ರದನು. ಯಾವ ದೇವತೆಯೂ ವಿಷ್ಣುವಿಗೆ ಸಮನಾಗಲಾರನು. ಎಲ್ಲಾ ಕಾಮಗಳನ್ನೂ ಪರಿಪೂರ್ಣಗೊಳಿಸುವ ಸಾಮರ್ಥ್ಯವು ವಿಷ್ಣುವಿಗೆ ಮಾತ್ರವೇ ಇರುವದು. ನಾವು ಬಲ, ವೀರ್ಯ, ಬುದ್ಧಿ, ಧನ, ಯಶಸ್ಸು, ಆಯುಸ್ಸು- ಮುಂತಾದ ಕಾಮಗಳನ್ನು ಒಬ್ಬೊಬ್ಬ ದೇವತೆಯಿಂದ ಪಡೆಯಬೇಕಾದರೂ ಆಯಾ ದೇವತೆಯನ್ನು ಒಲಿಸಿಕೊಳ್ಳಬೇಕು. ಆ ದೇವತೆಗಾಗಿ ಹವಿರ್ದಾನವನ್ನೂ ಮಾಡಬೇಕು. ಮಾಡುವಾಗಲೂ ಮಂತ್ರತಂತ್ರಗಳಲ್ಲಿ ಲೋಪವಾದರೆ ವಿಧಿಗಳಲ್ಲಿ ನ್ಯೂನಾತಿರೇಕಗಳಾದರೆ ಆ ದೇವತೆಯು ಹವಿಸ್ಸನ್ನೂ ಸ್ವೀಕರಿಸುವದಿಲ್ಲ. ಫಲವನ್ನೂ ಕೊಡುವದಿಲ್ಲ. ಆದರೆ ಕರ್ಮಾನುಷ್ಠಾನವನ್ನು ಮಾಡುವಾಗ ಎಷ್ಟೇ ಎಚ್ಚರವಾಗಿದ್ದರೂ ತಪ್ಪುಗಳುಂಟಾಗಿಬಿಡುತ್ತವೆ. ಹೀಗಿರುವದರಿಂದಲೇ ವಿಷ್ಣುಸ್ಮರಣೆಯು ಎಲ್ಲಾ ಕರ್ಮಗಳ ಅನುಷ್ಠಾನಕಾಲಕ್ಕೂ ಕಡ್ಡಾಯವಾಗಿರುತ್ತದೆ. ವಿಷ್ಣುವಿನ ಸ್ಮರಣೆಯಿಂದ ಕರ್ಮಛಿದ್ರಗಳು ಪರಿಹಾರವಾಗಿ ದೇವತೆಗಳೆಲ್ಲರೂ ಒಲಿಯುತ್ತಾರೆ. ಹೀಗೆ ಕರ್ಮರಕ್ಷಣೆಗೆ ಹಾಗೂ ಬಲಪ್ರಾಪ್ತಿಗೆ

ಇಂದ್ರನೂ ಕರ್ಮಫಲದಾನಕ್ಕೆ ವಿಷ್ಣುವೂ ಸನ್ನದ್ಧರಾದರೆಂದರೆ ನಮ್ಮ ಪ್ರಯತ್ನಗಳು ಸಿದ್ಧಿಸುವವು. ಈ ಮಂತ್ರದಲ್ಲಿ ಈ ಎರಡು ದೇವತೆಗಳನ್ನೂ ಆರಾಧಿಸಿ ಯಜಮಾನನು ತನಗೆ ಐಶ್ವರ್ಯವನ್ನೂ ಸುಖವನ್ನೂ ಉಂಟುಮಾಡುವಂತೆ ಕೇಳಿಕೊಂಡಿರುತ್ತಾನೆ. ಮತ್ತು ಸನ್ಮಾರ್ಗದಲ್ಲಿ ತನ್ನನ್ನು ಕಡೆಹಾಯಿಸಬೇಕೆಂದೂ ಪ್ರಾರ್ಥಿಸಿದ್ದಾನೆ. ಭಗವಂತನ ಪ್ರೇರಣೆಯಿಂದಲೇ ನಾವು ಸತ್ಕರ್ಮಗಳನ್ನು ಮಾಡುವದು ಸಾಧ್ಯ. ಆದರೆ ಮೊದಲು ನಾವು ಅವುಗಳನ್ನು ಸಂಕಲ್ಪಿಸಬೇಕು. ಅನಂತರ ಅಂಥ ಯಜ್ಞವನ್ನು ದೇವರು ನಡೆಯಿಸಿಕೊಡುತ್ತಾನೆ. ಇಂದ್ರರೂಪದಿಂದಲೂ ವಿಷ್ಣುರೂಪದಿಂದಲೂ ಭಗವಂತನೊಬ್ಬನೇ ಇದ್ದುಕೊಂಡು ಆಯಾ ಮಂತ್ರಗಳಿಂದ ಸ್ತೋತ್ರಮಾಡಲ್ಪಟ್ಟವನಾಗಿ ಯಜ್ಞವನ್ನು ಪೂರ್ಣಗೊಳಿಸುತ್ತಾನೆ. ಯಜಮಾನನಿಗೆ ಐಹಿಕಾಮುಷ್ಮಿಕಫಲಗಳನ್ನು ದಯಪಾಲಿಸುತ್ತಾನೆ- ಎಂದು ಅಭಿಪ್ರಾಯ.

**ಯಾ ವಿಶ್ವಾಸಾಂ ಜನಿತಾರಾ ಮತೀನಾಂ ಇಂದ್ರಾವಿಷ್ಣೂ ಕಲಶಾ ಸೋಮಧಾನಾ । ಪ್ರ ವಾಂ ಗಿರಃ ಶಸ್ಯಮಾನಾ ಅವಂತು ಪ್ರಸ್ತೋಮಾಸೋ ಗೀಯಮಾನಾಸೋ ಅರ್ಕೈಃ ॥ ೨೫ ॥**

"ಯಾವ ಆ ಪ್ರಸಿದ್ಧರಾದ ಇಂದ್ರಾವಿಷ್ಣುಗಳು ಸ್ತೋತ್ರಗಳ ಜನ್ಮದಾತೃಗಳಾಗಿದ್ದುಕೊಂಡು ಸೋಮ (ರಸ)ಕ್ಕೆ ಆಧಾರವಾಗಿ ಕಲಶದಂತೆ ಇರುವರು. ಎಲೈ ಇಂದ್ರಾವಿಷ್ಣುಗಳೆ, ನೀವುಗಳು ಸ್ತೋತ್ರಮಾಡಲ್ಪಟ್ಟವರೂ ಗಾನಮಾಡಲ್ಪಟ್ಟವರೂ ಆಗಿ ನಮ್ಮ ಪ್ರಾರ್ಥನೆಗಳನ್ನು ಸ್ವೀಕರಿಸಿರಿ" ಎಂದು ಈ ಮಂತ್ರದ ಸರಳವಾದ ಅಭಿಪ್ರಾಯ.

ಸ್ತೋತ್ರಗಳಿಗೆ ಮೂಲಭೂತರಾದವರೇ ದೇವತೆಗಳು. ಹೇಗೆಂದರೆ ದೇವತೆಗಳಾಗಲಿ ಅವರ ಗುಣವಿಶೇಷಗಳಾಗಲೀ ಬಲಶಕ್ತಿವೀರ್ಯಪರಾಕ್ರಮಗಳಾಗಲಿ- ಭಗವಂತನಿಂದ ಆವಿರ್ಭಾವವಾಗದೆ ಇದ್ದಲ್ಲಿ ಯಾರನ್ನು ಕುರಿತು ಏನೆಂದು ಸ್ತೋತ್ರಮಾಡುವದಕ್ಕಾದೀತು ? ಉದಾಹರಣೆಗೆ : ಶ್ರೀ ತ್ಯಾಗರಾಜರು ಸುಪ್ರಸಿದ್ಧವಾಗ್ಗೇಯಕಾರರೂ ಸಂಗೀತಕಲೆಯ ಉಪಾಸಕರೂ ಆಗಿದ್ದರು. ಹಾಗೆಯೇ ಅವರು ಹಾಡಿರುವ ಕೀರ್ತನೆಗಳಲ್ಲಿ ಶ್ರೀರಾಮನೆಂಬ ಹೆಸರಿನ ದೇವತೆಯೂ ಆತನ ಗುಣಕರ್ಮಲೀಲಗಳೂ ತುಂಬಿರುತ್ತವೆ. ಒಂದು ವೇಳೆ

ಶ್ರೀರಾಮನ ಅವತಾರವಾಗಲಿ, ಅವನ ಚರಿತ್ರೆಯಾಗಲೀ ಜಗತ್ತಿನಲ್ಲಿ ನಡೆಯದೆ ಹೋಗಿದ್ದರೆ ತ್ಯಾಗರಾಜರು ಹೇಗೆ ತಾನೆ ಪ್ರಸಿದ್ಧರಾಗುತ್ತಿದ್ದರು ? ಆದ್ದರಿಂದ ತ್ಯಾಗರಾಜರ ರಾಮಕೀರ್ತನೆಗಳಿಗೆ ಹೇಗೆ ಶ್ರೀರಾಮಾವತಾರವೇ ಮೂಲವೋ ಹಾಗೆ ವೇದೋಕ್ತವಾದ ದಿವ್ಯಸೂಕ್ತಗಳಿಗೆಲ್ಲ ಭಗವಂತನ ವಿಭೂತಿರೂಪರಾದ ದೇವತೆಗಳೇ ಮೂಲವು. ಈ ದೇವತೆಗಳಲ್ಲಿ ಅಗ್ರಗಣ್ಯರಾದ ಇಂದ್ರವಿಷ್ಣುಗಳನ್ನು ಇಲ್ಲಿ ಸ್ತೋತ್ರಗಳ ಜನಯಿತೃಗಳೆಂದು ಹೊಗಳಿದೆ. ಅವರುಗಳ ಗುಣಗಾನವೇ ಮಂತ್ರರೂಪವಾದ ಸ್ತುತಿಗಳಾಗಿವೆ. ಮತ್ತು ಈ ದೇವತೆಗಳಿಬ್ಬರೂ ಯಜ್ಞದ ಪ್ರಧಾನವಸ್ತುವಾದ ಸೋಮಕ್ಕೆ ಕಲಶದಂತಿರುವರು. ಹೇಗೆ ಚೆಂಬಿನಲ್ಲಿ ಹಾಲು, ಪಾನಕ ಮುಂತಾದವುಗಳನ್ನು ತುಂಬಿಡುವರೋ ಹಾಗೆ ಸೋಮರಸವು ಇಂದ್ರವಿಷ್ಣುಗಳನ್ನೇ ಆಧಾರವಾಗಿ ಹೊಂದಿರುವದು. ಸೋಮರಸವು ತುಂಬಿದ ಕಲಶಗಳೂ ಇಂದ್ರವಿಷ್ಣುಗಳ ಪ್ರತೀಕವಾಗಿರುವವೆಂದರ್ಥ. ಹೀಗೆ ಯಜ್ಞಪದಾರ್ಥಗಳನ್ನು ಪ್ರತಿನಿಧಿಸುವ ದೇವತೆಗಳಾದ ಇಂದ್ರವಿಷ್ಣುಗಳು ಋತ್ವಿಜರಿಂದ ಸ್ತುತಿಸಲ್ಪಡುತ್ತಾ ಯಜ್ಞವನ್ನು ನಿರ್ವಹಿಸುವರು. ಇಲ್ಲಿ ಅರ್ಕೈಃ ಎಂದರೆ ಸ್ತೋತ್ರ ಮಾಡುವವರಿಂದ- ಎಂದು ಭಾಷ್ಯಕಾರರು ಅರ್ಥಮಾಡಿರುತ್ತಾರೆ. ಯಜ್ಞದಲ್ಲಿ ಪ್ರಸ್ತೋತೃಗಳೆನಿಸಿದ ಋತ್ವಿಜರೇ ಮುಂದಾಳುಗಳು. ಅವರುಗಳು ಗಾನಮಾಡಿದ ಅನಂತರವೇ ದೇವತೆಗಳು ಆಗಮಿಸುವರು. ಅನಂತರ ಅಧ್ವರ್ಯುವು ಹವಿಸ್ಸನ್ನು ಅರ್ಪಿಸುವನು. ಯಾವದೇ ಕಾರ್ಯವನ್ನು ಮಾಡಲಿ, ಆಹ್ವಾನವನ್ನು ಕೊಡುವದು ಬಹು ಮುಖ್ಯಕೆಲಸವು. ಯಾರನ್ನು ಹೇಗೆ ಕರೆಯಬೇಕೆಂಬುದೂ ಜಾಣತನದ ಕೆಲಸವೇ ಸರಿ. ಆದ್ದರಿಂದ ಋಕ್ಕುಗಳ ಮೂಲಕ ಪ್ರಸ್ತೋತೃಗಳು ಗಾನಮಾಡುವವರಾಗಿ ಇಂದ್ರವಿಷ್ಣುಗಳನ್ನು ಆಹ್ವಾನಿಸುವರು. ಇಂಥ ನೀವು ನಮ್ಮ ಪ್ರಾರ್ಥನೆಗಳನ್ನು ಸ್ವಿಕರಿಸಿರಿ- ಎಂದು ಇಲ್ಲಿ ಕೇಳಿಕೊಂಡಿದೆ.

**ಇಂದ್ರಾವಿಷ್ಣೂ ಮದಪತೀ ಮದಾನಾಮಾಸೋಮಂ ಯಾತಂ ದ್ರವಿಣೋ ದಧಾನಾ । ಸಂ ವಾಮಂಜಂತ್ವಕ್ತುಭಿರ್ಮತೀನಾಂ ಸಂಸ್ತೋಮಾಸಃ ಶಕ್ಯಮಾನಾ ಸ ಉಕ್ಥೈಃ ॥ ೨೬ ॥**

''ಎಲೈ ಇಂದ್ರಾವಿಷ್ಣುಗಳೆ, ನೀವು ಸೋಮಕ್ಕೆ ಒಡೆಯರು. ಆದ್ದರಿಂದಲೇ ಧನವನ್ನು ನಮಗೆ ಉಂಟುಮಾಡಿರಿ. ನೀವು ಸೋಮವನ್ನು ಕುರಿತು

ಸ್ತೋತ್ರಮಾಡುವವರಿಗೆ ತೇಜಸ್ಸುಗಳಿಂದ ಅನುಗ್ರಹಮಾಡಿರಿ. ಅಂಥವರನ್ನು ಚೆನ್ನಾಗಿ ಅಭಿವೃದ್ಧಿಗೊಳಿಸಿರಿ'' ಎಂದು ಈ ಮಂತ್ರದ ಸರಳವಾದ ಅಭಿಪ್ರಾಯ.

ಇಲ್ಲಿ ಸೋಮವನ್ನು ಮದವನ್ನುಂಟುಮಾಡುವ ದ್ರವ್ಯವೆಂದೂ ಇಂದ್ರಾವಿಷ್ಣುಗಳನ್ನು ಮದಪತಿಗಳೆಂದೂ ಹೊಗಳಿದೆ. ಮದವೆಂದರೆ ಉತ್ಸಾಹ ವೆಂದರ್ಥ. ಕಾಮರಾಗಗಳಿಂದಾದ ಆಸುರೀಸಂಪತ್ತಿನ ಮದವಲ್ಲ, ದೇವತೆಗಳು ಬಲಿಷ್ಠರಾಗುವದು ಬಹಳ ಅಗತ್ಯವು. ಏಕೆಂದರೆ ಅವರೇ ಲೋಕರಕ್ಷಕರು. ಯಾರು ಸೋಮಯಾಗದಿಂದ ದೇವತೆಗಳನ್ನು ಬಲಗೊಳಿಸುವರೋ ಅಂಥವರು ಜಗತ್ತಿನಲ್ಲಿ ಹೆಚ್ಚಿದಂತೆಲ್ಲ ಲೋಕಕ್ಷೇಮವಾಗಲಿದೆ. ಒಟ್ಟಿನಲ್ಲಿ ದೇವತೆಗಳ ಅಭಿವೃದ್ಧಿಗಾಗಿ ಯಜ್ಞವನ್ನು ಮಾಡಬೇಕೆಂದಾಯಿತು. ಯಾರು ಯಜ್ಞದಲ್ಲಿ ಸೋಮವನ್ನು ದೇವತೆಗಳಿಗೆ ಸಮರ್ಪಿಸುವರೋ ಅಂಥವರನ್ನು ದೇವತೆಗಳೂ ಅನುಗ್ರಹಿಸಿ ಬೆಳೆಸುವರು. ಹೀಗೆ ದೇವತೆಗಳಿಗೂ ಮಾನವರಿಗೂ ಯಜ್ಞದ ಮೂಲಕ ಸಂಬಂಧವಿರುವದು. ದೇವತೆಗಳ ಪ್ರಸಾದರೂಪವಾದ ತೇಜಸ್ಸು ಸಹ ಯಜ್ಞಕರ್ತೃ ಗಳಿಗೆ ಲಭಿಸುತ್ತದೆ. ಯಜ್ಞವು ಸದಾಕಾಲವೂ ನಡೆದುಕೊಂಡೇ ಇರಬೇಕು- ಎಂದರೆ ಪ್ರತಿವರ್ಷದಲ್ಲಿಯೂ ಆಯಾಕಾಲದಲ್ಲಿ ತಪ್ಪದೆ ನಡೆಯಬೇಕು. ನಾವು ದೇವತೆಗಳನ್ನು ಆರಾಧಿಸದೆ ತಿರಸ್ಕಾರಮಾಡಿದ್ದೇ ಆದರೆ ರಾಷ್ಟ್ರದಲ್ಲಿ ಮಳೆಬೆಳೆಗಳು ಸೊನ್ನೆಯಾಗಿ ಸಂಕಟಪರಂಪರೆಗಳು ಸುಳಿದಾಡುವವು. ಹಾಗಾಗದಂತೆ ವೈದಿಕ ಯಜ್ಞಗಳನ್ನು ಅನುಷ್ಠಿಸಿ ಲೋಕಕ್ಷೇಮವನ್ನು ಸಾಧಿಸೋಣ.

**ಆವಾಮಶ್ವಾಸೋ ಅಭಿಮಾತಿಷಾಹ ಇಂದ್ರಾವಿಷ್ಣೂ ಸಧಮಾದೋ ವಹಂತು । ಜುಷೇಥಾಂ ವಿಶ್ವಾ ಹವನಾ ಮತೀನಾಮುಪಬ್ರಹ್ಮಾಣಿ ಶೃಣುತಂ ಗಿರೋ ಮೇ ॥ ೨೭ ॥**

''ಎಲೈ ಇಂದ್ರಾ-ವಿಷ್ಣುಗಳೆ, ನೀವು ಲೋಕಹಿಂಸಕರಾದ ದುಷ್ಟರನ್ನು ಹಿಮ್ಮೆಟ್ಟಿಸುವಂಥವರು ; ಮತ್ತು ಉತ್ಸಾಹಶಾಲಿಗಳು ; ಆದ್ದರಿಂದ ಸ್ತೋತ್ರ ಮಾಡುವವರ ಬುದ್ಧಿಗಳನ್ನು ಪ್ರೇರೇಪಿಸಿ ಪ್ರವೇಶಿಸಿರಿ. ಅದಕ್ಕಾಗಿ ನನ್ನ ಈ ಸ್ತೋತ್ರರೂಪವಾದ ವಾಕ್ಕುಗಳನ್ನು ಕೇಳಿರಿ'' ಎಂದು ಈ ಮಂತ್ರದ ಅಭಿಪ್ರಾಯವು.

ಒಬ್ಬ ಋಷಿಯು ಇಂದ್ರಾವಿಷ್ಣುಗಳನ್ನು ಕುರಿತು ನೀವುಗಳು ನನ್ನ ಸ್ತೋತ್ರಗಳನ್ನು ಕೇಳಿರಿ- ಎಂದು ಕರೆಯುತ್ತಿದ್ದಾನೆ. ಮಂತ್ರಾಧೀನರಾದ

ದೇವತೆಗಳು ಖಂಡಿತವಾಗಿಯೂ ವೈದಿಕಸ್ತುತಿಗಳಿಗೆ ಒಲಿಯುತ್ತಾರೆ. ಆದರೆ ಇಂಥ ಸ್ತೋತ್ರಗಳನ್ನು ನಾವು ತಿಳಿದವರಾಗಿರಬೇಕು. ದೇವಾಲಯಗಳಲ್ಲಿ ಆಗಾಗ್ಗೆ 'ಅಷ್ಟಾವಧಾನ ಸೇವೆ' ಎಂಬ ಉಪಚಾರವನ್ನು ಮಾಡುವದುಂಟು. ಆಗ್ಗೆ ವೈದಿಕರು ವೇದಮಂತ್ರಗಳನ್ನೂ ಪುರಾಣ, ಇತಿಹಾಸ- ಶಾಸ್ತ್ರಗಳನ್ನೂ ಪಠಿಸುತ್ತಾರೆ. 'ಅವಧಾರಯ' (ದಯಮಾಡಿ ಕೇಳಬೇಕು) ಎಂದು ಮೊದಲೇ ದೇವರನ್ನು ಬೇಡಿಕೊಳ್ಳುತ್ತಾರೆ. ಅನಂತರ ಒಂದೊಂದಾಗಿ ವೇದಾದಿಗಳನ್ನು ದೇವರ ಮುಂದೆ ಒಪ್ಪಿಸುತ್ತಾರೆ. ಇದು ಭಕ್ತಿಯಿಂದ ಆಚರಿಸಲ್ಪಟ್ಟಲ್ಲಿ ಇದಕ್ಕಿಂತ ಹೆಚ್ಚಿನ ಪೂಜೆಯು ಯಾವದೂ ಇರಲಾರದು. ಆದರೆ ಇದೇ ಸಮಯದಲ್ಲಿ ಸೇರಿರುವ ಜನರು ಗಲಾಟೆ ಮಾಡುತ್ತಾ ಹರಟೆಹೊಡೆಯುತ್ತಿರುತ್ತಾರೆ. ದೇವರಿಗೆ ವೈದಿಕೋಪಚಾರಗಳು ನಡೆಯುತ್ತಿದ್ದರೆ ಇಂಥ ಪ್ರಾಕೃತರು ಅಪಚಾರ ಮಾಡುತ್ತಿರುತ್ತಾರೆ. ಇಂಥವರು ದೇವಾಲಯಗಳಿಗೆ ಏಕೆ ಬರಬೇಕು ? ಎಂದು ಪ್ರಶ್ನಿಸುವಂತಾಗಿದೆ. ಕೆಲವು ವೇಳೆ ಹೆಂಗಸರುಗಳು ಜೊತೆಗೆ ಚಿಕ್ಕಮಕ್ಕಳನ್ನೂ ಕರೆತಂದು ಗೊಂದಲಮಾಡಿಸುತ್ತಾರೆ. ಇಂಥ ತಪ್ಪನ್ನು ತಾವು ಮಾಡುತ್ತಿದ್ದೇವೆಂಬ ಅರಿವೂ ಅವರಿಗಿರುವದಿಲ್ಲ. ಹಿಂದೂ ದೇವಾಲಯಗಳಲ್ಲಿ ಇಂಥ ದೋಷಗಳು ಮೊದಲು ನಿವಾರಣೆಯಾಗಬೇಕು. ಪ್ರಸಾದದ ಆಸೆಗೆ ಬರುವವರಿದ್ದರೆ ಜನಗಳು ಸೇರುವ ಮೊದಲೇ ಉಪಚಾರಗಳನ್ನು ಅರ್ಚಕರು ಪೂರೈಸಿಬಿಡಬೇಕು. ಇರಲಿ ; ಋಷಿಮುನಿಗಳು ತಮ್ಮ ತಪಃ ಪ್ರಭಾವದಿಂದ ಕಂಡುಕೊಂಡಂಥ ಅತಿಪವಿತ್ರವಾದ ವೇದಗಳ ಮಂತ್ರಗಳನ್ನು ನಾವು ಕಿವಿಯಿಂದ ಕೇಳಿಯಾದರೂ ಉದ್ಧಾರವಾಗಬೇಕು. ಇಲ್ಲಿ ಋಷಿಯು ಇಂದ್ರವಿಷ್ಣುಗಳ ಮಹಿಮೆಯನ್ನು ಹೊಗಳುತ್ತಾ ಅವರು ದುಷ್ಟನಿಗ್ರಹ ಸಮರ್ಥರೆಂದು ಪ್ರಸ್ತಾಪಿಸಿದ್ದಾನೆ. ದೇವತೆಗಳಲ್ಲಿ ವಿಷ್ಣುವೇ ಪರಮನಾಗಿದ್ದು ಅಸುರರ ದರ್ಪವನ್ನು ತನ್ನ ಅಪರಿಮಿತವಾದ ಶಕ್ತಿಯಿಂದ ನಾಶಗೊಳಿಸುತ್ತಾನೆ. ಸಮಯಾನುಸಾರ ಅವತಾರಗಳನ್ನು ಕೈಗೊಂಡು ರಾಕ್ಷಸವಧೆಗಳನ್ನು ಮಾಡುತ್ತಾನೆಂಬುದು ಪುರಾಣಪ್ರಸಿದ್ಧವಿಷಯವಾಗಿದೆ. ಈತನ ಉತ್ಸಾಹವು ಅಮಿತವಾದುದು. ವಿಷ್ಣುಸಹಸ್ರನಾಮಸ್ತೋತ್ರದಲ್ಲಿ ''ಮಹೋತ್ಸಾಹೋ ಮಹಾಬಲಃ'' ಎಂದೇ ಭೀಷ್ಮಾಚಾರ್ಯರು ಸ್ತುತಿಸಿದ್ದಾರೆ. ಋಷಿಯ ಹೇಳಿಕೆಯಂತೆ ಸ್ತೋತ್ರಮಾಡುವವನು ಆ ಭಗವಂತನಿಂದ ಪ್ರೇರಿತನಾಗಿಯೇ ಮಾಡಬೇಕಾಗಿದೆ ಯಾದ್ದರಿಂದ ಅಂಥವನ ಬುದ್ಧಿಯನ್ನು ಪ್ರವೇಶಿಸಿ ವಾಕ್ಕನ್ನು ವ್ಯಾಪಾರಗೊಳಿಸ ಬೇಕೆಂದು ವಿಷ್ಣುವನ್ನೇ ಬೇಡಿಕೊಂಡಿದೆ. ''ಸ್ತೋತಾ'' (ಸ್ತೋತ್ರ ಮಾಡುವವನು)

''ಸ್ತೋತ್ರಮ್ (ಸ್ತೋತ್ರವು). ''ಸ್ತವ್ಯಃ''(ಸ್ತುತಿಸಲ್ಪಡುವವನು) ಎಲ್ಲರೂ ವಿಷ್ಣುವಿನ ವಿಭೂತಿರೂಪರೇ ಎಂಬುದನ್ನು ಆಯಾ ನಾಮುಗಳಿಂದಲೇ ಅಲ್ಲಿ ಉದ್ಘೋಷಿಸಲಾಗಿದೆ. ಆದ್ದರಿಂದ ಪ್ರತಿದಿನವೂ ತಪ್ಪದೇ ದೇವರ ಮುಂದೆ ನಿಂತು-ದೇವರು ನಮ್ಮ ಸ್ತೋತ್ರಗಳನ್ನು ಕೇಳುತ್ತಾ ಎದುರಿಗೇ ಇದ್ದಾನೆಂದು ಭಾವಿಸಿ-ಭಗವಂತನ ಸ್ತುತಿರೂಪವಾದ ವೇದಗಳನ್ನು ಪಠನಮಾಡಬೇಕು. ಇಂಥ ಸ್ತುತಿಗಳೇ 'ಸೂಕ್ತ'ಗಳೆಂಬ ಹೆಸರಿನಿಂದ ವೇದಗಳಲ್ಲಿ ಪ್ರಸಿದ್ಧವಾಗಿದೆ. ವೇದಾಧಿಕಾರವಿದ್ದೂ ವೇದಗಳನ್ನು ಕಲಿಯದವರು ನಿಜವಾಗಿಯೂ ದುರದೃಷ್ಟಶಾಲಿಗಳೇ ಸರಿ ; ಅಧ್ಯಾತ್ಮನಿಷ್ಠರ ದೃಷ್ಟಿಯಲ್ಲಿ ಅಂಥವರೇ ದರಿದ್ರರೂ ಕೃಪಣರೂ ಆಗಿರುವರು. ಕೆಲವಾದರೂ ಸೂಕ್ತಗಳ ಪಠನದಿಂದ ವೇದಾಧಿಕಾರವುಳ್ಳ ವರು ತಮ್ಮ ಜನ್ಮಸಾರ್ಥಕ್ಯವನ್ನು ಈಗಲಾದರೂ ಮಾಡಿಕೊಳ್ಳಬೇಕು. ಉಳಿದವರೆಲ್ಲ ವೇದಗಳನ್ನು ಕಿವಿ ತುಂಬ ಕೇಳಿ ಅರ್ಥಾನುಸಂಧಾನವನ್ನು ಅರಿತು ಮಾಡಬೇಕು. ಕೆಲವು ವೇಳೆ ಹೇಳುವದಕ್ಕಿಂತಲೂ ಕೇಳುವದರಲ್ಲೇ ಹೆಚ್ಚು ಆನಂದವಿರುವದು. ಸಂಗೀತವನ್ನು ಇಲ್ಲಿ ಉದಾಹರಣೆಯಾಗಿ ಕೊಡಬಹುದು. ಹೇಳುವವನಿಗೆ ಎಲ್ಲಿ ತಪ್ಪಿಯೇನೊ, ಎಂಬ ಭಯವೂ ತನ್ನ ಗಾನವು ಚೆನ್ನಾಗಿತ್ತೆಂದು ಜನರಿಂದ ಹೊಗಳಿಸಿಕೊಳ್ಳುವ ಕೀರ್ತಿಕಾಮನೆಯೂ ಬೆನ್ನುಹತ್ತಿರುವವು. ಕೇಳುವವನಿಗಾದರೊ, ಇಂಥ ದೋಷಗಳ ಕಾಟವಿರುವದಿಲ್ಲ. ಆದ್ದರಿಂದಲೇ ಒಂದು ವೈದಿಕಪ್ರಾರ್ಥನೆಯಲ್ಲಿ 'ಎಲೈ ದೇವತೆಗಳಿರಾ, ಕಿವಿಗಳಿಂದ ಮಂಗಳಕರವಾದದ್ದನ್ನು ಕೇಳೋಣ' ಎಂದೇ ಬೇಡಿಕೊಳ್ಳಲಾಗಿದೆ. ನಾವು ಸ್ತೋತ್ರಗಳನ್ನೂ ವೇದಾಂತವಿಚಾರಗಳನ್ನೂ ಚೆನ್ನಾಗಿ ಆಲೈಸಿ ಕೇಳುವವರಾಗುವಂಥ ಭಾಗ್ಯವನ್ನು ದಯಪಾಲಿಸುವಂತೆ ಇಂದ್ರವಿಷ್ಣುಗಳನ್ನೇ ಬೇಡಿಕೊಳ್ಳೋಣ. ಏಕೆಂದರೆ ದೇವರೇ ಶ್ರೋತೃವಾಗಿ ಭಕ್ತನ ಗಾನದಲ್ಲಿ ಭಾಗವಹಿಸುತ್ತಾನೆ. ಸಮಸ್ತಧರ್ಮಗಳ ಪೂರ್ಣಜ್ಞಾನಿಯಾಗಿದ್ದ ಕೃಷ್ಣಭಗವಂತನು ಯುಧಿಷ್ಠಿರನೊಡಗೂಡಿ ಮೂವತ್ತು ದಿನಗಳ ಕಾಲ ಅವಿಚ್ಛಿನ್ನವಾಗಿ ಭೀಷ್ಮರಿಂದ ಧರ್ಮೋಪದೇಶಗಳನ್ನು ಕೇಳಿದನೆಂದು ವೇದವ್ಯಾಸರು ಬರೆದಿರುವದನ್ನು ಇಲ್ಲಿ ನೆನಪುಮಾಡಿಕೊಳ್ಳಿರಿ. ಆಗ್ಗ ಶ್ರವಣದ ಮಹತ್ತ್ವವೇನೆಂಬುದು ಗೊತ್ತಾಗುವದು.

**ಇಂದ್ರಾವಿಷ್ಣೂ ತತ್ಪನಯಾಯ್ಯಂ ವಾಂ ಸೋಮಸ್ಯ ಮದ ಉರು ಚಕ್ರಮಾಥೇ । ಅಕೃಣುತಮಂತರಿಕ್ಷಂ ವರೀಯೋಽಪ್ರಥತಂ ಜೀವಸೇ ನೋ ರಜಾಂಸಿ ॥ ೨೮ ॥**

'ಎಲೈ, ಇಂದ್ರಾವಿಷ್ಣುಗಳೆ, ನೀವು ಸೋಮಯಾಗಕಾಲಕ್ಕೆ ಪಾದಗಳನ್ನು ಬೆಳೆಯಿಸಿದರಷ್ಟೆ, ಅದು ಪನಯಾಯ್ಯಂ- ಹೊಗಳಲು ಯೋಗ್ಯವಾಗಿದೆ. ಹಾಗೆಯೇ ಅಂತರಿಕ್ಷಲೋಕವನ್ನು ಪೂಜ್ಯವಾಗಿ ಮಾಡಿ ರಜಾಂಸಿ- ಉಳಿದ ಲೋಕಗಳನ್ನು ವಿಸ್ತರಿಸಿದ್ದೀರಿ. ಇದು ನಮ್ಮೆಲ್ಲರ ಬದುಕಿಗೆ ಕಾರಣವಾಗಿದೆ'- ಎಂದು ಈ ಮಂತ್ರದ ಅರ್ಥ.

ಈ ಮಂತ್ರದಲ್ಲಿ ವಿಷ್ಣುವು ಕೈಗೊಂಡ ಮಹತ್ಕಾರ್ಯಗಳನ್ನು ಇಂದ್ರನೂ ಮಾಡಿದನೆಂದು ಸೇರಿಸಿ ಸ್ತೋತ್ರಮಾಡಿದೆ. ಹೇಗೆ ರಾವಣವಧೆಯನ್ನು ಮಾಡಿದವನು ಶ್ರೀರಾಮನೇ ಆದರೂ ಲಕ್ಷ್ಮಣನೂ ಸಹಾಯಕನಾಗಿದ್ದನೋ ಹಾಗೆ ತ್ರಿವಿಕ್ರಮನಾಗಿ ವಿಷ್ಣುವು ಮೂರು ಲೋಕಗಳನ್ನೂ ಆಳೆದಾಗ ಇಂದ್ರನೂ ಸಹಾಯಕನಾಗಿದ್ದನು. ಆದ್ದರಿಂದ ಜೋಡಿಯಲ್ಲಿ ಸ್ತುತಿಮಾಡಲಾಗಿದೆ. ಸೋಮ ಯಜ್ಞವನ್ನು ಬಲಿರಾಜನು ಕೈಗೊಂಡಾಗ- ಎಂದು ಸಂದರ್ಭಾನುಸಾರವಾಗಿ ಸೇರಿಸಿಕೊಳ್ಳಬಹುದು. ಪಾದಕ್ರಮಣವೆಂಬ ಮಹಾಕಾರ್ಯವು ಬಹಳ ಸ್ತುತ್ಯವು- ಎಂದಭಿಪ್ರಾಯ. ಸಾಮಾನ್ಯವಾಗಿ ಪುರೋಭಿವೃದ್ಧಿಯ ಕೆಲಸಗಳನ್ನೆಲ್ಲ ಈಗಿನ ಕಾಲದಲ್ಲಿಯೂ ಹೆಜ್ಜೆಯಿಡುವಿಕೆಯೆಂದೇ ಹೊಗಳುತ್ತಾರೆ. ಅನೇಕ ಜಾಹಿರಾತು ಗಳಲ್ಲಿ- ಉದಾಹರಣೆಗೆ ಇಂಥ- ಬ್ಯಾಂಕು ಇಷ್ಟು ಶಾಖೆಗಳನ್ನು ತೆರೆದು ಮತ್ತೊಂದು ರಾಜ್ಯಕ್ಕೂ ಹೆಜ್ಜೆಯಿಡುತ್ತಿದೆ- ಎಂಬುದಾಗಿ ಪ್ರಕಟಿಸುವದು ರೂಢಿಯಾಗಿದೆ. ಈ ಪಾದಾಕ್ರಮಣದ ವ್ಯವಹಾರವೂ ಪ್ರಪ್ರಥಮವಾಗಿ ತ್ರಿವಿಕ್ರಮನಿಂದಲೇ ಆರಂಭ ವಾಯಿತು. ಇಂಥ ಮಹಾಕಾರ್ಯವನ್ನು ಮೊದಲು ಕೈಗೊಂಡ ಆದಿಪುರುಷನ ಸಾಧನೆಯನ್ನು ಹೊಗಳಬೇಡವೆ ? ಒಬ್ಬ ಋಷಿಯು ಈಗ ಆ ಕೆಲಸವನ್ನು ಕೈಗೊಂಡಿರುತ್ತಾನೆ. 'ಎಲೈ ಇಂದ್ರಾವಿಷ್ಣುಗಳಿರಾ, ನೀವು ಹಿಗ್ಗಿಸಿದ ಪಾದಗಳು ಲೋಕಗಳನ್ನೂ ಹಿಗ್ಗಿಸಿದವು, ಹಾಗೂ ಪವಿತ್ರಗೊಳಿಸಿದವು'' ಹೀಗೆಂಬುದು ಆತನ ಸ್ತುತಿಯು. ಸೃಷ್ಟಿಕಾಲಕ್ಕೆ ಲೋಕಗಳು ಸಂಕುಚಿತವಾಗಿಯೇ ಇದ್ದುಕೊಂಡಿರ ಬಹುದು. ಆದರೆ ಸ್ಥಿತಿಕಾರಕನಾದ ಮಹಾವಿಷ್ಣುವು ಹಿಂದಿನ ಎಲ್ಲಾ ಸೃಷ್ಟಿಸ್ಥಿತಿ ಗಳನ್ನೂ ಬಲ್ಲವನಾಗಿದ್ದುದರಿಂದ ಈ ಸೃಷ್ಟಿಯಲ್ಲಿಯೂ ಸ್ಥಾವರಜಂಗಮಾದಿ ಸಮಸ್ತಪ್ರಾಣಿಗಳಿಗೂ ತಕ್ಕಷ್ಟು ವಾಸಯೋಗ್ಯವಾಗುವಂತೆ ಅಂತರಿಕ್ಷ, ಪೃಥಿವೀದ್ಯುಲೋಕಗಳನ್ನು ತನ್ನ ಹೆಜ್ಜೆಗಳನ್ನು ಪಸರಿಸಿ ಹಿರಿದುಮಾಡಿದನು. ಹೀಗೆ ವಿಸ್ತರಿಸುವ ಕೆಲಸವು ಎಂಥವನಿಗಾದರೂ ಕೀರ್ತಿಯನ್ನು ತಂದುಕೊಂಡುವದು.

ಈಗಲೂ ಸಂಸ್ಥಾಪಕನಿಗಿಂತ ಹೆಚ್ಚಾಗಿ ಮುಂದುವರೆಸಿ ಸಂಸ್ಥೆಗಳನ್ನೂ ಕಾರ್ಯಾಗಾರಗಳನ್ನೂ ವೃದ್ಧಿಮಾಡಿ ಬಲಗೊಳಿಸಿದವನನ್ನು ಎಲ್ಲರೂ ಹೊಗಳುತ್ತಾರಷ್ಟೆ ? ಹಾಗೆಯೇ ತ್ರಿಲೋಕಗಳನ್ನೂ ಪ್ರಾಣಿಗಳ ಉಪಕಾರಕ್ಕಾಗಿ ಬೆಳೆಯಿಸಿದ ಮಹಾವಿಷ್ಣುವನ್ನು ಹೊಗಳುವದರಲ್ಲಿ ಆಶ್ಚರ್ಯವೇನಿದೆ ?

ಈಗ ಋಷಿಯು ಮುಂದುವರೆದು ತ್ರಿವಿಕ್ರಮರೂಪದಿಂದ ಮಾಡಿದ ಕಾರ್ಯಗಳ ನೆಪದಿಂದ ಮತ್ತೆ ಭಗವಂತನನ್ನು ಸ್ತುತಿಸುತ್ತಿದ್ದಾನೆ. ಹೇಗೆಂದರೆ : ಈ ಲೋಕಗಳ ಜೀವನಕ್ಕಾಗಿಯೇ ಇಂಥ ಅದ್ಭುತಕಾರ್ಯವು ಮಾಡಲ್ಪಟ್ಟಿತು- ಎಂದು ಅವನ ಅಭಿಪ್ರಾಯವಾಗಿದೆ. ಅಂತರಿಕ್ಷಲೋಕವನ್ನು ಭಗವಂತನು ಹಿಗ್ಗಿಸಿದ್ದರಿಂದ ವಾಯುಸಂಚಾರಕ್ಕೂ ಮಳೆಬೆಳಕುಗಳ ಪ್ರಸಾರಕ್ಕೂ ಸೌರವ್ಯೂಹಾದಿಗಳ ಸ್ಥಾಪನೆಗೂ ಸೌಕರ್ಯವಾಯಿತು. ಆಕಾಶವೇ ಕಿರಿದಾಗಿಬಿಟ್ಟಿದ್ದರೆ ಪ್ರಾಣಿಗಳು ಬದುಕುವದು ಹೇಗೆ ಸಾಧ್ಯವಾಗುತ್ತಿತ್ತು ? ಸ್ಥಳಸಂಕೋಚವು ಎಲ್ಲಾ ರೀತಿ ಯಿಂದಲೂ ದುಃಖಕ್ಕೇ ಕಾರಣವಾಗಿರುವದು. ಪಟ್ಟಣವಾಸಗಳಲ್ಲಿ ಇದರ ಅನುಭವವು ಕಂಡುಬರುತ್ತದೆ. ಏನಾದರೊಂದು ಸಮಾರಂಭವನ್ನು ನಡೆಸಬೇಕೆಂದರೆ ಪಟ್ಟಣದ ನಾಗರಿಕರು ಮನೆಯನ್ನು ಬಿಟ್ಟು ಛತ್ರಗಳಂಥ ವಿಶಾಲಸ್ಥಳಗಳಿಗೇ ಹೋಗಬೇಕು. ಆದರೆ ಯಾವ ಬೆಟ್ಟ, ನದಿ, ಪರ್ವತ, ಪ್ರಾಣಿವರ್ಗಗಳಿಗೂ ಸಂಕುಚಿತವಾಗದಂತೆ ಭೂಲೋಕ ಅಂತರಿಕ್ಷಗಳನ್ನು ತನ್ನ ಪಾದಕ್ರಮಣಗಳಿಂದ ಹಿಗ್ಗಿಸಿರುವ ಭಗವಂತನ ಉಪಕಾರವನ್ನು ಏನೆಂದು ನೆನೆಯೋಣ ? ಇಷ್ಟೇ ಅಲ್ಲ. ಅಂತರಿಕ್ಷವನ್ನು ಪೂಜ್ಯವಾಗಿ ಮಾಡಿರುವದೂ ಭಗವಂತನ ಹೆಚ್ಚಿನ ಉಪಕಾರಗಳಲ್ಲಿ ಒಂದಾಗಿದೆ. ಹೇಗೆಂದರೆ : ಈಗಿನ ಕಾಲಕ್ಕೆ ವಿಸ್ತರಿಸುವ ನೆಪದಲ್ಲಿ ಬೇರೆಯವರಿಗೆ ತೊಂದರೆಮಾಡುವದುಂಟು. ಕೆಲವು ವೇಳೆ ಒಬ್ಬರ ಉಪಕಾರಕ್ಕಾಗಿ ಬೇರೊಬ್ಬರನ್ನು ಮುಳುಗಿಸುವದೂ ಉಂಟು. ಉದಾಹರಣೆಗೆ : ದೊಡ್ಡದೊಡ್ಡ ಅಣೆಕಟ್ಟೆಗಳ ನಿರ್ಮಾಣಕ್ಕಾಗಿ ಮುಳುಗಡೆ ಮಾಡುವ ಜಮೀನುಗಳನ್ನು ನೋಡಿರಿ. ಅಲ್ಲಿರುವ ಸಸ್ಯಗಳು, ಪ್ರಾಣಿಗಳು, ಅವುಗಳ ಮಾಲಿಕರು- ಎಲ್ಲರೂ ಆಗ್ಗೆ ನಿರ್ವಸಿತರಾಗುವರು. ಮನುಷ್ಯನು ಮಾಡಬಹುದಾದ ಅನುಕೂಲವೆಂದರೆ ಇಷ್ಟೇ. ಆದರೆ ಭಗವಂತನೇ ಕೈಗೊಂಡ ಪುರೋಭಿವೃದ್ಧಿಯ ಕಾರ್ಯಗಳಲ್ಲಿ ಹೀಗೆ ಹಿಂಸಾದಿಗಳಿರುವದಿಲ್ಲ. ಬಲಿಯನ್ನು ಮೆಟ್ಟಿದರೂ ಅವನಿಗೆ ಪಾತಾಳದಲ್ಲಿ ಭವ್ಯವಾದ ಆಶ್ರಯವನ್ನು ಒದಗಿಸಿದ್ದು

ಭಗವಂತನ ಕರುಣೆಯ ಗುರುತಲ್ಲವೆ ? ನಿಜವೇನೆಂದರೆ :ಪಾತಾಳದಲ್ಲಿ ಮಾತ್ರ ರಾಜ್ಯಭಾರಮಾಡಬೇಕಾಗಿದ್ದ ಆತನು ಪೃಥಿವೀ ಅಂತರಿಕ್ಷಗಳನ್ನು ಗರ್ವದಿಂದ ದುರಾಕ್ರಮಣಮಾಡಿದ್ದನು. ಅವುಗಳನ್ನು ತೆರವು ಮಾಡಿಸುವ ನೆಪದಲ್ಲಿ ಭಗವಂತನು ಲೋಕಗಳನ್ನೂ ಹಿಗ್ಗಿಸಿ ದೇವತಾದಿಸಮಸ್ತಭೂತವರ್ಗಕ್ಕೂ ಆಶ್ರಯಸ್ಥಾನವಾಗಿ ಮಾಡಿಕೊಟ್ಟನು. ಹೀಗೆ ದೇವತೆಗಳ ನಿವಾಸನಿಮಿತ್ತವೂ ಭಗವಂತನ ಪಾದಸ್ಪರ್ಶ ನಿಮಿತ್ತವಾಗಿಯೂ ಅಂತರಿಕ್ಷವೂ ಪೃಥಿವಿಯೂ ಪೂಜ್ಯವಾದವು. ವಿಶೇಷವಾಗಿ ಪೃಥಿವಿಯಲ್ಲಿರುವ ನಮಗೆ ಅಂತರಿಕ್ಷವಾಸಿಗಳಾದ ಸೂರ್ಯ, ಚಂದ್ರ, ವಾಯು, ಪರ್ಜನ್ಯಾದಿದೇವತೆಗಳ ಕೃಪೆಯಿಂದ ಜೀವನವು ಏರ್ಪಾಡಾಯಿತು. ಇಂಥ ಮಹಾವಿಷ್ಣುವನ್ನು ಇಲ್ಲಿ ಸ್ತುತಿಸಿದೆ.

**ಇಂದ್ರಾವಿಷ್ಣೂ ಹವಿಷಾ ವಾವೃಧಾನಾಗ್ರಾದ್ವಾನಾ ನಮಸಾ ರಾತ ಹವ್ಯಾ ।**
**ಘೃತಾಸುತೀ ದ್ರವಿಣಂ ಧತ್ತಮಸ್ಮೇ ಸಮುದ್ರಃ ಸ್ಥಃ ಕಲಶಃ ಸೋಮಧಾನಃ ॥ ೨೯ ॥**

'ಎಲೈ ಇಂದ್ರಾವಿಷ್ಣುಗಳೆ, ನೀವು ತುಪ್ಪವನ್ನೇ ಆಹಾರವಾಗಿ ಉಳ್ಳವರಾಗಿರುವಿರಿ. ನೀವುಗಳು ಹವಿಸ್ಸಿನಿಂದಲೂ ವೃದ್ಧಿಹೊಂದಿದವರಾಗಿ ನಮಸ್ಕಾರಪೂರ್ವಕವಾಗಿ ಯಜಮಾನನು ಅರ್ಪಿಸಿದ ಅಗ್ರಾಹುತಿಗಳನ್ನು ಸ್ವೀಕರಿಸಿ ನಮಗೆಲ್ಲರಿಗೂ ಧನಸಂಪದಾದಿಗಳನ್ನು ದಯಪಾಲಿಸಿರಿ. ಮತ್ತು ನೀವು ಸಮುದ್ರದಂತೆ ಯಾವಾಗಲೂ ಗಂಭೀರರೂ ಪೂರ್ಣರೂ ಆಗಿದ್ದು ಸೋಮವನ್ನಿಡುವ ಕಲಶಗಳ ರೂಪದಿಂದ ಸನ್ನಿಹಿತರಾಗಿರುವಿರಿ' ಎಂದು ಈ ಮಂತ್ರದ ಅರ್ಥವು.

ದೇವತೆಗಳಿಗೆ ತುಪ್ಪವೇ ಆಹಾರವೆಂಬುದು ಸ್ಮೃತಿಪ್ರಸಿದ್ಧವಾಗಿದೆ. ಆದ್ದರಿಂದ ಹೋಮಗಳಿಗೆಲ್ಲ ಪ್ರಧಾನವಾಗಿ ತುಪ್ಪವನ್ನೇ ಬಳಸುವರು. ತುಪ್ಪವನ್ನು ತಿಂದರೆ ಆಯುಷ್ಯಾಭಿವೃದ್ಧಿಯಾಗುವದೆಂದೂ ವೇದದಲ್ಲಿದೆ. ಆಯುಷ್ಯಸೂಕ್ತವನ್ನು ಘೃತಸೂಕ್ತವೆಂದೇ ಕರೆಯುವರು. ಪಂಚಾಮೃತಗಳಲ್ಲಿ ತುಪ್ಪವು ಸೇರಿದ್ದು ದೇವರಿಗೆ ಅಭಿಷೇಕಕಾಲಕ್ಕೆ ಉಪಯೋಗಿಸಲ್ಪಡುತ್ತದೆ. ತುಪ್ಪವನ್ನು ಅಭಿಘಾರಮಾಡದ ದೇವತೆಗಳಿಗೆ ಹವಿಸ್ಸನ್ನು ಕೊಡುವಂತಿಲ್ಲ. ನಾವೂ ತುಪ್ಪವಿಲ್ಲದೆ ಪರಿಷೇಚನಮಾಡಿ ಭೋಜನಮಾಡುವಂತಿಲ್ಲ. ಈಗಲೂ ಈ ಪದ್ಧತಿಯು ಜಾರಿಯಲ್ಲಿದೆ. ಹೀಗೆ ತುಪ್ಪವನ್ನು ಪ್ರಧಾನವಾದ ಆಹಾರವಾಗಿ ಉಳ್ಳ ಇಂದ್ರವಿಷ್ಣುಗಳು ಯಜ್ಞದಲ್ಲಿ ಯಜಮಾನನು ಅರ್ಪಿಸುವ ಹವಿಸ್ಸುಗಳಿಂದ ವೃದ್ಧಿಯನ್ನು ಹೊಂದಲೆಂದು ಕೇಳಿಕೊಳ್ಳಲಾಗಿದೆ. ಇಲ್ಲಿ ವೃದ್ಧಿಶಬ್ದವನ್ನು ಆನಂದದ ವೃದ್ಧಿಯೆಂದು ಹಿಗ್ಗಿಸಿ

ಅರ್ಥಮಾಡಬೇಕು. ಇಂದ್ರವಿಷ್ಣುಗಳಿಗೆ ನಾವು ಕೊಡುವ ಘೃತಪೂರ್ವಕವಾದ ಆಹುತಿಗಳಿಂದ ಬಹಳ ಸಂತೋಷವಾಗುವದು. ಹಾಗೂ ನಮಸ್ಕಾರಪೂರ್ವಕವಾಗಿ ಅರ್ಪಿಸುವದರಿಂದಲಂತೂ ಅವರಿಗೆ ಇನ್ನೂ ಹೆಚ್ಚಿನ ಆನಂದವಾದೀತು. ಜಗತ್ತಿನ ಸ್ಥಿತಿಕರ್ತರಾದ ಈ ದೇವತೆಗಳಿಗೆ ಹೀಗೆ ಹವಿರರ್ಪಣೆಮಾಡುವದು ಪುಣ್ಯವಿಶೇಷದಿಂದಲೇ ದೊರಕಬೇಕಾಗಿದೆ. ಕೆಲವು ನಾಸ್ತಿಕರು ಬೆಂಕಿಯಲ್ಲಿ ಹೀಗೆ ಆಹಾರದ್ರವ್ಯಗಳನ್ನು ಸುರಿಯುವದು ವ್ಯರ್ಥವೆಂದೇ- ಹೋಮಹವನಾದಿಗಳ ವಿಷಯಕ್ಕೆ ಟೀಕೆಯನ್ನು ಮಾಡುತ್ತಾರೆ. ಆದರೆ ಮನುಷ್ಯನು ದೇವತಾರ್ಪಣ ರೂಪವಾದ ಯಜ್ಞವನ್ನು ಮಾಡದೆ ಬೆಳೆದದ್ದನ್ನೆಲ್ಲ ಹಾಗೂ ಉತ್ಪತ್ತಿಯಾದದ್ದನ್ನೆಲ್ಲ ತಾನೇ ತಿಂದರೆ ಅದು ಅಪಚಾರವಾಗುವದು. ಮತ್ತು ಸ್ವಾರ್ಥಬುದ್ಧಿಯೇ ಬೆಳೆದುಕೊಂಡು ಆಸುರೀಸಂಪತ್ತಿಗೆ ಸಿಲುಕಿಕೊಳ್ಳಬೇಕಾಗುವದು. ಮತ್ತು ದೇವತೆಗಳಿಗೆ ಅರ್ಪಿಸುವದಕ್ಕೂ ತನ್ನಂತೆಯೇ ಇರುವ ಮನುಷ್ಯರಿಗೆ ಕೊಡುವ ದಕ್ಕೂ ಭಾವನೆಯಲ್ಲಿ ವ್ಯತ್ಯಾಸವಿದೆ. ಹೇಗೆಂದರೆ ದೇವತೆಗಳಿಗೆ ಕೊಟ್ಟಾಗ ಅದು ಭೂಮಿಯಲ್ಲಿ ಬೀಜದ ಕಾಳನ್ನು ಹಾಕಿದಂತೆ ವೃದ್ಧಿಯಾಗುವದು. ನಾವು ಕೊಡಲಿಲ್ಲವಾದರೆ ದೇವತೆಗಳಿಗೇನೂ ಕೊರತೆಯಾಗಲಾರದು. ನಮ್ಮ ಉದ್ಧಾರ ಕ್ಕಾಗಿಯೇ ನಾವು ದೇವತೆಗಳಿಗೆ ಅರ್ಪಿಸುತ್ತೇವೆಂಬುದು ತತ್ತ್ವವಾಗಿರುತ್ತದೆ. ಇದರಿಂದ ನಾವು ಯಾರಿಗೆ ಕೊಡುವೆವೋ ಅವರು ನಮಗಿಂತಲೂ ಶ್ರೀಮಂತರೂ ಪೂಜ್ಯರೂ ಸಮರ್ಥರೂ ಆಗಿರುವರು ಎಂಬಿದೇ ಯಜ್ಞಭಾವನೆಯ ರಹಸ್ಯವಾಗಿದೆ. ನಮಗಿಂತ ಕಡಿಮೆಯ ಮನುಷ್ಯರಿಗೆ ಹಂಚಿದಾಗ ನಾವೇ ದೊಡ್ಡವರೆಂಬ ಅಹಂಕಾರವೇ ನಮಗೆ ಬರಲಿದೆ. ಇದರಿಂದ ಯಾವ ವೃದ್ಧಿಯೂ ಆಗಲಾರದು. ಹೀಗೆ ಯಜ್ಞದ ಮಹತ್ತ್ವವನ್ನು ತಿಳಿಯಬೇಕು. ಇನ್ನು ಮನುಷ್ಯರಲ್ಲಿಯೂ ಪ್ರಾಣಿಗಳಲ್ಲಿಯೂ ಒಬ್ಬನೇ ಪರಮಾತ್ಮನಿರುವದರಿಂದ ಆ ಭಾವನೆಯಿಂದಲೇ ಬಡಬಗ್ಗರಿಗೆ ಹಂಚುತ್ತೇವೆ- ಎನ್ನುವದಾದರೆ ಅಂಥವರು ನಾಸ್ತಿಕರೇ ಅಲ್ಲ. ಅವರು ಭಗವಂತನನ್ನು ನಂಬಿ ಪ್ರೇಮವನ್ನು ಮಾಡುವ ಭಕ್ತರೇ ಆಗಿರುತ್ತಾರೆ. ಆದರೆ ಜನಸಾಮಾನ್ಯರಿಗೆ ಇಂಥ ದೊಡ್ಡಬುದ್ಧಿಯಿರುವದಿಲ್ಲ. ಅದು ಯಜ್ಞಮಾಡಿದ ಅನಂತರವೇ ಚಿತ್ತಶುದ್ಧಿಯಿಂದಲೇ ಬರಬೇಕಾಗಿರುತ್ತದೆ. ಅಂತೂ ಯಜ್ಞವು ಒಂದಲ್ಲ ಒಂದು ರೀತಿಯಿಂದ ಆಗಲೇಬೇಕು. ಯಜ್ಞದ ಪ್ರಧಾನದೇವತೆಯಾದ ವಿಷ್ಣುವು ಇಂದ್ರನೊಡಗೂಡಿ ಯಜಮಾನನಿಗೆ ಶ್ರೇಯಸ್ಸನ್ನು ಉಂಟುಮಾಡು

ವನು. ಈ ಇಂದ್ರವಿಷ್ಣುಗಳು ಅಗ್ರಾಹುತಿಗೆ ಯೋಗ್ಯರಾಗಿರುವರು. ಎಲ್ಲಾ ದೇವತೆಗಳಿಗಿಂತಲೂ ಇವರಿಗೆ ಮೊದಲು ಹವಿರರ್ಪಣೆಯನ್ನು ಮಾಡಬೇಕು.

ಈಗ ಯಜ್ಞದಿಂದ ತೃಪ್ತರಾದ ಈ ದೇವತೆಗಳು ಧನಧಾನ್ಯಾದಿಗಳನ್ನು ಹೆಚ್ಚಾಗಿ ದಯಪಾಲಿಸಲಿ ! ಎಂದು ಕೇಳಿಕೊಂಡಿರುವದರ ತತ್ತ್ವವನ್ನು ತಿಳಿಯೋಣ. 'ಭತ್ತ ಹೆಚ್ಚಾಗಿದ್ದರೆ ಭಕ್ತಿ ಹೆಚ್ಚು' ಎಂಬ ಗಾದೆಯೊಂದು ಹಿಂದೆ ಜಾರಿಯಲ್ಲಿತ್ತು. ಅದರಂತೆ ದ್ರವ್ಯಗಳು ಸಮೃದ್ಧಿಯಾಗಿದ್ದಲ್ಲಿ ಯಜಮಾನನಿಗೆ ಮತ್ತೆ ಮತ್ತೆ ಯಜ್ಞಮಾಡಬೇಕೆಂಬ ಸಂಕಲ್ಪವುಂಟಾಗುವದು. ಪದಾರ್ಥಗಳು ಸದ್ವಿನಿಯೋಗ ವಾಗುವವು. ಅದಕ್ಕಾಗಿ ಐಶ್ವರ್ಯವನ್ನು ಕೇಳಿಕೊಂಡಿದೆ. ಇಂದ್ರವಿಷ್ಣುಗಳು ಸಮುದ್ರದಂತೆ ತುಂಬಿದ ಐಶ್ವರ್ಯವಂತರು. ಸೂರ್ಯನು ಎಷ್ಟೇ ಒಣಗಿಸಿದರೂ ಸಮುದ್ರವು ಖಾಲಿಯಾಗುವದಿಲ್ಲ. ಹಾಗೆ ದೇವತೆಗಳು ಸಮುದ್ರದಂತೆ ಪರಿ ಪೂರ್ಣರಾಗಿಯೇ ಇರುವರು. ಇಂಥವರೇ ನಮಗೆ ಮತ್ತಷ್ಟು ಐಶ್ವರ್ಯಾದಿಗಳನ್ನು ಕರುಣಿಸಬಲ್ಲರು. ಇವರು ಯಜ್ಞದ ಪವಿತ್ರಸಾಧನವಾದ ಸೋಮಕಲಶದಲ್ಲಿಯೇ ಸನ್ನಿಹಿತರಾಗಿರಲಿ. ಯಾವಾಗಲೂ ನಮ್ಮೊಡನೆ ಇರಲಿ- ಎಂದು ಯಜಮಾನನು ಪ್ರಾರ್ಥಿಸಿಕೊಂಡಿರುತ್ತಾನೆ. ವಾಚಕರೆ, ಈ ಮಂತ್ರದ್ರಷ್ಟಾರನಾದ ಋಷಿಯು ಎಂಥ ಯಜ್ಞದೀಕ್ಷಿತನಿರಬಹುದೆಂದು ಯೋಚಿಸಿರಿ.

**ಇಂದ್ರಾವಿಷ್ಣೂ ಪಿಬತಂ ಮಧ್ವೋ ಅಸ್ಯ ಸೋಮಸ್ಯ ದಸ್ರಾ ಜಠರಂ ಪೃಣೇಥಾಮ್ । ಆ ವಾಮಂಧಾಂಸಿ ಮದಿರಾಣ್ಯಗ್ಮನ್ನುಪ ಬ್ರಹ್ಮಾಣಿ ಶೃಣುತಂ ಹವಂ ಮೇ ॥ ೩೦ ॥**

'ಎಲೈ ದರ್ಶನೀಯರಾದ ಇಂದ್ರಾವಿಷ್ಣುಗಳೆ, ನೀವಿಬ್ಬರೂ ಮದಕರವಾದ ಸೋಮವನ್ನು ಕುಡಿದು ಹೊಟ್ಟೆಯನ್ನು ಸೋಮದಿಂದ ತುಂಬಿಕೊಳ್ಳಿರಿ. ಮತ್ತು ನೀವುಗಳು ಸೋಮಾತ್ಮಕವಾದ ಅನ್ನವನ್ನು ಹೊಗುವವರಾಗಿರಿ. ನನ್ನ ಸ್ತೋತ್ರ ಗಳನ್ನು ಹಾಗೂ ಆಹ್ವಾನವನ್ನು ಕೇಳಿರಿ' ಎಂದು ಈ ಮಂತ್ರದ ಅಭಿಪ್ರಾಯ.

ಭಾಷ್ಯಕಾರರು ಇಲ್ಲಿ ದಸ್ರಾ ಎಂಬುದಕ್ಕ ದರ್ಶನೀಯರೆಂದು ಪೃಣೇಥಾಮ್ ಎಂಬುದಕ್ಕೆ ತುಂಬಿಕೊಳ್ಳಿರಿ ಎಂದೂ ಅರ್ಥಮಾಡಿರುತ್ತಾರೆ. ಅಂಧಾಂಸಿ ಎಂಬುದಕ್ಕೆ ಅನ್ನವನ್ನು - ಎಂದೂ ಅರ್ಥಮಾಡಿದ್ದಾರೆ. ಆದ್ದರಿಂದ ಈ ಮಂತ್ರವು ಅನ್ನದ ಬೇಡಿಕೆಯನ್ನು ಮುಂದಿಡುವದಾಗಿದೆ. ಇಂದ್ರಾವಿಷ್ಣುಗಳು ಸೋಮರಸದಿಂದ

ಹೊಟ್ಟೆಯನ್ನು ತುಂಬಿಕೊಳ್ಳುವದು- ಎಂದರೆ ಪೃಥಿವಿಯಲ್ಲಿರುವ ಎಲ್ಲಾ ಸಸ್ಯಗಳಲ್ಲಿಯೂ ತಮ್ಮ ಶಕ್ತಿಯನ್ನು ಆಧಾನ ಮಾಡುವದು ಎಂದರ್ಥ. ಸೋಮವು ಅನ್ನರೂಪದಿಂದ ಜಗತ್ತಿನ ಬೆಳವಣಿಗೆಗೆ ಕಾರಣವಾಗಿದೆ. ಅನ್ನವೆಂಬುದು ಸಕಲಪ್ರಾಣಿಗಳ ಆಹಾರವು. ಆಯಾ ಪ್ರಾಣಿಗಳಿಗೆ ತಕ್ಕಂತೆ ಅನ್ನವು ಧಾನ್ಯ, ತೃಣ, ರಕ್ತ, ಮಾಂಸ, ಜಿಡ್ಡು- ಮುಂತಾದ ರೀತಿಯಿಂದ ವಿಶ್ವರೂಪವಾಗಿರುವದು. ಯಜ್ಞಕಾಲಕ್ಕೆ ಸೋಮರೂಪವಾಗಿ ಉಪಯೋಗಿಸಲ್ಪಡುವದು. ಇಂಥ ಅನ್ನವು ದೇವತೆಗಳಾದಿಯಾಗಿ ಸಮಸ್ತ ಪ್ರಾಣಿಗಳಿಗೂ ಉಪಯುಕ್ತವಾಗುವದು. ದೇವತೆಗಳಿಗೆ ಹಸಿವುಬಾಯಾರಿಕೆಗಳಿಲ್ಲವಾದ್ದರಿಂದ ಅನ್ನವು ಬೇಕಿಲ್ಲವಲ್ಲವೆ ? ಎಂದರೆ ಹಾಗಲ್ಲ. ಅವರು ಸಹ ಅಮೃತವೆಂಬ ಹೆಸರಿನ ಅನ್ನವನ್ನು ಸ್ವೀಕರಿಸಿದ್ದಾರೆ. ಉಳಿದ ಪದಾರ್ಥಗಳನ್ನು ನಮ್ಮಂತೆ ಬಾಯಿಂದ ನುಂಗಿ ತಿನ್ನುವದಿಲ್ಲವಾದರೂ 'ನಿವೇದನ' (ಅರ್ಪಿಸುವದು) ಮಾಡಿದಾಗ ನೋಡಿ ತೃಪ್ತರಾಗುತ್ತಾರೆ. ಅವರು ಕಣ್ಣಿನಿಂದ ಆಹಾರವನ್ನು ಸ್ವೀಕಾರಮಾಡುತ್ತಾರೆಂದೇ ಅಭಿಪ್ರಾಯ. ವ್ಯವಹಾರದಲ್ಲಿ ಸಹ ಕೆಲವು ವೇಳೆ 'ನೋಡಿ ತೃಪ್ತಿಯಾಯಿತು' ಎಂದು ನಾವು ಹೇಳುತ್ತೇವಲ್ಲವೆ ? ಇರಲಿ. ಹೀಗೆ ಇಂದ್ರಾವಿಷ್ಣುಗಳು ಸೋಮವನ್ನು ಆಹಾರವಾಗಿ ಸ್ವೀಕರಿಸಿ ತೃಪ್ತರಾಗಲಿ ; ಹೊಟ್ಟೆ ತುಂಬಿಕೊಳ್ಳಲಿ- ಎಂದು ಇಲ್ಲಿ ಸ್ತುತಿಸಿದೆ. ಅನಂತರ ಅವರುಗಳು ತಮ್ಮ ಶಕ್ತಿಯನ್ನು ಅನ್ನದಲ್ಲಿಡುವ ಮೂಲಕ ಅನ್ನವರ್ಗವನ್ನೆಲ್ಲ ಅನುಗ್ರಹಿಸಲಿ ! ಎಂದೂ ಬೇಡಿಕೊಂಡಿದೆ. ಮುಂದುವರೆದು ಆ ದೇವತೆಗಳು ಯಜಮಾನನು ಮಾಡುವ ಸ್ತೋತ್ರಗಳನ್ನು ಕೇಳುತ್ತಾ ಅವನ ಕರೆಯನ್ನು ಮನ್ನಿಸಿ ಕಿವಿಗೊಡುವರಾಗಲಿ ! ಎಂದೂ ಪ್ರಾರ್ಥಿಸಿದೆ.

**ಉಭಾ ಜಿಗ್ಯಥುರ್ನ ಪರಾ ಜಯೇಥೇ ಪರಾ ಜಿಗ್ಯೇ ಕತರಶ್ಚ ನೈನೋಃ ।**
**ಇಂದ್ರಶ್ಚ ವಿಷ್ಣೋ ಯದಪಸ್ಪೃಧೇಥಾಂ ತ್ರೇಧಾ ಸಹಸ್ರಂ ವಿ ತದೈರಯೇಥಾಮ್**
**॥ ೩೧ ॥**

"ಎಲೈ ಇಂದ್ರಾವಿಷ್ಣುಗಳೆ, ನೀವಿಬ್ಬರೂ ಶತ್ರುಗಳನ್ನು ಗೆದ್ದಿರಿ. ಯಾವಾಗಲೂ ಪರಾಜಯವನ್ನು ಹೊಂದಲಿಲ್ಲ. ನಿಮ್ಮಿಬ್ಬರ ನಡುವೆ ಯಾವನೊಬ್ಬನೂ ಕೂಡ ಪರಾಜಿತನಾಗಿರುವದಿಲ್ಲ. ಬಹಳ ಸಲ ನೀವುಗಳು ಲೋಕ-ವೇದ-ವಾಗಾತ್ಮಕವಾದ ಸೃಷ್ಟಿಯಲ್ಲಿ ಯಾವದರಲ್ಲಿಯೂ ಅಸುರರೊಡನೆ

ಸ್ಪರ್ಧಿಸಿದಾಗ ಸೋಲದೆ ಅವರನ್ನೇ ಹಿಮ್ಮೆಟ್ಟಿಸಿರುವಿರಿ'' ಎಂಬುದು ಈ ಮಂತ್ರದ ಅರ್ಥವು.

ಇಲ್ಲಿ ಇಂದ್ರವಿಷ್ಣುಗಳ ಬಲವನ್ನು ಸ್ತೋತ್ರಮಾಡಲಾಗಿದೆ. ಇಂದ್ರನನ್ನೇ ಹೊಗಳುವ ಯಜುರ್ವೇದದ 'ಆಶುಃಶಿಶಾನಃ' ಎಂಬ ಮಂತ್ರಭಾಗದಲ್ಲಿ ಆತನನ್ನು ಅಪ್ರತಿರಥನೆಂದು ಸ್ತೋತ್ರಮಾಡಲಾಗಿದೆ. ಆತನು ಯಾವಾಗಲೂ ಶತ್ರುಗಳಿಗೆ ಸೋತವನಲ್ಲ. ಪುರಾಣಗಳಲ್ಲಿ ಕೆಲವು ಕಡೆ ಇಂದ್ರನಿಗೆ ಪರಾಜಯವಾದ ಕಥೆಗಳು ಕಂಡುಬರುತ್ತವೆ. ಆದರೆ ಅವು ಕಡೆಯಲ್ಲಿ ಮತ್ತೆ ಇಂದ್ರನಿಗೇ ಜಯವನ್ನು ತಿಳಿಸುತ್ತವೆ. ಆದ್ದರಿಂದ ಒಮ್ಮೊಮ್ಮೆ ನಡುವೆ ಪರಾಜಯವಾದರೂ ಕಡೆಯಲ್ಲಿ ಇಂದ್ರನೇ ಗೆಲ್ಲುತ್ತಾನೆಂಬುದು ಪ್ರಸಿದ್ಧವಾಗಿದೆ. ಹಾಗೆಯೇ ವಿಷ್ಣುವಿನ ಪರಾಕ್ರಮವೂ ಪುರಾಣಗಳಲ್ಲಿ ವರ್ಣಿಸಲ್ಪಟ್ಟಿದೆ. ವಿಷ್ಣುಪರಾಜಯದ ಕಥೆಗಳು ಎಲ್ಲಿಯೂ ಕಂಡುಬರುವದಿಲ್ಲ. ಸರ್ವತ್ರವಿಜಯಿಯಾದ ವಿಷ್ಣುವಿಗೆ 'ಭಗವಾನ್'' ಎಂದೇ ಬಿರುದನ್ನು ನೀಡಲಾಗಿದೆ. ಜ್ಞಾನಶಕ್ತಿಬಲೈಶ್ವರ್ಯವೀರ್ಯತೇಜಸ್ಸುಗಳ ಮಿಗಿಲಿಲ್ಲದ ಗುಣಸಮೂಹಗಳೆಲ್ಲ ವಿಷ್ಣುವಿನ ಸ್ವತ್ತೇ ಆಗಿವೆ. ಆತನಿಗೆ ಸಮರಾದವರೇ ಇಲ್ಲ. ಇನ್ನು ಹೆಚ್ಚಿನವರೆಲ್ಲಿದ್ದಾರು ? ಎಂದೇ ಅರ್ಜುನನೂ ಸ್ತುತಿಸಿದ್ದಾನೆ. ಹೀಗೆ ಇಂದ್ರಾವಿಷ್ಣುಗಳಿಬ್ಬರೂ ಯಾವಾಗಲೂ ವಿಜಯಿಗಳೆಂದು ಇಲ್ಲಿ ಸ್ತುತಿಸಲಾಗಿದೆ.

ಈಗ ವಿಜಯದ ಸ್ಥಾನಗಳನ್ನು ಪ್ರಸ್ತಾಪಿಸುತ್ತಾರೆ. ತ್ರೇಧಾ ಎಂದರೆ ಮೂರು ವಿಧವಾದ ಜಾಗಗಳಲ್ಲಿಯೂ ಇವರದ್ದೇ ಮೇಲುಗೈಯಾಗಿರುವದು. ಒಂದನೆಯದು ಲೋಕಗಳು. ಎಲ್ಲಾ ಲೋಕಗಳಲ್ಲಿಯೂ ಇವರದ್ದೇ ಅಧಿಕಾರವಿರುವದು. ಎರಡನೆಯದು ವೇದಗಳು. ವೇದಗಳಲ್ಲೆಲ್ಲ ಇಂದ್ರ ವಿಷ್ಣುಗಳನ್ನೇ ಹೆಚ್ಚಾಗಿ ಸ್ತೋತ್ರಮಾಡಿರುತ್ತಾರೆ. ವಿಷ್ಣುವು ಸರ್ವದೇವಾತ್ಮಕನೆಂಬ ಸ್ತುತಿಯೂ ಇರುವದು. ಮೂರನೆಯುದು ವಾಕ್ಕು, ಭಕ್ತರ ಮಾತುಗಳಲ್ಲೆಲ್ಲ ಇಂದ್ರವಿಷ್ಣುಗಳ ವೃತ್ತಾಂತವೇ ಪ್ರಧಾನವಾಗಿರುವದು. ಈಗಿನ ಕಾಲದ ವೃತ್ತಪತ್ರಿಕೆಗಳಲ್ಲಿ ಆಯಾ ಕಾಲದ ಮುಖ್ಯಮಂತ್ರಿಯನ್ನು ಎತ್ತಿಹೊಗಳುವಂತೆ ಯಾವಾಗಲೂ ಇತಿಹಾಸಾದಿಗಳಲ್ಲಿ ವಿಷ್ಣುವೇ ಕೇಂದ್ರವಾಗಿರುವನು. ಇಂಥ ಇಂದ್ರವಿಷ್ಣುಗಳನ್ನು ಇಲ್ಲಿ ಸ್ತುತಿಸಿದೆ.

**ಪರೋ ಮಾತ್ರಯಾ ತನ್ವಾ ವೃಧಾನ ನ ತೇ ಮಹಿತ್ವಮನ್ವಶ್ನು-
ವಂತಿ । ಉಭೇ ತೇ ವಿದ್ಮ ರಜಸೀ ಪೃಥಿವ್ಯಾ ವಿಷ್ಣೋ ದೇವ
ತ್ವಂ ಪರಮಸ್ಯ ವಿತ್ಸೇ ॥ ೩೨ ॥**

'ಎಲೈ ದೇವನಾದ ವಿಷ್ಣುವೆ, ನಿನ್ನ ಅಪರಿಮಿತಮಹಿಮಾಯುಕ್ತವಾದ ವಿರಾಟ್‌ಶರೀರದ ವ್ಯಾಪ್ತಿಯನ್ನು ತಿಳಿಯಲು ಯಾರೊಬ್ಬರೂ ಸಮರ್ಥರಾಗಿಲ್ಲ. ನಾವುಗಳು ನಿನ್ನ ಎರಡು ವಿಭೂತಿಗಳಾದ ಭೂಮ್ಯಂತರಿಕ್ಷಗಳನ್ನು ಮಾತ್ರ ಬಲ್ಲೆವು. ಉಳಿದ ಉತ್ಕೃಷ್ಟವಾದ ಸ್ವರ್ಗಾದಿಲೋಕಗಳನ್ನು ನೀನೊಬ್ಬನೇ ಬಲ್ಲವನಾಗಿರುವೆ' ಎಂದು ಈ ಮಂತ್ರದ ಅರ್ಥವು.

ಭಗವಂತನಾದ ಮಹಾವಿಷ್ಣುವು ತ್ರಿವಿಕ್ರಮನಾದಾಗ- ಉಪನಿಷತ್ತುಗಳಲ್ಲಿ ತಿಳಿಸಿರುವಂತೆ ದ್ಯುಲೋಕದಿಂದ ಪೃಥಿವಿಯವರೆಗೂ ವ್ಯಾಪಿಸಿಕೊಂಡು ಆಯಾ ಲೋಕಗಳು ಹಾಗೂ ಅಲ್ಲಿರುವ ವಿವಿಧ ಜೀವರುಗಳು ಮತ್ತು ಜಡವಸ್ತುಗಳಾಗಿಯೂ ತೋರಿಕೊಂಡುಬಿಟ್ಟನು. ಆ ವಿಭೂತಿಯು ಈಗಲೂ ಶಾಶ್ವತವಾಗಿದೆ- ಎಂದರೆ ನಮ್ಮಂಥ ಮರ್ತ್ಯರ ದೃಷ್ಟಿಯಿಂದ ಪರಿಣಾಮಿನಿತ್ಯವಾಗಿ ಇದ್ದುಕೊಂಡೇ ಇದೆ. ಪರಿಣಾಮಿನಿತ್ಯವೆಂದರೆ ಪದಾರ್ಥವು ಬದಲಾವಣೆಯಾಗುತ್ತಿದ್ದರೂ ಅದೇ ಇದು ಎಂದು ನಾವು ವ್ಯವಹಾರದಲ್ಲಿ ಬಳಸುತ್ತಿರುವ ವಸ್ತುಗಳು ಎಂದರ್ಥ. ಉದಾಹರಣೆಗೆ : ಹೇಮಾವತೀ ನದಿ- ಎಂದರೆ ನೀರು ಹರಿಯುತ್ತಲೇ ಇದ್ದರೂ ಯಾವಾಗಲೂ ನಾವು ಅದೇ ಹೆಸರಿನಿಂದ ವ್ಯವಹರಿಸುತ್ತಾ ಎಲ್ಲರಿಗೂ ನದಿಯನ್ನು ತೋರಿಸುತ್ತಿರುವೆವಲ್ಲವೆ ? ಇಂಥವುಗಳನ್ನು ಶ್ರೀ ಶಂಕರಾಚಾರ್ಯರು ಪರಿಣಾಮಿನಿತ್ಯವೆಂದು ಕರೆಯುವರು. ಮಹಾವಿಷ್ಣುವಾದರೊ, ಕೂಟಸ್ಥನಿತ್ಯನು. ಹೇಗೆ ಅಕ್ಕಸಾಲೆಯು ಅಡಿಗಲ್ಲಿನಮೇಲೆ ಚಿನ್ನವನ್ನಿಟ್ಟು ಬಡಿಯುತ್ತಿರುವಾಗ ಚಿನ್ನವು ರೂಪಾಂತರವಾಗುತ್ತಲೇ ಇದ್ದರೂ ಅಡಿಗಲ್ಲು ಹೇಗೆ ಅಳ್ಳಾಡದೆ, ಬದಲಾವಣೆ ಆಗದೆ ಇರುವದೋ ಹಾಗೆ ಶ್ರೀ ಮಹಾವಿಷ್ಣುವು ಭೂತಗಳು ಸೃಷ್ಟಿಯಾಗಿ ಪರಿಣಾಮವನ್ನು ಹೊಂದಿ ಕಣ್ಮರೆಯಾದರೂ ತಾನು ಮಾತ್ರ ಏನೊಂದೂ ವಿಕಾರಹೊಂದದೆ ಇದ್ದಂತೆಯೇ ಇರುವನು. ಈಗಿನ ವಿಜ್ಞಾನಿಗಳ ಅಭಿಪ್ರಾಯದಂತೆಯೂ ಈ ತತ್ತ್ವವು ಸಿದ್ಧವಾಗುತ್ತದೆ. ಹೇಗೆಂದರೆ ಮಾರ್ಪಾಡನ್ನು ಗುರುತಿಸುವ ಮೂಲವಸ್ತುವು ತಾನು ಮಾರ್ಪಾಡಾಗದೆ ಇರಬೇಕೆಂಬುದೇ ನಿಯಮವು. ಇದನ್ನು ಸಾಪೇಕ್ಷಸಿದ್ಧಾಂತ (Theory of Relativity) ವೆಂದು

ಕರೆಯುತ್ತಾರೆ. ಈ ನಿಯಮದ ಬಲದಿಂದ ವಿಜ್ಞಾನಿಗಳು ಕೂಟಸ್ಥವಸ್ತುವನ್ನು ಹುಡುಕಲು ಪ್ರಯತ್ನಿಸುತ್ತಿರುವರಾದರೂ ಅವರ ಅನ್ವೇಷಣೆಯು ಬಹಿರ್ಮುಖ ವಾಗಿರುವದರಿಂದ ಆತ್ಮತತ್ತ್ವವು ಸಿಗದೆ ಇದೆ. ಆದ್ದರಿಂದ ಅಧ್ಯಾತ್ಮಯೋಗಮಾರ್ಗ ದಿಂದಲೇ ಹುಡುಕಿ ಕೂಟಸ್ಥವಸ್ತುವಿನ ಸ್ವರೂಪದಲ್ಲಿಯೇ ಸಾಧಕನು ಒಂದಾಗಿ ಪರಮಪುರುಷಾರ್ಥವನ್ನು ಪಡೆದುಕೊಳ್ಳಬೇಕಾಗಿದೆ. ಹಾಗಿಲ್ಲದೆ ವಿಷ್ಣುವಿನ ತೋರಿಕೆಗಳಾದ ನಾನಾವಿಭಾಗಗಳನ್ನೂ ಲೋಕಗಳನ್ನೂ ಜೀವರುಗಳನ್ನೂ ವಿಶ್ಲೇಷಣೆಮಾಡುತ್ತಾ ಕುಳಿತರೆ ಮಾನವನು ಮತ್ತಷ್ಟು ಕಗ್ಗತ್ತಲನ್ನು ಪ್ರವೇಶಿಸು ವದೇ ಗತಿ. ಇದನ್ನೇ ಒಬ್ಬ ಋಷಿಯು ಈ ಮಂತ್ರದಲ್ಲಿ 'ಎಲೈ ಮಹಾವಿಷ್ಣುವೆ, ನಿನ್ನ ಪರವಾದ ಹಾಗೂ ಅಪರಿಮಿತವಾದ ವಿರಾಟ್‌ಶರೀರವನ್ನು ಚೆನ್ನಾಗಿ ಬಲ್ಲವನು ಯಾವನಿರುವನು ?' ಎಂದು ಕೇಳಿರುತ್ತಾನೆ. ವಿಜ್ಞಾನಿಗಳು ಕೂಡ ಎಷ್ಟೋ ಸಂಶೋಧನೆಗಳ ಅನಂತರವೂ ಇನ್ನೂ ಅನೇಕ ಸೃಷ್ಟಿನಿಯಮಗಳನ್ನೂ ಜಗದ್ವೈಚಿತ್ರ್ಯವನ್ನೂ ಅರಿಯಲಾರದೆ ತೊಳಲುತ್ತಿರುವದು ಒಂದು ರೀತಿಯಲ್ಲಿ ವಿಷ್ಣುಮಾಯೆಯೇ ಎಂದರೆ ತಪ್ಪಾಗಲಾರದು.

ಆದರೆ ಈ ಮಂತ್ರದ್ರಷ್ಟಾರನಾದ ಋಷಿಯು ಮುಂದುವರೆದು ಹೀಗೆನ್ನುತ್ತಿರುವನು. 'ವಿಷ್ಣೋ, ನಾವು ನಿನ್ನ ಪೂರ್ಣಸೃಷ್ಟಿವಿಸ್ತಾರವನ್ನು ಅರಿಯ ಲಾಗದಿದ್ದರೂ ನಮ್ಮ ಮನೋಬುದ್ಧಿ ಇಂದ್ರಿಯಗಳಿಗೆ ಗೋಚರವಾಗುತ್ತಿರುವ 'ಉಭೇ' (ಎರಡು) ಮಹಿಮೆಗಳನ್ನು ಕಾಣುತ್ತಿರುವೆವು. ಅವೇ ಪೃಥಿವೀ-ಹಾಗೂ ಅಂತರಿಕ್ಷಲೋಕಗಳು. ಉಳಿದವುಗಳ ಎಂದರೆ ದ್ಯುಲೋಕಾದಿಗಳ ವಿಸ್ತಾರವು ನಿನಗೊಬ್ಬನಿಗೇ ಗೋಚರವೇ ಹೊರತು ಮತ್ತಾವನು ಕಂಡಿರುವನು ?' ಎಂದು ವಿಷ್ಣುವನ್ನು ಸ್ತುತಿಸಿರುತ್ತಾನೆ. ಆದ್ದರಿಂದ ಭಗವಂತನ ಮಹಿಮೈಕದೇಶವೆನಿಸಿರುವ ಭೂಮಿ- ಆಕಾಶಗಳನ್ನಾದರೂ ನಾವು ಅಂತರ್ದೃಷ್ಟಿ-ಬಹಿರ್ದೃಷ್ಟಿಗಳಿಂದ ಚೆನ್ನಾಗಿ ಪರೀಕ್ಷಿಸಿ ಈಗ ತಿಳಿದುಕೊಳ್ಳೋಣ. ಒಂದು ರೀತಿಯಲ್ಲಿ ಇದು ಕೂಡ ನಮಗೆ ದಕ್ಕದ ವಿಷಯವೆಂದೇ ಹೇಳಿಬಿಡಬಹುದು. ಏಕೆಂದರೆ ಭೂಮಿಯನ್ನು ಮಾತ್ರವೇ ಅರಿತುಕೊಳ್ಳಹೊರಟರೂ ಅದರಲ್ಲಿ ವಿವಿಧವಾಗಿ ಕಾಣಬರುತ್ತಿರುವ ಶಬ್ದ ಸ್ಪರ್ಶರೂಪರಸಗಂಧಗಳ ವಿಶ್ಲೇಷಣೆಯು ನಮ್ಮ ಬುದ್ಧಿಮಟ್ಟಕ್ಕೆ ಹಾಗೂ ಮಾತಿಗೆ ಸಿಗದಾಗಿಬಿಟ್ಟದೆ. ಉದಾಹರಣೆಗೆ 'ಹುಳಿ' ಎಂಬ ರಸವನ್ನು ತೆಗೆದು ಕೊಳ್ಳೋಣ. ನಿಂಬೆಹುಳಿ, ಹುಣಿಸೇಹುಳಿ, ದಾಳಿಂಬ್ರೆಹುಳಿ, ದ್ರಾಕ್ಷಿಹುಳಿ- ಎಲ್ಲಕ್ಕೂ

ಹುಳಿಯೆಂದೇ ನಾವು ಕರೆಯುವವು. ಬೇರೆ ಶಬ್ದವೇ ಗತಿಯಿಲ್ಲ. ಈ ಹುಳಿವೈಚಿತ್ರ್ಯಗಳು ಒಂದೇ ಭೂಮಿಯಲ್ಲಿ ಹೇಗೆ ಉಂಟಾದವು ? ಭೂಮಿಯ ಮಣ್ಣಿನಲ್ಲಿ ಯಾವ ಹುಳಿಯೂ ಇಲ್ಲವಲ್ಲ ? ಎಂದರೆ ಈಗಲೂ ನಮಗೆ ಉತ್ತರವನ್ನು ಕೊಡಲು ಸಾಧ್ಯವಾಗಿಲ್ಲ. ನಮ್ಮನ್ನೂ ನಾವು ವಾಸವಾಗಿರುವ ಲೋಕವನ್ನೂ ನಮ್ಮಂತೆಯೇ ಇರುವ ಪ್ರಾಣಿ ಸಸ್ಯವರ್ಗಗಳನ್ನೂ, ಕತ್ತೆತ್ತಿನೋಡಿದರೆ ಕಾಣಬರುವ ಸೂರ್ಯಚಂದ್ರನಕ್ಷತ್ರ ವಿದ್ಯುತ್ ಮೇಘಮಾಲಾದಿಗಳನ್ನೂ ಅಂತರಿಕ್ಷಭೂಮಿಯನ್ನೆಲ್ಲ ವ್ಯಾಪಿಸಿರುವ ವಾಯುಮಂಡಲಗಳನ್ನೂ ತನ್ನೊಳಗೇ ಅಡಗಿಸಿಕೊಂಡು ಅವುಗಳ ಉತ್ಪತ್ತಿಸ್ಥಿತಿಲಯಗಳನ್ನು ಲೀಲಾಮಾತ್ರದಿಂದ ನಿರ್ವಹಿಸುತ್ತಿರುವ ಭಗವಂತನೊಬ್ಬನನ್ನು ಬಿಟ್ಟರೆ ನಾವು ಇನ್ನು ಯಾರನ್ನು ತಾನೆ ಈ ಅದ್ಭುತ ಕಾರ್ಯಗಳ ಕರ್ತೃವಾಗಿರುವನೆಂದು ಹೆಸರಿಸಲು ಸಾಧ್ಯವಾದೀತು ? ಆದ್ದರಿಂದಲೇ ಋಷಿಯ 'ನ ತೇ ಮಹಿತ್ವಮನ್ವಶ್ನುವಂತಿ' ಎಂದೇ ಹಾಡಿಬಿಟ್ಟಿರುತ್ತಾನೆ. ಈಗಲಾದರೂ ಮಾನವನು ತನ್ನ ಸಂಶೋಧನೆಗಳ ವಿಷಯಕ್ಕೆ ಅಹಂಕಾರವನ್ನು ಬಿಟ್ಟು ಭೌತಿಕವಾಗಿಯೂ ಇಂದ್ರಿಯವಿಷಯವಾಗಿಯೂ ಇರುವ ಭೂಮ್ಯಾದಿ ರೂಪವಾದ ಮಹಿಮೆಗಳನ್ನು ಕಂಡುಕೊಂಡು ಅವುಗಳ ಅಂತರ್ಯಾಮಿಯ ಅನ್ವೇಷಣೆಗಾಗಿ ಅಂತರ್ಮುಖನಾಗಬೇಕು. ಭಗವದನುಗ್ರಹವಿದ್ದರೆ ಏನಾದರೂ ಪುರುಷಾರ್ಥವು ಅಂಥವನಿಗೆ ಮಾತ್ರ ದೊರೆತೀತು.

**ನ ತೇ ವಿಷ್ಣೋ ಜಾಯಮಾನೋ ನ ಜಾತೋ ದೇವ ಮಹಿಮ್ನಃ**
**ಪರಮಂತಮಾಪ । ಉದಸ್ತಭ್ನಾ ನಾಕಮೃಷ್ವಂ ಬೃಹಂತಂ ದಾದರ್ಥ**
**ಪ್ರಾಚೀಂ ಕಕುಭಂ ಪೃಥಿವ್ಯಾಃ ॥ ೩೩ ॥**

"ಎಲೈ ದೇವನೆ, ನಿನ್ನ ಮಹಿಮೆಯ ಹೆಚ್ಚಿನ ತುದಿಯನ್ನು ಹುಟ್ಟುವ ಸ್ವಭಾವವುಳ್ಳ ಮರ್ತ್ಯನು ಎಂದಿಗೂ ಮುಟ್ಟಲಾರನು. ಏಕೆಂದರೆ ಆ ಮಹಿಮೆಗೆ ಕೊನೆಯೇ ಇರುವದಿಲ್ಲವಲ್ಲವೆ ? ಆ ಮಹಿಮೆಯು ಯಾವದೆಂದರೆ : ದರ್ಶನೀಯವಾದ ಮಹತ್ತಾದ ಸ್ವರ್ಗಲೋಕವನ್ನು ನೀನು ಮೇಲುಭಾಗಕ್ಕೆ ಏರಿಸಿ ಅದು ಕೆಳಗೆ ಬೀಳದಂತೆ ಧರಿಸಿರುವೆ. ಹಾಗೆಯೇ ಭೂಮಿಯ ಪೂರ್ವಾದಿದಿಕ್ಕುಗಳನ್ನೂ ವ್ಯಾಪಿಸಿಕೊಂಡು ನಿನ್ನಲ್ಲಿಯೇ ಹಿಡಿದಿಟ್ಟುಕೊಂಡಿರುವೆ"- ಎಂದು ಈ ಮಂತ್ರದ ಅರ್ಥವು.

ಈಗ ಋಷಿಯು ಮತ್ತೊಮ್ಮೆ ವಿಷ್ಣುವಿನ ಮಹಿಮೆಯನ್ನು ಕೊಂಡಾಡುತ್ತಿದ್ದಾನೆ. ವಿಷ್ಣುವಿನ ಮಹಿಮೆಗೆ ಸಾಟಿಯಾದುದಿಲ್ಲವೆಂದೇ ಆತನ ಅಭಿಪ್ರಾಯ. ಏಕೆಂದರೆ ಯಾವ ಸಂಶಯವೂ ಇಲ್ಲದೆ ನಾವು ಮಹಾವಿಷ್ಣುವು ಹಿಡಿದಿಟ್ಟಿರುವ ಊರ್ಧ್ವಲೋಕಗಳನ್ನು ನಮ್ಮ ಇಂದ್ರಿಯಬುದ್ಧಿಗಳಿಗೆ ಗೋಚರ ವಾಗುವಷ್ಟನ್ನಾದರೂ ಕಂಡು ಮಹಿಮೆಯನ್ನು ಅರಿತುಕೊಳ್ಳಬಹುದು. ಹೇಗೆಂದರೆ: ಸ್ವರ್ಗಲೋಕವು ಭೂಲೋಕಕ್ಕಿಂತ ಮೇಲಿರುವದೆಂದು ಶಾಸ್ತ್ರಗಳಲ್ಲಿ ತಿಳಿಸಿದೆ. ನಾಕ-ಸ್ವರ್ಗ-ದೇವಲೋಕ-ಎಲ್ಲವೂ ಪರ್ಯಾಯಗಳು. ಪ್ರತ್ಯಕ್ಷವಾಗಿಯೇ ಕಂಡುಬರುತ್ತಿರುವ ಸೂರ್ಯ-ಚಂದ್ರ-ನಕ್ಷತ್ರ- ಗ್ರಹ-ತಾರೆಗಳನ್ನು ನಿರಾಲಂಬನ ವಾದ ಆಕಾಶದಲ್ಲಿ ಹೇಗೆ ಭಗವಂತನು ನೆಲೆಗೊಳಿಸಿರಬಹುದು ? ಅವುಗಳ ಪರಸ್ಪರವೇಗ, ಆಕರ್ಷಣೆ, ಚಲನೆಗಳ ರಹಸ್ಯವೇನು? ಅವುಗಳ ಸ್ಥಾಪನೆಯಿಂದ ಭೂಲೋಕದ ಮೇಲೆ ಆಗಿರುವ ಪರಿಣಾಮಗಳೇನು ? ಎಂಬೀ ವಿಷಯಗಳೆಲ್ಲವೂ ವಿಷ್ಣುವಿನ ಅಪಾರವಾದ ಮಹಿಮೆಯಲ್ಲಿಯೇ ಅಡಕವಾಗಿಬಿಟ್ಟಿವೆ. ಇವುಗಳಲ್ಲಿ ಒಂದೊಂದನ್ನೂ ಅರಿಯಬೇಕೆಂಬ ಮಾನವನ ಪ್ರಯತ್ನವು ಇನ್ನೂ ಪೂರ್ಣ ವಾಗಿರುವದಿಲ್ಲ. ಆದ್ದರಿಂದಲೇ 'ಮಹಿಮೆಯ ತುದಿಯನ್ನು ನಾವು ಮುಟ್ಟಲಾಗಿಲ್ಲ' ಎಂದು ಋಷಿಯು ತಿಳಿಸಿದ್ದಾನೆ. ಇಷ್ಟೇ ಅಲ್ಲ. ಆ ವಿಷ್ಣುವಿನ ಮಹಿಮೆಗೆ ಇಂತಿಷ್ಟು ಅವಧಿ ಎಂದಾದರೂ ಗೊತ್ತುಪಡಿಸಬಹುದಲ್ಲವೆ ? ಗಣಿತಶಾಸ್ತ್ರದ ಬಲದಿಂದ ಭೂಮಿ ಹಾಗೂ ಸೂರ್ಯರ ನಡುವಿನ ದೂರವನ್ನಳೆದಿರುವಂತೆ ಭಗವಂತನ ಮಹಿಮೆಯನ್ನೂ ಅಳೆಯಬಹುದಲ್ಲವೆ ? ಎಂದರೆ ಸಾಧ್ಯವಿಲ್ಲ ; ಆಕಾಶವನ್ನು ಹೇಗೆ ತುಂಡುಮಾಡಲಾರೆವೋ ಹಾಗೆಯೇ ವಿಷ್ಣುವಿನ ಸೃಷ್ಟಿಮಹಿಮೆಯ ಕೊನೆಯನ್ನೂ ಕಾಣಲಾಗುವದಿಲ್ಲ. ಕಾರಣವೇನೆಂದರೆ : ಅದಕ್ಕೆ ಕೊನೆಯೇ ಇರುವದಿಲ್ಲ. ಅದು ಅನಂತವು. ಆದ್ದರಿಂದ ನಾವು ಸ್ವರ್ಗವನ್ನೂ ಇಂದ್ರನನ್ನೂ ಕಲ್ಪವೃಕ್ಷಕಾಮಧೇನು ಚಿಂತಾಮಣ್ಯಾದಿಗಳನ್ನೂ ಕಣ್ಣಿನಲ್ಲಿ ನೋಡದಿದ್ದರೂ ಸೂರ್ಯಾದಿಗ್ರಹನಕ್ಷತ್ರ ಲೋಕಗಳಂತೆಯೇ ಅವು ಕೂಡ ಖಂಡಿತವಾಗಿದ್ದುಕೊಂಡಿವೆ. ಅಲ್ಲಿಯೂ ವಿಷ್ಣುವೇ ತನ್ನ ಮಹಿಮೆಯಿಂದ ವ್ಯಾಪಿಸಿಕೊಂಡಿರುತ್ತಾನೆನ್ನುವದು ನಿರ್ವಿವಾದವು.

ಈಗ ಪೂರ್ವಾದಿದಿಕ್ಕುಗಳನ್ನು ಕುರಿತು ವಿಚಾರಮಾಡೋಣ. ದಿಕ್ಕುಗಳ ವ್ಯವಹಾರವೂ ಸಾಪೇಕ್ಷವಾಗಿದೆ. ಉದಾಹರಣೆಗೆ ಸಂಸ್ಕೃತಭಾಷೆಯಲ್ಲಿ ಬಲ-ಎಂಬುದಕ್ಕೆ ದಕ್ಷಿಣವೆಂದೂ ಎಡ- ಎಬುದಕ್ಕೆ ಉತ್ತರವೆಂದೂ ಸಂಜ್ಞೆಯಿದೆ. ನಾವು

ನಿಂತಿರುವ ಸ್ಥಿತಿಗೆ ಅನುಸಾರವಾಗಿ ಎಡಬಲಗಳನ್ನು ಗೊತ್ತುಪಡಿಸುವೆವು. ಎರಡು ವಾಹನಗಳು ಪರಸ್ಪರ ಎದುರಾಗಿ ಬರುತ್ತಿದ್ದರೆ ಒಂದು ವಾಹನದ ಬಲವು ಮತ್ತೊಂದು ವಾಹನಕ್ಕೆ ಎಡವಾಗುವದೆಂಬುದು ಪ್ರಸಿದ್ಧವಾಗಿದೆ. ಹಾಗೆಯೇ ಸೂರ್ಯ-ಭೂಮಿಗಳ ಅಪೇಕ್ಷೆಯಿಂದ ದಿಕ್ಕುವಿದಿಕ್ಕುಗಳನ್ನು ನಾವು ಗುರುತಿಸುವೆವು. ಇದು ವ್ಯವಹಾರಮಾತ್ರವೇ. ಭೂಮಿಯಲ್ಲಿರುವವರ ದೃಷ್ಟಿಯಿಂದ ಪ್ರತಿದಿನವೂ ಬೆಳಗ್ಗೆ ಸೂರ್ಯನು ಎದುರಾಗಿ ಕಾಣಿಸುವ ದಿಕ್ಕನ್ನು ಪೂರ್ವವೆಂದು ಕರೆಯುವೆವು. ಇದಕ್ಕನುಗುಣವಾಗಿ ಉಳಿದ ದಿಕ್ಕುಗಳನ್ನು ಹೆಸರಿಸುವೆವು. ಇರಲಿ. ಈ ಮಂತ್ರದಲ್ಲಿ ಪೂರ್ವವೇ ಮುಂತಾದ ಪೃಥಿವಿಯ ಎಲ್ಲಾ ದಿಕ್ಕುಗಳನ್ನೂ ವಿಷ್ಣುವು ಧರಿಸಿದ್ದಾನೆಂಬುದರ ಅರ್ಥವಿಶೇಷವನ್ನು ಈಗ ಅನುಸಂಧಾನಮಾಡಬಹುದು. ಭಗವಂತನು ದಿಗ್ದೇವತೆಗಳ ರೂಪದಲ್ಲಿಯೂ ಲೋಕಪಾಲಕರ ರೂಪದಲ್ಲಿಯೂ ಕೂಡ ನಮಗೆ ಉಪಾಸ್ಯನಾಗಿರುತ್ತಾನೆ. ಆಯಾ ದಿಕ್ಕುಗಳ ಅಭಿಮಾನಿಗಳನ್ನು ಇಂದ್ರನೇ ಮೊದಲಾದ ಹೆಸರಿನಿಂದ ನಾವು ಕರೆಯುವೆವು. ಈ ದೇವತೆಗಳನ್ನು ಯಜ್ಞ-ಪೂಜಾ-ಸಂಧ್ಯಾದಿಕರ್ಮಗಳಲ್ಲಿ ನಾವು ಅರ್ಚಿಸಿ ವಂದಿಸುವೆವು. ಇವರೆಲ್ಲರೂ ಭಗವಂತನ ಅಂಶರೂ ವಿಭೂತಿಗಳೂ ಆಗಿರುವರು. ಇಂಥ ದೇವತೆಗಳ ರೂಪದಿಂದ ನಾವು ಪೂರ್ವಾದಿದಿಕ್ಕುಗಳನ್ನು ಭಾವಿಸಿದರೆ ಋಷಿಯು ಮಂತ್ರದಲ್ಲಿ ಸ್ತುತಿಸಿರುವಂತೆ ಸರ್ವವ್ಯಾಪಕನಾದ ವಿಷ್ಣುವಿನ ಮಹಿಮೆಯು ಪರಿಚಯವಾಗುವದು. ಹೀಗೆ ಪೃಥಿವಿಯ ದಿಕ್ಕುಗಳನ್ನೆಲ್ಲ ದೇವತೆಗಳ ರೂಪದಿಂದ ಧರಿಸಿರುವ ವಿಷ್ಣುವಿನ ಮಹಿಮೆಯು ಅಪಾರವಾದುದು-ಎಂದಭಿಪ್ರಾಯ.

**ಇರಾವತೀ ಧೇನುಮತೀ ಹಿ ಭೂತಂ ಸೂಯವಸಿನೀ ಮನುಷೇ ದಶಸ್ಯಾ ।**
**ವ್ಯಸ್ತಭ್ನಾ ರೋದಸೀ ವಿಷ್ಣವೇ ತೇ ದಾಧರ್ಥ ಪೃಥಿವೀ ಮಭಿತೋ ಮಯೂಖೈಃ**
**॥ ೩೪ ॥**

"ಎಲೈ ದ್ಯು ಪೃಥಿವೀದೇವತೆಗಳಿರಾ, ಸ್ತೋತ್ರಮಾಡುವ ಯುವಕನಾದ ಮನುಷ್ಯನಿಗೆ ಅನ್ನ, ಗೋವು- ಮುಂತಾದವುಗಳನ್ನು ಕೊಟ್ಟು ಸಲಹಲು ನೀವುಗಳು ಸಮರ್ಥರಾಗಿರುವಿರಿ. ಏಕೆಂದರೆ ನೀವು ವಿಷ್ಣುವಿನ ಪಾದಕ್ರಮಣದಿಂದ ಪ್ರವೃದ್ಧರಾಗಿರುವಿರಿ. ಎಲೈ ವಿಷ್ಣುವೆ, ಈ ದ್ಯಾವಾಪೃಥಿವಿಗಳನ್ನು ವಿವಿಧವಾಗಿ ಎಂದರೆ ದ್ಯುಲೋಕವನ್ನು ಮೇಲುಮುಖವಾಗಿಯೂ ಪೃಥಿವಿಯನ್ನು ಕೆಳಮುಖವಾಗಿಯೂ ನೀನು ಧರಿಸಿದೆಯಲ್ಲವೆ ! ಹಾಗೂ ಭೂಮಿಯನ್ನು ಅಳ್ಳಾಡದಂತೆ ನಿನ್ನ

ಪರ್ವತರೂಪವಾದ ಶರೀರಗಳಿಂದ ಧರಿಸಿರುವೆಯಷ್ಟೆ''- ಎಂದು ಈ ಮಂತ್ರದ ಅರ್ಥ.

ಈ ಮಂತ್ರದಲ್ಲಿ ದ್ಯುಪೃಥಿವೀದೇವತೆಗಳನ್ನು ವಿಷ್ಣುವಿನ ಸ್ಪರ್ಶದಿಂದ ಸಂಪದ್ಯುಕ್ತರೂ ಕಾಮಪ್ರದರೂ ಆಗಿರುತ್ತಾರೆಂದು ಹೊಗಳಿದೆ. ಕೆಲವರು ಮಾಡುವ ಕೆಲಸಗಳೆಲ್ಲ ಬಹಳಮಟ್ಟಿಗೆ ಸಿದ್ಧಿಯಾದಾಗ ಜನರು 'ಅವನು ಮುಟ್ಟಿದ್ದೆಲ್ಲ ಚಿನ್ನ ; ಅಂಥ ಅದೃಷ್ಟಶಾಲಿ' ಎಂದು ಹೊಗಳುವದುಂಟು. ಹಾಗೆ ವಿಷ್ಣುವು ಮುಟ್ಟಿದ್ದೆಲ್ಲವೂ ಸಂಪದ್ಯುಕ್ತವೇ ಆಗುವವು. ವಿಭೂತಿಮತ್ತಾಗಿಯೂ, ಶ್ರೀಮಂತವಾಗಿಯೂ ಯಶಸ್ವಿಯಾಗಿಯೂ ಕಂಡುಬರುವಂಥವುಗಳೆಲ್ಲವೂ ವಿಷ್ಣುವಿನ ಅಂಶಗಳೆಂದೇ ಗೀತೆಯಲ್ಲಿ ತಿಳಿಸಿದೆ. ಪ್ರಕೃತ-ಪೃಥಿವೀದೇವಿಯು ವಿಷ್ಣುವಿನ ಪಾದಕ್ರಮಣದ ಕಾಲಕ್ಕೆ ಸ್ಪೃಷ್ಟಳಾದದ್ದರ ಜೊತೆಗೆ 'ವರಾಹಾವತಾರ'ದಲ್ಲಿ ಆತನ ಕೈಗಳಿಂದಲೇ ಮೇಲಕ್ಕೆತ್ತಿ ತರಲ್ಪಟ್ಟು ವಿಷ್ಣುಪತ್ನಿ ಎನಿಸಿದಳು. ಈಕೆಯು ಎರಡು ಬಾರಿ ವಿಷ್ಣುಸ್ಪರ್ಶವನ್ನು ಪಡೆದ ಮಹಾಪುಣ್ಯವತಿಯು. ಆದ್ದರಿಂದಲೇ ಸರ್ವಸಸ್ಯಪ್ರಾಣಿ-ಮನುಷ್ಯಾಶ್ರಯಳಾಗಿ ರತ್ನಗರ್ಭಳೂ- ಕಾಮಧೇನುವೂ ಆಗಿರುವಳು. ಈಗಲೂ ಭೂಮಿಯ ಬೆಲೆಯನ್ನು ಕಟ್ಟಲಾದೀತೆ ? ದೊಡ್ಡದೊಡ್ಡ ನಗರಗಳಲ್ಲಿ ಒಂದು ಸೈಟಿನ ಬೆಲೆಯೇ- ಒಬ್ಬೊಬ್ಬ ಮನುಷ್ಯನ ಆಸ್ತಿಯೆನಿಸಿದ ಕಾಲಕ್ಕೆ ಲಕ್ಷಾಂತರ ರೂಪಾಯಿಗಳ ಮೊತ್ತವಾಗುತ್ತದೆ. ಇನ್ನು ಇಡಿಯ ಭೂಮಿಯ, ಅಲ್ಲಿರುವ ಮರ, ಗಿಡ, ಪ್ರಾಣಿಗಳು, ರತ್ನವಜ್ರವೈಡೂರ್ಯಹೇಮಾದಿಲೋಹಗಳು, ಎಣ್ಣೆ-ಮುಂತಾಗಿ ಎಲ್ಲಾ ವಸ್ತುಗಳ ಬೆಲೆಯು ಎಷ್ಟಾಯಿತೆಂಬುದು ಯಾವ ಗಣಿತಶಾಸ್ತ್ರಜ್ಞನ ತಲೆಗೂ ಹರಿಯಲಾರದ ಲೆಕ್ಕವಾದೀತು. ಇಂಥ ಸಿರಿಸಂಪತ್ತುಗಳು ಭೂಮಿಯ ಪಾಲಿಗೆ ಬಂದದ್ದು ವಿಷ್ಣುವಿನ ಅಮೃತಹಸ್ತಸ್ಪರ್ಶದಿಂದಲೇ- ಎಂಬಿದು ನಿರ್ವಿವಾದವು. ಆದ್ದರಿಂದಲೇ ಈಕೆಯು ಎಲ್ಲರಿಗೂ ಬೇಕಾದ ಧನಧಾನ್ಯಗಳನ್ನು ನೀಡುವ ಸಾಮರ್ಥ್ಯವುಳ್ಳವಳಾಗಿರುತ್ತಾಳೆ. ಇರಾವತೀ-ಎಂದರೆ ಅನ್ನವುಳ್ಳವಳೆಂದೂ ಧೇನುಮತೀ ಎಂದರೆ ಪಶುಸಮೃದ್ಧಿಯುಳ್ಳವಳೆಂದೂ ಅರ್ಥ. ಸೂಯವಸಿನೀ ಎಂದರೆ ಶೋಭನವಯಸ್ಸಿನ ಯುವಕನಾದ ಭಾಗ್ಯಶಾಲಿಗೆ ಕಾಮಪ್ರದಳು ಎಂದರ್ಥ. ಏಕೆಂದರೆ ಭೋಗಗಳನ್ನು ಅನುಭವಿಸಲು ಯೌವನವು ಬೇಕು. ಹೀಗೆ ಪೃಥಿವಿಯು ಕಾಮಪ್ರದಳಾಗಿರುವಂತೆ ದ್ಯುಲೋಕಮಾತೆಯೂ ವಿಷ್ಣುವಿನ ಪಾದಕ್ರಮಣದಿಂದ ಶ್ರೀಮಂತಳಾಗಿ ವರಪ್ರದಳಾಗಿರುವಳು. ಇವರಿಬ್ಬರನ್ನೂ ಇಲ್ಲಿ

ಹೊಗಳಿದೆ. ಅನಂತರ ವಿಷ್ಣುವನ್ನು ನೇರಾಗಿ ಸ್ತುತಿಸುತ್ತಾರೆ. ಹೇಗೆಂದರೆ : ''ಎಲೈ ದೇವನೆ, ನೀನು ಈ ದ್ಯಾವಾಪೃಥಿವಿಗಳನ್ನು ಊರ್ಧ್ವಮುಖವಾಗಿಯೂ ಅಧೋಮುಖವಾಗಿಯೂ ನಿಲ್ಲಿಸಿರುತ್ತೀಯೆ. ಅಲ್ಲದೆ ನೀರಿನಲ್ಲಿ ಭೂಮಿಯು ತೇಲಿಹೋಗದೆ ನೆಲೆನಿಲ್ಲುವಂತೆ ಪರ್ವತಗಳನ್ನು ಹೇರಿಟ್ಟಿರುವೆ. ಈ ಪರ್ವತ ಗಳಾದರೊ, ನಿನ್ನ ಸ್ಥಾವರಶರೀರಗಳೇ ಆಗಿವೆ. ಅವುಗಳಿಗೆ ನೀನೇ ಅಧಿಪತಿಯೂ ಆಗಿರುವೆ.'' ಈ ಸ್ತುತಿಯು ಯಜುರ್ವೇದದ 'ವಿಷ್ಣುಃ ಪರ್ವತಾನಾಮಧಿಪತಿಃ' ಎಂಬ ಮಂತ್ರವನ್ನು ನೆನಪುಮಾಡಿಕೊಡುತ್ತಿದೆ. ಸಾಮಾನ್ಯವಾಗಿ ವಿಷ್ಣುದೇವಾಲಯ ಗಳೆಲ್ಲವೂ ಬೆಟ್ಟದ ಮೇಲುಗಡೆಯೂ ಶಿವದೇವಾಲಯಗಳು ನದೀತೀರದಲ್ಲಿಯೂ ಇರುವವು. 'ಬೆಟ್ಟವೇ ವಿಷ್ಣು'- ಎಂಬ ಭಾವನೆಯುಳ್ಳವರು ಕಾಲಿನಲ್ಲಿ ಕೂಡ ತುಳಿಯದೆ ಮೊಣಕಾಲಿನಿಂದ ಬೆಟ್ಟವನ್ನೇರಿ ದೇವರ ದರ್ಶನಮಾಡುವ ಸಂಪ್ರದಾಯವು ನಮ್ಮ ಭಾರತದೇಶದಲ್ಲಿದೆ. ಸುಪ್ರಸಿದ್ಧ ವೆಂಕಟಾಚಲವು ವಿಷ್ಣುವಿನ ವಾಸಸ್ಥಾನವಾಗಿದೆ. ಹೀಗೆ ವಿಷ್ಣುವನ್ನು ಪರ್ವತಾಧಿಪತಿಯಾಗಿ ಚಿಂತಿಸಿದಾಗ ಈ ಮಂತ್ರದಲ್ಲಿ ತಿಳಿಸಿರುವಂತೆ ಅವನೇ ಭೂದೇವಿಯ ಉಪಕಾರಕ್ಕಾಗಿ ಪರ್ವತ ಬೆಟ್ಟಗಳ ರೂಪದಿಂದ ನೆಲೆಸಿದ್ದು ಯಾವಾಗಲೂ ಭಕ್ತರಿಗೆ ದರ್ಶನವನ್ನು ನೀಡುತ್ತಲೇ ಇದ್ದಾನೆ. ಕೆಲವರು 'ಬೆಟ್ಟಪ್ಪ'ನೆಂಬ ಹೆಸರನ್ನೂ ಇಟ್ಟುಕೊಂಡಿದ್ದಾರೆ. ಇಂಥ ಸ್ಥಾವರ ರೂಪಿಯಾದ ವಿಷ್ಣುವಿನ ದರ್ಶನಕ್ಕೆ ಭಾವನೆಯೊಂದೇ ಸಾಕು. ಹಣ್ಣುಕಾಯಿಗಳಾಗಲಿ ಪೂಜಾರಿಯ ಕೃಪೆಯಾಗಲಿ ಸರ್ಕಾರದ ತೆರಿಗೆ ಚೀಟಿಯಾಗಲಿ ಬೇಕೇ ಇರುವದಿಲ್ಲ.

**ಉರಂ ಯಜ್ಞಾಯ ಚಕ್ರಥುರು ಲೋಕಂ ಜನಯಂತಾ ಸೂರ್ಯ ಮುಷಾಸಮಗ್ನಿಮ್ । ದಾಸಸ್ಯ ಚಿದ್ವೃಷಶಿಪ್ರಸ್ಯ ಮಾಯಾ ಜಘ್ನ ಥುರ್ನರಾ ಪೃತನಾಜ್ಯೇಷು ॥ ೩೫ ॥**

''ಎಲೈ ಇಂದ್ರಾವಿಷ್ಣುಗಳಿರಾ, ನೀವು ಯಜ್ಞಮಾಡುವ ಯಜಮಾನನಿಗೆ ವಿಸ್ತಾರವಾದ ಸ್ವರ್ಗವನ್ನು ಅಗ್ನಿ-ಉಷಃಕಾಲ-ಸೂರ್ಯನನ್ನು ಸೃಷ್ಟಿಸುವ ಮೂಲಕ ಉಂಟುಮಾಡಿದ್ದೀರಿ. 'ವೃಷಶಿಪ್ರ'ನೆಂಬ ರಾಕ್ಷಸನ ಮಾಯೆಗಳನ್ನು ಯುದ್ಧದಲ್ಲಿ ನಾಶಗೊಳಿಸಿ ದಾಸನಾದ (ಆರಾಧಕನಿಗೆ) ಉಪಕಾರಮಾಡಿರುವಿರಿ''- ಎಂದು ಈ ಮಂತ್ರದ ಅರ್ಥವು.

ಮಂತ್ರದಲ್ಲಿರುವ ಪೃತನಾಜ್ಯೇಷು- ಎಂಬ ಶಬ್ದಕ್ಕೆ ಯುದ್ಧಗಳಲ್ಲಿ ಎಂದು ಭಾಷ್ಯಕಾರರು ಅರ್ಥಮಾಡಿರುತ್ತಾರೆ. ಇಂದ್ರನೂ ವಿಷ್ಣುವೂ ದೇವತೆಗಳಲ್ಲಿ ಅಗ್ರಗಣ್ಯರು; ಮಹಾಬಲಶಾಲಿಗಳೂ ಅನ್ಯೋನ್ಯಸ್ನೇಹಿತರೂ ಆಗಿರುವರು. ರಾಕ್ಷಸರೊಡನೆ ಯುದ್ಧಮಾಡುವದು, ಸಮಯಾನುಸಾರವಾಗಿ ಪರಸ್ಪರಸಹಾಯಕ ರಾಗುವದು- ಇವು ಇಂದ್ರವಿಷ್ಣುಗಳ ಸಂಬಂಧವು. ವಾಮನಾವತಾರದಲ್ಲಿ ಇಂದ್ರನಿಗೆ ರಾಜ್ಯವನ್ನು ಕೊಡಿಸಿದ ವಿಷ್ಣುವು ಉಪೇಂದ್ರನೆನಿಸಿದನು. ವಿಷ್ಣುವು ಅಸುರರ ವೈರಿಯೆಂಬುದು ಸುಪ್ರಸಿದ್ಧವು. ಆದ್ದರಿಂದಲೇ ಯಾವ ಅಸುರರೂ ತಮ್ಮ ಇಷ್ಟಾರ್ಥಪ್ರಾಪ್ತಿಗಾಗಿ ವಿಷ್ಣುವನ್ನು ಕುರಿತು ತಪಸ್ಸುಮಾಡುವದಿಲ್ಲ. ಶಿವನನ್ನಾಗಲಿ, ಬ್ರಹ್ಮನನ್ನಾಗಲಿ ಆಶ್ರಯಿಸುತ್ತಾರೆ. ಇರಲಿ. ಆದರೆ ಅಸುರರ ಕೆಟ್ಟ ನಡೆವಳಿಕೆ ಯೇನೆಂದರೆ ಸರ್ವಲೋಕಗಳ ಆಧಿಪತ್ಯವೂ ಐಶ್ವರ್ಯವೂ ಭೋಗಗಳೂ ತಮಗೆ ಮಾತ್ರವೇ ದಕ್ಕಬೇಕೆಂಬ ದುರಾಶೆಯೂ ಅದಕ್ಕಾಗಿ ಅಧರ್ಮಪರರಾಗಿರುವದೂ ಆಗಿದೆ. ಸ್ಥಿತಿಕಾರಕನಾದ ವಿಷ್ಣುವು ಸೃಷ್ಟಿಯಲ್ಲಿ ಸರ್ವಪ್ರಾಣಿಗಳೂ ತಮ್ಮ ತಮ್ಮ ಸ್ಥಾನಗಳಲ್ಲಿ ಬದುಕಬೇಕೆಂಬ ಸಮದೃಷ್ಟಿಯವನಾದ್ದರಿಂದ ಅಸುರರ ಈ ಚರ್ಯೆಯನ್ನು ಸಹಿಸುವದಿಲ್ಲ. ಆದ್ದರಿಂದ ರಾಕ್ಷಸರೊಡನೆ ಕಾದಾಡುತ್ತಾನೆ. ಎಲ್ಲಾ ಕಾಲಕ್ಕೂ ದೇವತೆಗಳೂ ಅಸುರರೂ ಇದ್ದೇ ಇರುವರು. ಈ ಮಂತ್ರದಲ್ಲಿ ತಿಳಿಸಿರುವಂತೆ ಇಂದ್ರಾವಿಷ್ಣುಗಳು ಲೋಕಕಲ್ಯಾಣಕ್ಕಾಗಿ ಅಗ್ನಿಯನ್ನೂ, ಉಷಃ ಕಾಲದೇವತೆಯನ್ನೂ ಸೂರ್ಯನನ್ನೂ 'ವೃಷಶಿಪ್ರ'ನೆಂಬ ರಾಕ್ಷಸನ ಬಂಧನದಿಂದ ಬಿಡಿಸಿ ಅವರುಗಳು ತಲೆಯೆತ್ತುವಂತೆ ಮಾಡಿದರು. ಅವನ ಮಾಯೆಗಳನ್ನೆಲ್ಲ ನಾಶಮಾಡಿದರು. ಈ ಕಾರ್ಯವನ್ನು ಅವರು ಕೈಗೊಳ್ಳದೆ ಹೋಗಿದ್ದರೆ ಪ್ರಪಂಚ ದಲ್ಲಿ ಅಗ್ನಿಸೂರ್ಯರುಗಳೇ ಇಲ್ಲದಂತಾಗಿ ಯಾವ ವೈದಿಕಕರ್ಮಗಳನ್ನೂ ಮಾಡಲಾಗುತ್ತಿರಲಿಲ್ಲ.

ಈಗಿನ ಕಾಲಕ್ಕೂ ರಾಕ್ಷಸರು ಕಣ್ಣಿಗೆ ಕಾಣಿಸಿಕೊಳ್ಳದಿದ್ದರೂ ಆಸುರೀ ಮಾಯೆಯ ಹರಡುವಿಕೆಗೇನೂ ಕೊರತೆಯಾಗಿಲ್ಲ. ಹಿಂದೆ ರಾಕ್ಷಸನ ಮಾಯೆಯಲ್ಲಿ ಸೂರ್ಯಾಗ್ನಿಗಳು ಸಿಕ್ಕಿಬಿದ್ದಿದ್ದಂತೆಯೇ ವಿಜ್ಞಾನವು ಸೃಷ್ಟಿಸಿರುವ 'ಆಧುನಿಕ ನಾಗರಿಕತೆ'ಯೆಂಬ ಮಾಯೆಯಲ್ಲಿ ಈಗಲೂ ಎಲ್ಲಾ ಮೇಧಾವಿಗಳೂ ಸಾಧಕರೂ ನಾಗರಿಕರೂ ಸಿಕ್ಕಿಬಿದ್ದಿದ್ದಾರೆ. ಉದಾಹರಣೆಗೆ ಈಗ ನಡೆಯುತ್ತಿರುವ ಗಣಪತಿಯ ಉತ್ಸವಗಳಲ್ಲಿ ಆ ಭಗವಂತನ ಪೂಜೆ, ಸ್ತೋತ್ರಪಾಠ, ವ್ರತನಿಯಮಗಳಿಗಿಂತ -

ಲಘುಸಂಗೀತ, ನಾಟಕ, ಕುಣಿತ, ಆರ್ಕೆಸ್ಟ್ರಾ, ಲಾಟರಿ, ಮೈಕಾಸುರನ ಆರ್ಭಟಗಳೇ ಅತಿಯಾಗಿರುವಂತೆ - ಸದಾಚಾರಗಳು ಲೋಪವಾಗಿ ದುರಾಚಾರ, ಭ್ರಷ್ಟಾಚಾರಗಳೇ ನಮ್ಮ ಸುತ್ತುವಳೆಯವನ್ನೆಲ್ಲ ವ್ಯಾಪಿಸಿವೆ. ಈ ದಾವಾಗ್ನಿಯಿಂದ ಪಾರಾಗಲು ಭಗವಂತನಾದ ಮಹಾವಿಷ್ಣುವನ್ನೇ ನಾವು ಮೊರೆಹೋಗಬೇಕು.

**ಇಂದ್ರಾವಿಷ್ಣೂ ದೃಂಹಿತಾಃ ಶಂಬರಸ್ಯ ನವ ಪುರೋ ನವತಿಂ ಚ ಶ್ನಥಿಷ್ಟಮ್ ।**
**ಶತಂ ವರ್ಚಿನಃ ಸಹಸ್ರಂ ಚ ಸಾಕಂ ಹಥೋ ಅಪ್ರತ್ಯಸುರಸ್ಯ ವೀರಾನ್ ॥ ೩೬ ॥**

'ಎಲೈ ಇಂದ್ರಾವಿಷ್ಣುಗಳಿರಾ, ನೀವು ದೃಢವಾದ ನಿಲುವನ್ನು ಹೊಂದಿದವರಾಗಿ ತೊಂಭತ್ತೊಂಭತ್ತು ಸಂಖ್ಯೆಯ ಶಂಬರಾಸುರನ ಪುರಗಳನ್ನು ನಾಶಗೊಳಿಸಿದಿರಿ. ಮತ್ತು ನೂರುಸಾವಿರಸಂಖ್ಯೆಯ ವೀರರಾದ ಎದುರಾಳಿಗಳಿಲ್ಲದಂಥ ಅಸುರರನ್ನು- ಗುಂಪುಗುಂಪಾಗಿಯೇ ತೊಡೆದುಹಾಕಿದ್ದೀರಿ' ಎಂದು ಈ ಮಂತ್ರದ ಅರ್ಥವು.

ಇಲ್ಲಿ ಇಂದ್ರವಿಷ್ಣುಗಳಿಬ್ಬರನ್ನೂ ಆಸುರೀಮಾಯೆಯ ಸಂಹಾರಕರೆಂದು ಸ್ತುತಿಸಲಾಗಿದೆ. ರಾಕ್ಷಸರಲ್ಲಿ ಶಂಬರನೆಂಬವನು ಪ್ರಧಾನನು. ಆತನು ಮಾಯೆಗಳನ್ನು ಹರಡುವದರಲ್ಲಿ ಅತಿ ಪ್ರವೀಣನು. ಆದ್ದರಿದಂಲೇ ದೇವತೆಗಳಿಗೆ ಅವನನ್ನು ಗೆಲ್ಲುವದು ಕಷ್ಟವಾಗಿಬಿಟ್ಟಿತು. ಶತ್ರುವು ಎದುರಿಗೇ ಬಂದರೆ ಧೈರ್ಯಪರಾಕ್ರಮಗಳಿಂದ ಹಿಮ್ಮೆಟ್ಟಿಸಬಹುದು. ಆದರೆ ವಂಚನೆ, ಮೋಸಗಳಿಂದ ಎದುರುಬಿದ್ದರೆ ಎಂಥ ಬಲಶಾಲಿಯಾದರೂ ಏನು ಮಾಡಲಾದೀತು ? ಈಗಿನ ಕಾಲಕ್ಕೂ ಶಂಬರನ ಅನುಯಾಯಿಗಳು ಬಹಳ ಜನರಿದ್ದಾರೆ. ಪ್ರಯಾಣಕಾಲಕ್ಕೆ ನಮ್ಮೊಡನೆಯೇ ಕುಳಿತು ಸಲುಗೆಯಿಂದ ಮಾತನಾಡುತ್ತಾ ನಿಮ್ಮ ವಿಚಾರಗಳನ್ನೆಲ್ಲ ತಿಳಿದುಕೊಳ್ಳುತ್ತಾ ಆಪ್ತನಂತೆ ನಟಿಸಿ ಸಹಾಯಮಾಡುವದಾಗಿಯೂ ಹೇಳಿ ಕಡೆಯಲ್ಲಿ ಗಂಟನ್ನೇ ಹೊಡೆದುಕೊಂಡು ಹೋಗುವ ಶಂಬರಪರಂಪರೆಯುವರು ಎಷ್ಟು ಜನರಿಲ್ಲ ? ಇಂಥ ಧೂರ್ತರನ್ನೆಲ್ಲ ಇಂದ್ರಾವಿಷ್ಣುಗಳಿಬ್ಬರೂ ಸೇರಿ ಆಗಾಗ್ಗೆ ನಾಶಗೊಳಿಸುತ್ತಲೇ ಇದ್ದಾರೆ. ಬಹಳಮಟ್ಟಿಗೆ ಎಂದರೆ ಶೇಕಡ ತೊಂಭತ್ತೊಂಭತ್ತು ಮಂದಿಯನ್ನೂ ಅವರ ಮಾಯೆಗಳನ್ನೂ ಸಂಹಾರಮಾಡಿದ್ದಾರೆ. ಇಲ್ಲವಾದಲ್ಲಿ ನಾವು ಈಗಿರುವಷ್ಟು ಮಟ್ಟಿಗೂ ಬಾಳಲಾಗುತ್ತಿರಲಿಲ್ಲ. ಈಗಲೂ ನೂರಕ್ಕೆ ತೊಂಭತ್ತೊಂಭತ್ತು ಜನ ನಂಬಿಕಸ್ಥರು ಸಿಗುತ್ತಾರೆ. ಇದಕ್ಕೆ ಕಾರಣವೇನಂದರೆ :

ಇಂದ್ರವಿಷ್ಣುಗಳ ಪ್ರಭಾವವು. ಹೀಗೆ ಜಗತ್ತಿನ ರಕ್ಷಣೆಗಾಗಿ ಇಂದ್ರವಿಷ್ಣುಗಳು ಅಸುರರ ಪುರಗಳನ್ನೂ ಪರಿವಾರವನ್ನೂ ಕಡಿದುಹಾಕಿರುತ್ತಾರಲ್ಲದೆ ಸಮಯಾನುಸಾರವಾಗಿ ರಾಕ್ಷಸರ ಗುಂಪುಗುಂಪುಗಳನ್ನೇ ನಿರ್ನಾಮಮಾಡಿರುವದೂ ಉಂಟು. ಆದ್ದರಿಂದ ನಾವು ಸಾತ್ತ್ವಿಕರಾಗಿ ಬಾಳಬೇಕೇ ಹೊರತು ಆಸುರೀಸಂಪತ್ತನ್ನಾಶ್ರಯಿಸಿ ಇಂದ್ರವಿಷ್ಣುಗಳ ಕೋಪಕ್ಕೆ ಪಾತ್ರರಾಗಬಾರದು. ಎಂದಾದರೊಂದುದಿನ ಆಸುರೀ ಗುಣಗಳಿಗೆ ಅಪಾಯವುಂಟು. ದೇವತೆಗಳು ಎಂದೆಂದಿಗೂ ಆಸುರೀಸಂಪತ್ತನ್ನು ಸಹಿಸುವದಿಲ್ಲ. ಅಷ್ಟೇ ಅಲ್ಲ. ಜಯವು ಕಟ್ಟ ಕಡೆಯಲ್ಲಿ ದೈವೀಸಂಪತ್ತಿಗೇ ಆಗುತ್ತದೆ. ಧರ್ಮಕ್ಕೆ ವಿಜಯವಾಗುತ್ತದೆ. ಅನಾದಿಕಾಲದಿಂದ ನಡೆದುಬಂದಿರುವ ಕ್ರಮವೇ ಹೀಗಿರುತ್ತದೆ. ಈ ರೀತಿಯಲ್ಲಿ ದೇವಶ್ರೇಷ್ಠರಾದ ಇಂದ್ರವಿಷ್ಣುಗಳನ್ನು ಇಲ್ಲಿ ಸ್ತುತಿಸಲಾಗಿದೆ.

**ಇಯಂ ಮನೀಷಾ ಬೃಹತೀ ಬೃಹಂತೋರುಕ್ರಮಾ ತವಸಾ ವರ್ಧಯಂತೀ । ರರೇ ವಾಂ ಸ್ತೋಮಂ ವಿದಥೇಷು ವಿಷ್ಣೋ ಪಿನ್ವತಮಿಷೋ ವೃಜನೇಷ್ವಿಂದ್ರ ॥ ೩೭ ॥**

"ಎಲೈ ವಿಷ್ಣುವೆ, ಇಂದ್ರನೆ, ಬಹಳ ದೊಡ್ಡದಾದ ಈ ಮನನೀಯವಾದ ಸ್ತುತಿಯು ಉರುಕ್ರಮರಾದ ನಿಮ್ಮಿಬ್ಬರ ಬಲವನ್ನು ವೃದ್ಧಿಗೊಳಿಸುವದಾಗಿರುವದು. ಇನ್ನು ಯಜ್ಞಗಳಲ್ಲಿ ನಿಮ್ಮನ್ನು ಕುರಿತು ಈ ಸ್ತೋತ್ರಗಳು ನಮ್ಮಿಂದ ಪಠಿಸಲ್ಪಟ್ಟಿದ್ದರಿಂದ ನೀವು ನಮ್ಮಗಳಿಗೆ ಅನ್ನವನ್ನು ಅಭಿವೃದ್ಧಿಗೊಳಿಸುವವರಾಗಿರಿ" ಎಂದು ಈ ಮಂತ್ರದ ಅರ್ಥ.

ಸ್ತೋತ್ರವು ಎಂಥವರಿಗೂ ಮೆಚ್ಚಾಗಿರುವದು. ಕೆಲವು ಸಮಯಗಳಲ್ಲಿ ಮಾನವನಲ್ಲಿ ಅಡಗಿರುವ ದೇವತ್ವವನ್ನೂ ಅಪಾರಶಕ್ತಿಯನ್ನೂ ಹೊರಡಿಸುವದಕ್ಕೂ ಸ್ತೋತ್ರಗಳು ಸಹಾಯಕವಾಗುವವು. ಆದರೆ ಹೊಗಳುವವರು ಮಾತ್ರ ಸತ್ಯವಂತರಾಗಿದ್ದು ಇರತಕ್ಕ ಗುಣಗಳನ್ನೇ ಹೊಗಳಬೇಕು. ಈಗಿನ ಕಾಲಕ್ಕೆ ಇಂಥವರು ಅಪರೂಪವೇ ಸರಿ. ಏಕೆಂದರೆ ಹೆಚ್ಚಿನ ಜನರು ಆಸುರೀಸಂಪತ್ತಿನವರಾಗಿದ್ದು ಅಸೂಯಾದಂಭದರ್ಪಾಭಿಮಾನಗಳಿಂದ ಕೂಡಿರುವವರಾಗಿರುವದರಿಂದ ಅವರಿಗೆ ಬೇರೊಬ್ಬರ ವಿಷಯಕ್ಕೆ ಸಹನೆಯೇ ಇರುವದಿಲ್ಲ. ಹೀಗಿರುವಲ್ಲಿ ಅಂಥವರಿಗೆ ಬೇರೊಬ್ಬರ ಗುಣಗಳು ತಿಳಿಯಬರುವದಾದರೂ ಹೇಗೆ ? ಹಾಗೆ

ತಿಳಿಯಬಾರದೆ ಇರುವಾಗ ಹೊಗಳುವದಾದರೂ ಹೇಗೆ ಸಾಧ್ಯ ? ಆದ್ದರಿಂದಲೇ ಜಗತ್ತಿನಲ್ಲಿ ನಿಂದಕರೇ ಹೆಚ್ಚು. ಸ್ತುತಿಪಾಠಕರು ತೀರ ಕಡಿಮೆ. ಇದರಿಂದ ಜಗತ್ತಿಗೆ ಬಹಳ ನಷ್ಟವಾಗುತ್ತಿದೆ. ಗುಣವಂತರೂ ಶೀಲವಂತರೂ ನಾಚಿಕೊಂಡು ಕಾರ್ಯಕ್ಷೇತ್ರಗಳಲ್ಲಿ ಸುಮ್ಮನೆ ಇದ್ದುಕೊಂಡಿರಲು ಹವಣಿಸಿದ್ದಾರೆ. ಧೂರ್ತರೂ ಅಹಂಕಾರಿಗಳೂ ಮುನ್ನುಗ್ಗಿ-ಎಂಥೆಂಥ ಸತ್ಕಾರ್ಯಗಳನ್ನೆಲ್ಲ ಹಾಳುಮಾಡುತ್ತಿದ್ದಾರೆ ಆದ್ದರಿಂದ ಈ ಕೂಡಲೆ ನಾವು ಬೇರೊಬ್ಬರ ಗುಣವಿಶೇಷಗಳನ್ನೇ ಹುಡುಕಿ ಸ್ತುತಿಸುವದನ್ನು ಕಲಿಯಬೇಕು. ಋಷಿಗಳು ಇಲ್ಲಿ ತಿಳಿಸುವದೇನೆಂದರೆ : ಇಂದ್ರ ವಿಷ್ಣುಗಳನ್ನು ಹೆಚ್ಚುಹೆಚ್ಚಾಗಿ ಸ್ತುತಿಮಾಡಲೇಬೇಕು. ಏಕೆಂದರೆ ಅವರುಗಳು ನಿರ್ವಹಿಸುತ್ತಿರುವ ಲೋಕಗಳ ಸ್ಥಿತಿಕಾರ್ಯವು ಗುರುತರವಾದದ್ದು ಮತ್ತು ಪ್ರಶಂಸನೀಯವಾದದ್ದೂ ಆಗಿದೆ. ಪ್ರಪಂಚದಲ್ಲಿ ಯಾವ ಯುಗದಲ್ಲಾಗಲಿ, ಯಾವದೇ ದೇವಾಂಶಪುರುಷನಾದ ಮನುಷ್ಯನಿಂದ ಒಂದು ಅದ್ಭುತಕಾರ್ಯವು ಲೋಕಕ್ಷೇಮಕ್ಕಾಗಿ ಮಾಡಲ್ಪಟ್ಟರೆ ಅಂಥವನನ್ನು ಹೊಗಳಲೇಬೇಕು. ಇದು ಸಾತ್ತ್ವಿಕರಾದ ಋಷಿಗಳ ನಿಲುವಾಗಿದೆ. ಉದಾಹರಣೆಗೆ ತ್ರೇತಾಯುಗದಲ್ಲಿ ಶ್ರೀರಾಮನು ಅವತಾರಮಾಡಿ ರಾವಣನನ್ನು ಕೊಂದಾಗ ಬ್ರಹ್ಮಾದಿದೇವತೆಗಳು ಕೂಡ ಬಂದು ರಾಮನನ್ನು ಹೊಗಳಿದರು. ಅವನನ್ನು ನಾರಾಯಣನೆಂದೇ ಸ್ತೋತ್ರಮಾಡಿದರು. ಆದ್ದರಿಂದ ಇಂದ್ರ ವಿಷ್ಣುಗಳನ್ನು ಕುರಿತ ಸ್ತುತಿಯು ಎಷ್ಟೇ ದೊಡ್ಡದಾಗಿದ್ದರೂ ಗ್ರಾಹ್ಯವೇ ಸರಿ. ನಾವುಗಳು ಕೂಡ ಈ ಸ್ತುತಿರೂಪವಾದ ಸಾಧನವನ್ನು ಆಶ್ರಯಿಸಬೇಕು. ಯಾರಾದರೊಬ್ಬ ಮನುಷ್ಯನನ್ನು ಹೊಗಳಿದರೆ ಕೆಲವರಿಗೆ ಹಿಡಿಸುವದಿಲ್ಲ. ಇದಕ್ಕೆ ಕಾರಣವೇನೆಂದರೆ ಅವರು ಆ ಮನುಷ್ಯನ ದೌರ್ಬಲ್ಯಗಳನ್ನು ಮಾತ್ರ ಮನಸ್ಸಿಗೆ ತಂದುಕೊಳ್ಳುವರೇ ಹೊರತು ಗುಣಾಂಶ ಗಳನ್ನು ಗ್ರಹಿಸಿರುವದಿಲ್ಲ. ಆದರೆ ಎಲ್ಲಾ ವ್ಯಕ್ತಿಗಳಲ್ಲಿಯೂ ಹುಡುಕಿದರೆ ಏನಾದರೊಂದು ಗುಣಾಂಶವು ಸಿಕ್ಕಿಯೇ ತೀರುತ್ತದೆ. ಹೀಗೆ ಗುಣಗ್ರಾಹಿಯಾಗಿ ಬಾಳಬೇಕಾಗಿರುವ ಮನುಷ್ಯನು ದೋಷಗ್ರಾಹಿಯಾಗಿ ಬಾಳುತ್ತಿರುವದೇ ಅವನತಿಗೆ ಕಾರಣವಾಗಿರುತ್ತದೆ. ಈ ದೋಷವನ್ನು ತಿದ್ದಿಕೊಳ್ಳಬೇಕಾದರೆ ಮೊದಲು ನಾವು ಭಗವಂತನನ್ನಾದರೂ ಚೆನ್ನಾಗಿ ಹೊಗಳುವದನ್ನು ಕಲಿಯಬೇಕು. ಹೀಗೆ ಸ್ತುತಿಸುವದರಿಂದ ಇಂದ್ರವಿಷ್ಣುಗಳ ರೂಪದಿಂದಲೂ ತಾನೇ ಇದ್ದುಕೊಂಡಿರುವ ಭಗವಂತನು ನಮ್ಮನ್ನು ಉದ್ಧಾರಮಾಡಿಯೇ ತೀರುವನು. ಯಜ್ಞಕಾಲಕ್ಕೆ

ಸ್ತುತಿಸಲ್ಪಟ್ಟ ಈ ಇಂದ್ರವಿಷ್ಣುಗಳು ಯಜಮಾನನಿಗೂ ಉಳಿದವರಿಗೂ ಅನ್ನ ಸಮೃದ್ಧಿಯೇ ಮುಂತಾದ ಸತ್ಫಲಗಳನ್ನು ನೀಡುವರು. ಹಾಗೆ ಆಗಲೆಂದೇ ಇಲ್ಲಿ ಪ್ರಾರ್ಥಿಸಲಾಗಿದೆ.

**ವಷಟ್ ತೇ ವಿಷ್ಣವಾಸ ಆ ಕೃಣೋಮಿ ತನ್ಮೇ ಜುಷಸ್ವ ಶಿಪಿವಿಷ್ಟ ಹವ್ಯಮ್ ।**
**ವರ್ಧಂತು ತ್ವಾ ಸುಷ್ಟುತಯೋ ಗಿರೋ ಮೇ ಯೂಯಂ ಪಾತ ಸ್ವಸ್ತಿಭಿಃ ಸದಾ ನಃ ॥ ೩೮ ॥**

''ಎಲೈ ವಿಷ್ಣುವೆ, ನಿನಗೆ ಎದುರಾಗಿ ವಷಟ್‌ಕಾರದಿಂದ ಹವಿಸ್ಸನ್ನು ಹೋಮಮಾಡುವೆನು. ಎಲೈ ರಶ್ಮಿಮಂತನೆ, ನೀನು ಹವಿಸ್ಸನ್ನು ಸ್ವೀಕರಿಸುವವ ನಾಗು. ಶೋಭನವಾದ ಸ್ತುತಿರೂಪವಾದ ವಾಕ್ಕುಗಳು ನಿನ್ನನ್ನು ಉತ್ಸಾಹಗೊಳಿಸಲಿ! ನೀವುಗಳು ಯಾವಾಗಲೂ ಶುಭಪರಂಪರೆಗಳಿಂದ ನಮ್ಮನ್ನು ಕಾಪಾಡಿರಿ'' ಎಂದು ಈ ಮಂತ್ರದ ಅರ್ಥ.

ಯಜ್ಞದಲ್ಲಿ ವಷಟ್ ಎಂಬ ಶಬ್ದದಿಂದ ಹವಿರ್ದಾನಮಾಡುವ ಕ್ರಮವಿದೆ. ಹದಿನೇಳು ಅಕ್ಷರಗಳಿಂದ ಮಹಾವಿಷ್ಣುವು ಯಜ್ಞದಲ್ಲಿ ಕರೆಯಲ್ಪಟ್ಟು ಹವಿರ್ಭಾಗವನ್ನು ಸ್ವೀಕರಿಸುವನೆಂದು ತಿಳಿಸುವ ಒಂದು ಪದ್ಯವು ಮಹಾಭಾರತ ದಲ್ಲಿದೆ. ಅದನ್ನು ಶ್ರಾದ್ಧಕಾಲದಲ್ಲಿ ವೈದಿಕರು ಪಠಿಸುತ್ತಾರೆ. ''ಆಶ್ರಾವಯ-ಅಸ್ತುಶ್ರೌಷಟ್-ಯಜ-ಯೇ ಯಜಾಮಹೇ-ವೌಷಟ್'' ಎಂಬಿದೇ ಈ ಹವಿರ್ದಾನಮಂತ್ರವು. ಇದು ೪+೪+೨+೫+೨- ಹೀಗೆ ಹದಿನೇಳಕ್ಷರಗಳಿಂದ ಕೂಡಿದೆ. ಈ ಅಕ್ಷರಗಳೆಲ್ಲಕ್ಕೂ ವಿಷ್ಣುವೇ ವಾಚ್ಯನಾಗಿರುವನು. ಆದ್ದರಿಂದ ಈ ಮಂತ್ರದಲ್ಲಿ ವೌಷಟ್ ಎಂಬಿದನ್ನೇ ವಷಟ್ ಎಂದು ಉಚ್ಚರಿಸಿ ಹವಿರ್ದಾನವನ್ನು ದೇವತೆಯ ಸಮಕ್ಷಮದಲ್ಲಿಯೇ ಮಾಡುತ್ತಿರುವದಾಗಿ ಪ್ರಸ್ತಾಪಿಸಿದೆ. ಹೀಗೆ ಹೋಮಮಾಡಲ್ಪಟ್ಟರೆ ಅದು ವಿಷ್ಣುವಿಗೇ ಸೇರುವದು. ಆದರೂ ಮತ್ತೊಮ್ಮೆ ಆದರಾರ್ಥವಾಗಿ 'ಹೇ ವಿಷ್ಣೋ, ಆ ಹವಿರ್ಭಾಗವನ್ನು ಸ್ವೀಕರಿಸುವವನಾಗು' ಎಂದು ಕೇಳಿಕೊಳ್ಳಲಾಗಿದೆ. ಲೌಕಿಕವ್ಯವಹಾರದಲ್ಲಿಯೂ ಹೀಗೆ ಉಂಟು. ಊಟಕ್ಕಾಗಿಯೇ ಕರೆಯಲ್ಪಟ್ಟು ಎಲೆಯ ಮುಂದೆ ಕುಳಿತಿರುವವರನ್ನು ಎಲ್ಲವನ್ನೂ ಬಡಿಸಿದ ಮೇಲೆ ಮತ್ತೆ 'ಸ್ವೀಕರಿಸಬೇಕು'- ಎಂದು ಯಜಮಾನನು ಕೇಳಿಕೊಳ್ಳು ತ್ತಾನೆ. ಇದು ಉಪಚಾರದ ಕ್ರಮವಾಗಿದೆ. ಆದರೆ ಹವಿರ್ಭಾಗವೆಲ್ಲವೂ ಅಗ್ನಿ ಯಲ್ಲಿಯೇ ಹೋಮಮಾಡಲ್ಪಡುತ್ತದೆ. ದೇವತೆಗಳು ಮನುಷ್ಯರಂತೆ ಹಲ್ಲುಬಾಯಿ

ಗಳನ್ನು ಉಪಯೋಗಿಸಿಕೊಂಡು ತಿನ್ನುವದಿಲ್ಲ. ಅವರು ಕಣ್ಣಿನಿಂದ ನೋಡಿ ತೃಪ್ತ ರಾಗಿಬಿಡುತ್ತಾರೆ. ಅನಂತರ ಅಗ್ನಿಯು ಭಕ್ಷಿಸುತ್ತಾನೆ. ಹೀಗೆ ಮಂತ್ರಪ್ರಿಯರಾದ ದೇವತೆಗಳು ಸ್ತುತಿಶ್ರವಣ, ಹವಿರ್ದರ್ಶನಗಳಿಂದ ಆರಾಧಿಸಲ್ಪಡುತ್ತಾರೆ. ಪ್ರಕೃತ ಈ ಮಂತ್ರದಲ್ಲಿ ವಿಷ್ಣುವನ್ನು ಈ ರೀತಿಯಾಗಿ ಆರಾಧಿಸಲಾಗಿದೆ.

ಈಗ ಈ ಮಂತ್ರದ್ರಷ್ಟಾರನಾದ ಋಷಿಯು ಮುಂದುವರೆದು ಹೀಗೆ ಪ್ರಾರ್ಥಿಸುತ್ತಿದ್ದಾನೆ. 'ಎಲೈ ವಿಷ್ಣುವೆ, ನಿನ್ನ ಸ್ತುತಿರೂಪವಾದ ಮಾತುಗಳು ಹೆಚ್ಚಲಿ!'- ಎಂಬುದು ಅವನ ಬಯಕೆಯಾಗಿದೆ. ಮನುಷ್ಯನು ಯಾವಾಗಲೂ ವ್ಯರ್ಥವಾದ ಮಾತುಗಳನ್ನೇ ಹೆಚ್ಚಾಗಿ ಆಡುತ್ತಾನೆ. ಅದನ್ನು ಬಿಡಬೇಕೆಂದೂ ಭಗವತ್ಸಂಬಂಧವಾದ ಮಾತುಗಳನ್ನೇ ಆಡಬೇಕೆಂದೂ ಉಪನಿಷತ್ತಿನಲ್ಲಿ ತಿಳಿಸಿರುತ್ತದೆ. ವೇದವೊಂದರಲ್ಲಿ ಮಾತ್ರವೇ ವ್ಯರ್ಥನುಡಿಗಳಿರುವದಿಲ್ಲ. ಆದ್ದರಿಂದಲೇ ಬಲ್ಲವರು ಯಾವಾಗಲೂ ವೇದಪಠನಮಾಡುತ್ತಿರುವರು. ವೇದದ ಒಂದೊಂದು ಅಕ್ಷರವನ್ನು ಪಠಿಸಿದಾಗಲೂ ಒಂದೊಂದು ಹರಿನಾಮವನ್ನು ಕೀರ್ತನೆಮಾಡಿದಂತಾಗುತ್ತದೆ-ಎಂದೇ ಸ್ಮೃತಿಗಳಲ್ಲಿದೆ. ವೇದಗಳನ್ನು ಪಠಿಸಿದಂತೆಲ್ಲ ಮಾತುಗಳು ಪರಿಶುದ್ಧವಾಗುವವು. ಕೆಟ್ಟಮಾತುಗಳು ಆಗ ಹೊರಡಲಾರವು. ಆದ್ದರಿಂದ ವಿಷ್ಣುಸ್ತುತಿಗಳು ಸ್ವಭಾವವಾಗಿಯೇ ಅಭಿವೃದ್ಧಿಗೊಳ್ಳುವವು. ವೇದಾಧ್ಯಯನವೆಂಬುದು ವಾಙ್ಮಯತಪಸ್ಸೆಂದೇ ಗೀತೆಯಲ್ಲಿ ಹೇಳಲ್ಪಟ್ಟಿದೆ. ಹೀಗೆ ಸ್ತುತಿಮಾಡುತ್ತಿರುವಲ್ಲಿ ವಿಷ್ಣುವು ಪ್ರಸನ್ನನಾಗಿಯೇ ತೀರುವನು. ಅವನನ್ನೂ ಅವನ ಪರಿವಾರ ದೇವತೆಗಳನ್ನೂ ಒಟ್ಟುಗೂಡಿಸಿ ''ನೀವುಗಳು ನಮ್ಮನ್ನು ಕಾಪಾಡಿರಿ'' ಎಂದು ಇಲ್ಲಿ ಕೇಳಿಕೊಳ್ಳಲಾಗಿದೆ. ಈಗಿನ ವೈದಿಕರುಗಳು ಇಂಥ ಮಂತ್ರಗಳನ್ನು ಹೇಳುತ್ತಾರಾದರೂ ಇವುಗಳ ಅರ್ಥವು ಅವರಿಗೆ ತಿಳಿದಿರಲಾರದು. ತಿಳಿದಿದ್ದರೆ ಅವರು ತಮ್ಮ ಬಾಯಿಂದ ಎಂದಿಗೂ ವ್ಯರ್ಥವಾದ ಮಾತುಗಳನ್ನು ಹೊರಹಾಕರು. ವೇದಮೂರ್ತಿಗಳ ವಿಷಯಕ್ಕೆ ಈಗಲೂ ಜನರು ಗೌರವವನ್ನೇ ಕೊಡುತ್ತಾರೆ. ವೇದಸ್ತುತ್ಯನಾದ ಶ್ರೀಮಹಾವಿಷ್ಣುವು ಸಂತುಷ್ಟನಾಗಿಬಿಟ್ಟರೆ ಅವನು ನಮಗೆ ಎಲ್ಲಾ ವಿಧವಾದ ಮಂಗಳವನ್ನೂ ಉಂಟುಮಾಡಿ ಕಾಪಾಡುವನು. ಆತನ ದಯೆಯಿಂದ ಇಹಪರಸೌಖ್ಯಗಳೆಲ್ಲವೂ ದೊರಕುವವು. ಆದ್ದರಿಂದ ಅವನನ್ನೇ ಸ್ತುತಿಸುವ ವೇದಗಳಿಗೂ ವೇದಪಾಠಕರಿಗೂ ಮಂಗಳವಾಗಲಿ !

**ನೂ ಮರ್ತೋದಯತೇ ಸನಿಷ್ಯನ್ ಯೋ ವಿಷ್ಣವ ಉರುಗಾಯಾಯ ದಾಶತ್ । ಪ್ರಯಃ ಸತ್ರಾಚಾ ಮನಸಾ ಯಜಾತ ಏತಾವಂತಂ ನರ್ಯಮಾ ವಿವಾಸಾತ್ ॥೩೯॥**

''ಬಹಳವಾಗಿ ಸ್ತುತಿಸಲ್ಪಡುವ ವಿಷ್ಣುವಿಗೆ ಯಾವ ಮನುಷ್ಯನು ಧನವನ್ನು ಬಯಸುವವನಾಗಿ ಹವಿಸ್ಸುಗಳನ್ನು ಅರ್ಪಿಸುವನೋ ಅಂಥವನು ಕ್ಷಿಪ್ರವಾಗಿ (ಧನವನ್ನು ಹೊಂದುವನು); ಮತ್ತು ಯಾವನು ಮನಃಪೂರ್ವಕವಾಗಿ ಸ್ತೋತ್ರಮಾಡುತ್ತಾ ವಿಶೇಷವಾಗಿ ನರರಿಗೆ ಹಿತವನ್ನುಂಟುಮಾಡುವ (ವಿಷ್ಣುವನ್ನು) ಪೂಜಿಸುವನೋ ಅವನು ಸಹ ಬಹುದೊಡ್ಡ ಪರಿಮಾಣದ ಐಶ್ವರ್ಯವನ್ನು ಪಡೆದುಕೊಳ್ಳುವನು''- ಎಂದು ಈ ಮಂತ್ರದ ಸರಳವಾದ ಅರ್ಥವು. ಮಹಾ ವಿಷ್ಣುವು ಲಕ್ಷ್ಮೀಪತಿಯೆಂಬುದು ಪ್ರಸಿದ್ಧವು. ಕುಬೇರನು ಲಕ್ಷ್ಮೀಪುತ್ರನು. ಪುತ್ರ ನಾದವನಿಗೆ ತಾಯಿಯನ್ನು ಕಾಪಾಡುವದಷ್ಟೇ ಕೆಲಸವಾಗಿರುತ್ತದೆ. ಲೋಕದಲ್ಲಿರುವ ಬಹಳಜನ ಧನವಂತರು ಕುಬೇರರು ಮಾತ್ರವೇ ಆಗಿದ್ದಾರೆ. ಅಂಥವರಿಗೆ ಹಣಕ್ಕೆ ಹಣವನ್ನು ಕೂಡಿಸುವದು ತಿಳಿದಿದೆಯೇ ಹೊರತು ಅದನ್ನು ವಿನಿಯೋಗಮಾಡಿ ತಾವೂ ಸುಖಪಟ್ಟು ಇತರರನ್ನೂ ಸುಖಗೊಳಿಸುವ ವಿಧಾನವು ಗೊತ್ತಿರುವದಿಲ್ಲ. ಇಂಥ ಧನಾಭಿಮಾನವು ಯಾವ ಪುರುಷಾರ್ಥವನ್ನೂ ನೀಡಲಾರದು. ಆದರೆ ಮಾನವನು ವಿಷ್ಣುವಾಗಬೇಕು. ಆಗ ಅವನಿಗೆ ಧನವನ್ನೂ ಐಶ್ವರ್ಯವನ್ನೂ ಭೋಗಿಸುವ ಅಧಿಕಾರವು ದೊರಕುತ್ತದೆ. ಈಗಲೂ ಕೆಲವರು ಹಣವನ್ನು ನೀರಿನಂತೆ ಚೆಲ್ಲಬಹುದು. ಆದರೆ ಅದು ಸದ್ವಿನಿಯೋಗಕ್ಕಲ್ಲ. ಅಂಥ ಖರ್ಚುವೆಚ್ಚಗಳು ಅವರಿಗೆ ದುಃಖವನ್ನೂ ದುರಭಿಮಾನವನ್ನೂ ಅನಾರೋಗ್ಯ ವನ್ನೂ ಉಂಟುಮಾಡುವವು. ಇದೇನೂ ವಿಷ್ಣುತ್ವವನ್ನು ಪಡೆದ ಗುರುತಲ್ಲ. ವಿಷ್ಣುವು ಲಕ್ಷ್ಮಿಯನ್ನು ಹೇಗೆ ಅನುಭವಿಸುತ್ತಾನೆಂಬುದನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಆತನು ತನ್ನ ಸಕಲಕಲ್ಯಾಣಗುಣಗಳಿಂದ ಆಕೆಗೆ ಅತ್ಯಂತ ಮೆಚ್ಚಿನವನಾದನು. ಆದ್ದರಿಂದಲೇ ಎಲ್ಲಾ ದೇವತೆಗಳನ್ನೂ ಬಿಟ್ಟು ಲಕ್ಷ್ಮಿಯು ವಿಷ್ಣುವನ್ನು ವರಿಸಿದಳು. ಐಶ್ವರ್ಯವೂ ಸದ್ಗುಣಗಳೂ ಒಂದೆಡೆಯಲ್ಲಿ ಕೂಡಿರು ವದೇ ವಿಷ್ಣುತ್ವವು. ಜಗತ್ತಿನಲ್ಲಿ ಇದು ಅಪರೂಪವೇ ಸರಿ. ಪ್ರಕೃತ ಮಹಾವಿಷ್ಣುವು ದೇವತೆಗಳಲ್ಲೆಲ್ಲ ಪರಮನಾಗಿದ್ದು ತನ್ನ ಯಜ್ಞರೂಪವಾದ ಶರೀರದಿಂದ ಎಲ್ಲಾ ದೇವತೆಗಳನ್ನೂ ಪೋಷಿಸುತ್ತಾನೆ. ಅವರವರ ಯಜ್ಞಭಾಗವನ್ನು ಅವರವರಿಗೆ ಕೊಟ್ಟು ಜಗದ್ರಕ್ಷಣೆಗೆ ನಿಯಮಿಸುತ್ತಾನೆ. ತಾನು ಎಲ್ಲಕ್ಕೂ ಒಡೆಯನಾಗಿದ್ದು

ಜಗತ್ತಿನಲ್ಲಿರುವ ಧರ್ಮಿಷ್ಠರು, ತಪಸ್ವಿಗಳು, ಋಷಿಗಳು, ಭಕ್ತರುಗಳನ್ನೆಲ್ಲ ಉದ್ಧಾರಮಾಡುತ್ತಾನೆ. ಆಗಾಗ್ಗೆ ಪ್ರಪಂಚಕ್ಕೆ ಒದಗಬಹುದಾದ ವಿಪತ್ತುಗಳನ್ನು ಪರಿಹರಿಸುತ್ತಾನೆ. ಈ ಮಹಾಕರ್ಮಗಳಿಂದಲೂ ಗುಣಗಳ ಸಂಪತ್ತಿನಿಂದಲೂ ಕೂಡಿದ ವಿಷ್ಣುವಿನಲ್ಲಿಯೇ ಲಕ್ಷ್ಮಿಯು ಅನುರಕ್ತಳಾಗಿರುವದೇನೂ ಆಶ್ಚರ್ಯವಲ್ಲ. ಆದ್ದರಿಂದ ಮನುಷ್ಯರಲ್ಲಿ ಯಾರು ಧನವನ್ನು ಬಯಸುವರೋ ಅಂಥವರು ವಿಷ್ಣುವನ್ನೇ ಸ್ತುತಿಸಿ ಆತನಿಗೇ ಹವಿಸ್ಸನ್ನು ಅರ್ಪಿಸಬೇಕು. ಅವನು ಯಾವಾಗಲೂ ನರರಿಗೆ ಹಿತವನ್ನುಂಟುಮಾಡುವವನು. ನರರ ಪಾಪಗಳನ್ನು ಕಳೆಯುವ ನರಹರಿಯು. ಆತನು ಪ್ರಸನ್ನನಾದರೆ ಮಾತ್ರವೇ ಲಕ್ಷ್ಮಿಯು ಒಲಿಯುವಳು. ಆತನು ಶ್ರೀ-ಎಂದರೆ ಲಕ್ಷ್ಮಿಗೆ ನಿವಾಸನು- ಎಂದರೆ ವಾಸಸ್ಥಾನನು. ನಾವು ದುರಾಚಾರಿಗಳಾದರೆ ವಿಷ್ಣುವಿಗೆ ಶತ್ರುಗಳಾಗುವೆವು. ಹೇಗೆಂದರೆ ದುರಾಚಾರವೇ ರಾಕ್ಷಸತ್ವವು. ವಿಷ್ಣುವಿಗೆ ರಾಕ್ಷಸರನ್ನು ಕಂಡರೆ ಆಗುವದಿಲ್ಲ. ಆದ್ದರಿಂದ ಭಕ್ತಿಶ್ರದ್ಧಾಪೂರ್ವಕವಾಗಿ ವಿಷ್ಣುಯಾಗವನ್ನು ಮಾಡಿ ವಿಷ್ಣುವಿನ ಭಕ್ತರಾದರೆ ನಾವು ಹಿತವೂ ಸುಖಕರವೂ ಆದ ಲಕ್ಷ್ಮಿಯನ್ನು ಪಡೆದು ಅನುಭವಿಸಬಹುದಾಗಿದೆ. ವಿಷ್ಣುಭಕ್ತನು ಯಾವಾಗಲೂ ಬಡವನಾಗುವದಿಲ್ಲ. ಅವನು ದೊಡ್ಡ ಐಶ್ವರ್ಯಾದಿ ವಿಭೂತಿಗಳನ್ನು ಹೊಂದಿ ಸುಖಿಸುವನು- ಎಂದು ಈ ಮಂತ್ರದಲ್ಲಿ ತಿಳಿಸಿದೆ.

**ತ್ವಂ ವಿಷ್ಣೋ ಸುಮತಿಂ ವಿಶ್ವಜನ್ಯಾಮಪ್ರಯುತಾಮೇವ ಯಾವೋ ಮತಿಂ ದಾಃ । ಪರ್ಚೋಃ ಯಥಾ ನಃ ಸುವಿತಸ್ಯ ಭೂರೇರಶ್ವಾವತಃ ಪುರಶ್ಚಂದ್ರಸ್ಯ ರಾಯಃ ॥೪೦॥**

'ಎಲೈ, ಸ್ತೋತೃಗಳಿಗೆ ಇಷ್ಟಾರ್ಥದಾಯಕನಾದ ವಿಷ್ಣುವೆ, ನೀನು ದೋಷರಹಿತವೂ ಸಕಲರಿಗೂ ಹಿತಕರವಾದದ್ದೂ ಆದ ಸದ್ಬುದ್ಧಿಯನ್ನು ನಮಗೆ ಕೊಡುವವನಾಗು. ಹಾಗೆಯೇ ಅಶ್ವಾದಿಗಳಿಂದ ಕೂಡಿದ ಮತ್ತು ಬಹುಜನರಿಗೆ ಆನಂದಕರವಾದ ಐಶ್ವರ್ಯದ ಪ್ರಾಪ್ತಿಯು ನಮಗೆ ಹೇಗೆ ದೊರಕಬಹುದೋ ಹಾಗೆ ದಯಪಾಲಿಸುವವನಾಗು' ಎಂದು ಈ ಮಂತ್ರದ ಸರಳವಾದ ಅಭಿಪ್ರಾಯ.

ಇಲ್ಲಿ ಸದ್ಬುದ್ಧಿ ಹಾಗೂ ಸರ್ವೋಪಯೋಗಿಯಾದ ಐಶ್ವರ್ಯದ ಪ್ರಾರ್ಥನೆಯನ್ನು ಮಾಡಲಾಗಿದೆ. ವಿಷ್ಣುವು ಸತ್ವಗುಣಸಂಪನ್ನನು. ಆದ್ದರಿಂದಲೇ ಆತನ ಬುದ್ಧಿಯು ಸದ್ಬುದ್ಧಿಯೆನಿಸುವದು. ದೇವತೆಗಳಲ್ಲಿ ವಿಷ್ಣುವಿಗಿಂತ ಕ್ಷಮಾಶೀಲರಾಗಲಿ, ಉದಾರಿಗಳಾಗಲಿ, ಜಾಣರಾಗಲಿ ಯಾರೂ ಇರುವದಿಲ್ಲ.

ಅನೇಕ ಸಂದರ್ಭಗಳಲ್ಲಿ ವಿಷ್ಣುವಿನ ಬುದ್ಧಿಚಾತುರ್ಯದಿಂದ ಜಗತ್ತಿಗೆ ಒದಗಿದ್ದ ವಿಪತ್ತುಗಳು ಪರಿಹಾರವಾಗಿರುವದನ್ನು ಪುರಾಣಗಳಲ್ಲಿ ನೋಡಬಹುದು. ಈತನು ಕೈಗೊಳ್ಳುವ ಕಾರ್ಯಗಳೂ ಸಹ ಸಕಲರಿಗೂ ಹಿತಕರವಾದುದು. ಆದ್ದರಿಂದ ಈತನನ್ನು ಭಜಿಸಿದವರಿಗೂ ದೋಷರಹಿತವೂ ಸರ್ವರ ಕಲ್ಯಾಣಕ್ಕೂ ಕಾರಣ ವಾದದ್ದೂ ಆಗಿರುವ ಬುದ್ಧಿಯುಂಟಾಗಲಿದೆ. ಈಗಿನ ಕಾಲಕ್ಕೆ ಜನರಿಗೆ ಸದ್ಬುದ್ಧಿಯ ಬಡತನವು ಬಹಳ ಹೆಚ್ಚಾಗಿದೆ. ಅದರ ದಾರಿದ್ರ್ಯದಿಂದಲೇ ಅನೇಕ ಸಮಸ್ಯೆಗಳು ಉದ್ಭವಿಸಿರುತ್ತವೆ. ನಿಜವಾಗಿಯೂ ವಿಷ್ಣುಪ್ರಸಾದದಿಂದ ಮಾನವರೆಲ್ಲರಿಗೂ ಸದ್ಬುದ್ಧಿಯುಂಟಾದರೆ ಕೋರ್ಟು ಕಛೇರಿಗಳೂ ಪೋಲೀಸು ಮಿಲಿಟರಿ ಇಲಾಖೆಗಳೂ ಕೃಶವಾಗಿಯೇ ತೀರುತ್ತವೆ. ಆದರೆ ವಿಷ್ಣುವನ್ನು ಭಜಿಸದವರಿಗೆ ಸದ್ಬುದ್ಧಿಯುಂಟಾಗುವ ಸಂಭವವಿಲ್ಲ. ಅದಕ್ಕಾಗಿಯೇ ಈ ಮಂತ್ರದ್ರಷ್ಟಾರನಾದ ಋಷಿಯು ಸಾಮೂಹಿಕವಾಗಿ ನಮ್ಮೆಲ್ಲರಿಗೂ ಸದ್ಬುದ್ಧಿಯನ್ನು ನೀಡಬೇಕೆಂದು ಬೇಡಿಕೊಂಡಿರುತ್ತಾನೆ. ಒಳ್ಳೆಯ ಬುದ್ಧಿಯೆಂಬ ಐಶ್ವರ್ಯಕ್ಕಿಂತ ಮಿಗಿಲಾದುದಿಲ್ಲ. ಇದು ಕ್ಷೀಣವೂ ಆಗುವದಿಲ್ಲ. ಮಾನವನು ಒಮ್ಮೆ ಸದ್ಬುದ್ಧಿಸಂಪನ್ನನಾದರೆ ಸಾಕು. ಅಲ್ಲಿಂದ ಅದೇ ಬುದ್ಧಿಯೇ ಅವನಿಗೆ ಒಗ್ಗಿಹೋಗುತ್ತದೆ. ಅನಂತರ ಅವನೆಂದೂ ದುರ್ಬುದ್ಧಿಯವನಾಗುವದಿಲ್ಲ. ಉಪಯೋಗಿಸಿದಂತೆಲ್ಲ ಸದ್ಬುದ್ಧಿಯು ಬೆಳೆಯುತ್ತದೆ. ಹೀಗೆ ಜಗತ್ತಿಗೆ ಒಳ್ಳೆಯ ಬುದ್ಧಿಯ ಸಜ್ಜನರ ಅವಶ್ಯಕತೆ ಬಹಳವಾಗಿದೆ. ಈಗಲೂ ಕೆಲವರಾದರೂ ಸಜ್ಜನರಿರುವದರಿಂದಲೇ ಮಳೆಬೆಳೆಗಳೂ ಪ್ರಜಾಕ್ಷೇಮವೂ ನೆಲಿಸಿದೆ. ಆದ್ದರಿಂದ ನಾವು ಇನ್ನು ಮುಂದೆ ಸದ್ಬುದ್ಧಿಯನ್ನು ಹೆಚ್ಚು ಹೆಚ್ಚಾಗಿ ದಯಪಾಲಿಸುವಂತೆ ವಿಷ್ಣುವಿನಲ್ಲಿ ಬೇಡಿಕೊಳ್ಳೋಣ. ಸದ್ಬುದ್ಧಿಯು ಯಾವದು? ದುರ್ಬುದ್ಧಿಯು ಯಾವದು ? ಎಂಬುದು ಗೊತ್ತಾಗುವದಿಲ್ಲವಲ್ಲ ! ಎಂದು ಯಾರೂ ಪೇಚಾಡಬೇಕಾಗಿಲ್ಲ. ನಮ್ಮ ಯಾವ ಆಲೋಚನೆಗಳು ನಮಗೂ ಇತರರಿಗೂ ಹಿತವನ್ನುಂಟುಮಾಡಿ ನಮ್ಮನ್ನು ವಿಷ್ಣುಸ್ಮರಣೆಯಿಂದ ಜಾರದಂತೆ ಕಾಪಾಡುವವೋ ಅವೇ ಸದ್ಬುದ್ಧಿಗಳು. ಉಳಿದವುಗಳೆಲ್ಲ ದುರ್ಬುದ್ಧಿಗಳೆಂದೇ ತಿಳಿಯಬೇಕು.

ಇನ್ನು ಐಶ್ವರ್ಯವನ್ನು ಕುರಿತು ಇಲ್ಲಿ ಪ್ರಾರ್ಥಿಸಿರುವದು ಸೂಕ್ತವಾಗಿದೆ. ಉತ್ತಮಬುದ್ಧಿವಂತನಿಗೆ ಹಾಗೂ ಮೇಧಾಸಂಪನ್ನನಿಗೆ ಐಶ್ವರ್ಯವು ದೊರೆತರೆ ಅದು ಖಂಡಿತವಾಗಿ ಸದ್ವಿನಿಯೋಗವಾಗುವದು. ಹಿಂದಿನ ಕಾಲಕ್ಕೆ ಪ್ರಜೆ

ಗಳನ್ನಾಳುತ್ತಿದ್ದ ರಾಜಮಹಾರಾಜರುಗಳೆಲ್ಲರೂ ಸಜ್ಜನರಾಗಿರುತ್ತಿದ್ದರು. ಸೂರ್ಯ, ಚಂದ್ರ- ವಂಶದ ದೊರೆಗಳ ಕಥೆಗಳನ್ನು ಕೇಳಿದರೆ ಈ ವಿಷಯವು ಸ್ಪಷ್ಟವಾಗುವದು. ಅವರುಗಳು ತಮ್ಮ ಐಶ್ವರ್ಯವನ್ನೆಲ್ಲ ಪ್ರಜಾಕ್ಷೇಮಕ್ಕಾಗಿಯೇ ವಿನಿಯೋಗಿಸುತ್ತಿದ್ದರು. ರಾಜರುಗಳನ್ನು ವಿಷ್ಣುವಿನ ಅಂಶಸಂಭೂತರೆಂದೇ ಗೌರವಿಸಲಾಗುತ್ತಿತ್ತು. ಹೀಗೆ ಯಾರಿಗಾದರೂ ಸರಿ. ಮೊದಲು ಸದ್ಬುದ್ಧಿಯುಂಟಾಗಿ ಅನಂತರ ಐಶ್ವರ್ಯವು ದೊರೆತಾಗ ಜಗತ್ತಿಗೂ ವ್ಯಕ್ತಿಗೂ ಕ್ಷೇಮವಾಗುವದು. 'ಮೇಧಾವಂತನಲ್ಲದವನಿಗೆ ದೊರಕುವ ಸಂಪತ್ತು ಅನರ್ಥಕ್ಕೇ ಕಾರಣ'ವೆಂದು ಶ್ರೀಶಂಕರಾಚಾರ್ಯರು ತಿಳಿಸಿದ್ದಾರೆ. ಆದ್ದರಿಂದ ನಾವು ಭಗವಂತನಲ್ಲಿ ಸದ್ಬುದ್ಧಿಯನ್ನೂ ಜೀವನೋಪಾಯದ ಪ್ರಯತ್ನಗಳನ್ನೂ ಜೊತೆಜೊತೆಯಾಗಿಯೇ ಪ್ರಾಮಾಣಿಕವಾಗಿ ಕೇಳಿಕೊಳ್ಳಬೇಕು. ಆಗಲೇ ನಾವು ಇಹಪರಗಳಲ್ಲಿ ಸುಖಿಗಳಾಗಿ ಬಾಳುವೆವು. ಅಂಥ ಪ್ರಾರ್ಥನೆಯನ್ನು ಈ ಮಂತ್ರದಲ್ಲಿ ಮಾಡಲಾಗಿದೆ.

**ತ್ರಿರ್ದೇವಃ ಪೃಥಿವೀಮೇಷ ಏತಾಂ ವಿಚಕ್ರಮೇ ಶತರ್ಚಸಂ ಮಹಿತ್ವಾ । ಪ್ರ ವಿಷ್ಣುರಸ್ತು ತವಸಸ್ತವೀಯಾನ್ ತ್ವೇಷಂ ಹ್ಯಸ್ಯ ಸ್ಥವಿರಸ್ಯ ನಾಮ ॥ ೪೧ ॥**

'ಈ (ದಾನಶೂರನಾದ) ದೇವನು ನೂರುಗಟ್ಟಲೆಯ ಮಹಿಮೆಯುಳ್ಳ ಪೃಥಿವ್ಯಾದಿಲೋಕತ್ರಯಗಳನ್ನು ಮಹತ್ತಾದ ತನ್ನ ಮಹಿಮೆಯಿಂದ ಆಕ್ರಮಿಸಿದನು. ವೃದ್ಧರಲ್ಲೆಲ್ಲ ಅತಿವೃದ್ಧನಾದ ಈತನು ನಮಗೆ ಯಜಮಾನನಾಗಿರಲಿ ; ಏಕೆಂದರೆ ಇವನ 'ವಿಷ್ಣು'ವೆಂಬ ಹೆಸರೇ ಎಲ್ಲರಿಗೂ ಹಿರಿಯನೆಂಬುದನ್ನು ತಿಳಿಸಲು ಪ್ರಭವಿಷ್ಣು (ಸಮರ್ಥ)ವಾಗಿರುತ್ತದೆ' ಎಂದು ಈ ಮಂತ್ರದ ಅಭಿಪ್ರಾಯವು.

ದಾನವನ್ನು ತೆಗೆದುಕೊಳ್ಳಲು ಬಂದವನು ದಾನಶೂರನು ಹೇಗಾದಾನು ? ಎಂದು ಯಾರಾದರೂ ಕೇಳಬಹುದು. ಆದರೆ ವಿಷ್ಣುವು ವಾಮನನಾಗಿ ತಾನು ಸ್ವೀಕರಿಸಿದ ತ್ರಿಲೋಕಗಳನ್ನೂ ದೇವೇಂದ್ರಾದಿಗಳಿಗೇ ಕೊಟ್ಟುಬಿಟ್ಟನು. ತನಗಾಗಿ ಏನನ್ನೂ ಉಳಿಸಿಕೊಳ್ಳಲಿಲ್ಲ. ಆದ್ದರಿಂದಲೇ ಇವನು ದಾನಿಯೆನಿಸಿ ದೇವನಾದನು. ಈತನ ತ್ರಿವಿಕ್ರಮರೂಪದ ಮಹಿಮೆಯನ್ನು ಈಗಾಗಲೇ ವರ್ಣಿಸಿದ್ದಾಗಿದೆ. ಇನ್ನು ಈತನು ವೃದ್ಧನೆಂಬುದನ್ನು ನೋಡೋಣ. ಮುದುಕರನ್ನು ವೃದ್ಧರೆಂದು ಕರೆಯುವದು ಲೋಕದಲ್ಲಿ ವಾಡಿಕೆ. ಆ ಅರ್ಥದಲ್ಲಿ ಈತನು ವೃದ್ಧನಲ್ಲ. ಮತ್ತೇನೆಂದರೆ

ಷಡ್ಗುಣೈಶ್ವರ್ಯಸಂಪತ್ತುಗಳಿಂದ ಪರಿಪೂರ್ಣನಾದ್ದರಿಂದ ವೃದ್ಧನು. ಆದ್ದರಿಂದಲೇ ಎಲ್ಲರಿಗೂ ಪ್ರಭುವು. ಈತನನ್ನು ವಿಷ್ಣು, ಜಿಷ್ಣು, ಮಹಾವಿಷ್ಣು, ಪ್ರಭವಿಷ್ಣು- ಎಂದೆಲ್ಲ ಭೀಷ್ಮಾಚಾರ್ಯರು ಸ್ತುತಿಸಿರುತ್ತಾರಲ್ಲವೆ ? ಈತನು ಪುರುಷೋತ್ತಮ ನಲ್ಲವೆ ? ರಾಜಸೂಯಯಾಗದಲ್ಲಿ ಅಗ್ರಪೂಜೆಯನ್ನು ಸ್ವೀಕರಿಸಿದವನು ಈತನೇ ಅಲ್ಲವೆ ? ವಿಷ್ಣುಶಬ್ದವೇ ಈ ಅರ್ಥಗಳನ್ನೆಲ್ಲ ಕೊಡಲು ತಕ್ಕದ್ದಾಗಿದೆ. ಆದ್ದರಿಂದ ನಮಗೆಲ್ಲ ಈತನೇ ಪ್ರಭುವೂ ಒಡೆಯನೂ ಆಗಿರಲಿ ! ಎಂದಭಿಪ್ರಾಯ.

ಇನ್ನು ಈತನ 'ನಾಮ' ಮಹಿಮೆಯನ್ನು ನೋಡೋಣ. ವೇದದಲ್ಲಿ ಭಗವನ್ನಾಮಕೀರ್ತನೆಯ ವಿಷಯಕ್ಕೆ ಪರಾಮರ್ಶವಿದೆಯೆ ? ಎಂದು ಕೇಳುವ ವೈದಿಕರಿಗೆ ಈ ಮಂತ್ರವು ಉತ್ತರವನ್ನು ಕೊಡುತ್ತಿದೆ. ಹೇಗೆಂದರೆ ಈ ವಿಷ್ಣುವೆಂಬ ನಾಮವೇ **'ತ್ವೇಷಮ್'**-ದೀಪ್ತಮ್, ವಿರಾಜಮಾನವಾಗಿದೆ- ಎಂದರ್ಥ. ಆದ್ದರಿಂದ ಜನಸಾಮಾನ್ಯರಿಗೆ ಭಗವಂತನ ರೂಪವನ್ನು ಕಾಣಲಾಗದಿದ್ದರೂ 'ನಾಮ'ವು ಸುಲಭಪ್ರಾಪ್ತವಾಗಿದೆ. ಕಲಿಯುಗದಲ್ಲಿ ನಾಮಕೀರ್ತನೆಯೇ ಸಾಕೆಂದು ಋಷಿಮುನಿಗಳೂ ಅಭಿಪ್ರಾಯಪಟ್ಟಿದ್ದಾರೆ. ಮಹಾತ್ಮರುಗಳೂ ಸಮರ್ಥಿಸಿದ್ದಾರೆ. ಯಶೋವಂತನಾದ ವಿಷ್ಣುವಿನ ನಾಮವು ನಮಗೆಲ್ಲ ದಕ್ಕಿದರೆ ಭಗವಂತನೇ ದೊರಕಿದಂತೆ ಎಂದಭಿಪ್ರಾಯ. ಭಗವನ್ನಾಮಕ್ಕೆ ಮಂಗಳವಾಗಲಿ.

**ವಿಚಕ್ರಮೇ ಪೃಥಿವೀಮೇಷ ಏತಾಂ ಕ್ಷೇತ್ರಾಯ ವಿಷ್ಣುರ್ಮನುಷೇ ದಶಸ್ಯನ್ । ಧ್ರುವಾಸೋ ಅಸ್ಯ ಕೀರಯೋ ಜನಾಸ ಉರುಕ್ಷಿತಿಂ ಸುಜನಿಮಾಚಕಾರ ॥೪೨॥**

'ಈ ದೇವನಾದ ವಿಷ್ಣುವು ಈ ಭೂಮಿಯನ್ನೂ (ಅಂತರಿಕ್ಷದ್ಯುಲೋಕ ಗಳನ್ನೂ) ನಿವಾಸಕ್ಕಾಗಿ ಬೇಡುತ್ತಿದ್ದ ದೇವಗಣಗಳಿಗೆ ಕೊಡಿಸುವವನಾಗಿ ಹೆಜ್ಜೆ ಇಟ್ಟನು. ಈತನನ್ನು ಸ್ತುತಿಸುವ ಜನರು ನಿಶ್ಚಲರಾಗುವರು. ಸುಖಕರವಾದ ವಾಸ ಕ್ಕಾಗಿ ಈ ಭೂರಾದಿಗಳನ್ನು ಸ್ತುತಿಕರ್ತೃಗಳಿಗೆ ಈತನು ಉಂಟುಮಾಡಿಕೊಡುವನು' ಎಂದು ಈ ಮಂತ್ರದ ಸರಳವಾದ ಅರ್ಥ.

ಮಹಾವಿಷ್ಣುವು ಭೂರಾದಿಲೋಕಗಳನ್ನು ಅಸುರರ ಹಿಡಿತದಿಂದ ತಪ್ಪಿಸಿ ದೇವತೆಗಳಿಗೆ ದಯಪಾಲಿಸಿದ ವಿಷಯವನ್ನು ಈಗಾಗಲೆ ತಿಳಿಸಿ ಆಗಿದೆ. ಆದರೂ ಮತ್ತೆ ಮತ್ತೆ ವಿವರಿಸುವದೇಕೆಂದರೆ : ಆಗಾಗ್ಗೆ ಅಸುರರು ಧಾಳಿ ಮಾಡುವದೂ

ದೇವತಾದಿಗಳಿಗೆ ವಾಸಸ್ಥಾನವಿಲ್ಲವಾಗುವದೂ ಸೃಷ್ಟಿಯಲ್ಲಿ ಸಂಭವಿಸುತ್ತಲೇ ಇರುವದರಿಂದ ಸ್ಥಿತಿಕಾಲದಲ್ಲಿ ನಾವು ಬಿಡದೆ ಯಾವಾಗಲೂ ವಿಷ್ಣುವನ್ನು ಸ್ತುತಿಸುತ್ತಿರಬೇಕೆಂಬುದನ್ನು ತಿಳಿಸುವದಕ್ಕೇ ಆಗಿದೆ. ಈಗಲೂ ಇಂಥ ಆಪತ್ತು ಸಂಭವಿಸಿಬಿಟ್ಟಿದೆ. ವಿಜ್ಞಾನಿಗಳ ಅನೇಕ ಶೋಧನೆಗಳ ಫಲವಾಗಿ ಅಂತರಿಕ್ಷ, ಗ್ರಹಲೋಕಗಳ ಹೆಚ್ಚುಹೆಚ್ಚಿನ ಪರಿಚಯವು ಮಾನವನಿಗೆ ತಿಳಿದುಬಂದಿರುವದು ಒಂದು ರೀತಿಯಿಂದ ಲಾಭವಾದರೂ ಆ ಶೋಧಗಳ ಫಲವನ್ನು ಕಾಮಕ್ರೋಧಗಳಿಂದ ಪ್ರೇರಿತನಾದ ಮಾನವನು ಜಗತ್ತಿನ ವಿನಾಶಕ್ಕೇ ಬಳಸಿಬಿಡುವ ಭಯವುಂಟಾಗಿದೆ. ಅಣ್ವಸ್ತ್ರಸಮರವೇನಾದರೂ ಸಂಭವಿಸಿಬಿಟ್ಟರೆ ಮಾನವಕುಲವೇ ನಿರ್ನಾಮವಾಗಿಬಿಡುವದೆಂದು ಬಲ್ಲವರು ಹೇಳುತ್ತಿದ್ದಾರೆ. ಆದ್ದರಿಂದ ಈಗ ಮತ್ತೊಮ್ಮೆ ಮಹಾವಿಷ್ಣುವು ತ್ರಿವಿಕ್ರಮನಾಗಿ ಬಂದು ಅಸುರರು ಈಗ ಅಶಾಂತಿಯ ನೆಲೆವೀಡಾಗಿ ಮಾಡಿರುವ ಈ ಭೂಮಂಡಲವನ್ನೂ ಅಂತರಿಕ್ಷವನ್ನೂ ತನ್ನ ಪಾದಸ್ಪರ್ಶದಿಂದ ಅಮೃತಮಯವಾಗಿ ಮಾಡಬೇಕಾಗಿ ಬಂದಿದೆ. ಆ ಕಾರ್ಯವು ನೆರವೇರುವದಕ್ಕಾಗಿ ನಾವೆಲ್ಲರೂ (ಶಾಂತಿಪ್ರಿಯರೆಲ್ಲರೂ) ಶ್ರದ್ಧಾಭಕ್ತಿಗಳಿಂದ ಮಹಾವಿಷ್ಣುವನ್ನು ಸ್ತುತಿಸಬೇಕಾಗಿದೆ. ಅಂಥ ಸ್ತುತಿಗಳಿಂದ ಸಂತುಷ್ಟನಾದ ಆ ಜಗದ್ರಕ್ಷಕನು ನಮಗೆ ಭೂಲೋಕಾದಿಗಳನ್ನು ಮತ್ತೆ ನಿವಾಸಕ್ಕಾಗಿ ಸಿದ್ಧಮಾಡಿಕೊಡಲಿದ್ದಾನೆ. ಆತನ ಪಾದಸ್ಪರ್ಶವಾಗಿಬಿಟ್ಟರೆ ಎಂಥ ಮಾರಕಾಸ್ತ್ರಗಳೂ ಹೇಳಹೆಸರಿಲ್ಲವಾಗುವವು. ಅಥವಾ ಅದೃಶ್ಯವಾಗಿಬಿಡುವವು. ಸ್ತುತಿಮಾಡುವವರಿಗೆ ಮಹಾವಿಷ್ಣುವು ನಿಶ್ಚಯವಾಗಿಯೂ ಸುಖನಿವಾಸವನ್ನು ಒದಗಿಸಿಕೊಡುವನೆಂದು ವೇದವೇ ಹೇಳುತ್ತಿದೆ. ಮತ್ತು ಆತನನ್ನು ಸ್ತುತಿಸುವವರು ಐಹಿಕಾಮುಷ್ಮಿಕ ಲಾಭಗಳಿಂದ ಕೂಡಿದವರಾಗಿ ನಿಶ್ಚಿಂತರಾಗಿ ಸುಖಿಸುವರೆಂದೂ ತಿಳಿಸುತ್ತದೆ. ಅಂತೂ ಮಹಾವಿಷ್ಣುವಿನ ಕೀರ್ತನಸ್ಮರಣಗಳನ್ನು ಈ ಕೂಡಲೆ ನಾವುಗಳು ಆರಂಭಿಸಿಬಿಡಬೇಕು. ಈವರೆಗೆ ತಡಮಾಡಿದ್ದೇ ಇಂಥ ಉಗ್ರಭಯಕ್ಕೆ ಕಾರಣವಾಗಿದೆಯೆಂದೂ ತಿಳಿಯಬೇಕು.

**ಪ್ರತತ್ತೇ ಅದ್ಯ ಶಿಪಿವಿಷ್ಟ ನಾಮಾರ್ಯಃ ಶಂಸಾಮಿ ವಯುನಾನಿ ವಿದ್ವಾನ್ ।**
**ತಂ ತ್ವಾ ಗೃಣಾಮಿ ತವಸಮತವ್ಯಾನ್ ಕ್ಷಯಂತಮಸ್ಯ ರಜಸಃ ಪರಾಕೇ ॥ ೪೩ ॥**

'ಎಲೈ ಶಿಪಿವಿಷ್ಟನೆ, ನಿನ್ನ ಪ್ರಸಿದ್ಧವಾದ ನಾಮವನ್ನು ಸ್ತುತಿಗಳಿಗೆ ಪಾತ್ರನಾದ ನೀನು ಸ್ವಾಮಿಯು ಎಂದು ಅರಿತವನಾಗಿ ನಾನು ಈಗ ಬಹಳವಾಗಿ ಪ್ರಶಂಸೆ

ಮಾಡುವೆನು. ಈ ರಜೋಗುಣಯುಕ್ತವಾದ ಲೋಕದಿಂದಾಚೆಗೆ ವಾಸಿಸುತ್ತಿರುವ ಪ್ರವೃದ್ಧನಾದ ನಿನ್ನನ್ನು ಇನ್ನೂ ಬಾಲಕನಾದ ನಾನು ಸ್ತುತಿಸುವೆನು'- ಎಂದು ಸರಳವಾದ ಅರ್ಥವು.

ಸ್ತೋತ್ರಗಳಿಗೆ ಪಾತ್ರನಷ್ಟೇ ಅಲ್ಲ. ಆ ವಾಕ್ಕುಗಳಿಗೆಲ್ಲ ಒಡೆಯನೂ ಆಗಿರುವ ಭಗವಂತನು ಒಂದು ರೀತಿಯಲ್ಲಿ ತಾನೇ ಸ್ತುತಿಯಾಗಿ ಅವತರಿಸಿ ನಮ್ಮನ್ನು ಅನುಗ್ರಹಿಸಿರುತ್ತಾನೆ. ವೇದಗಳಿಗಿಂತ ಹೆಚ್ಚಿನ ದೇವತಾಸ್ತುತಿಗಳಿರುವದಿಲ್ಲ. ಆ ವೇದಗಳನ್ನು ವಿಷ್ಣುವೇ ಎಂದು ತಿಳಿಯುವದೇ ಜಾಣತನವು. ವೇದಃ, ಸ್ತೋತ್ರಮ್ - ಎಂಬೀ ನಾಮಗಳನ್ನು ವಿಷ್ಣುಸಹಸ್ರನಾಮಾವಳಿಯಲ್ಲಿ ಭಗವಂತನ ಹೆಸರೆಂದೇ ಬಳಸಲಾಗಿದೆ. ಆದ್ದರಿಂದ ವೇದಮಯವಾದ ಸ್ತುತಿಗಳಿಂದ ಶಿಪಿವಿಷ್ಟನಾದ ವಿಷ್ಣುವು ಹೊಗಳಲ್ಪಡುವನು. ಶಿಪಿವಿಷ್ಟನೆಂದರೆ ತೇಜೋಮಯಕಿರಣಗಳಿಂದ ಕೂಡಿರುವವನು. ವಿಷ್ಣುವು ವಿಶ್ವರೂಪವನ್ನು ಧರಿಸಿದಾಗ ಒಮ್ಮೆಗೇ ಸಾವಿರ ಸೂರ್ಯರು ಬೆಳಗಿದಂತಿತ್ತು-ಎಂದು ಸಂಜಯನು ಗೀತೆಯಲ್ಲಿ ತಿಳಿಸಿರುತ್ತಾನೆ. ಒಬ್ಬ ಸೂರ್ಯನನ್ನೇ ಬರಿಗಣ್ಣಿನಲ್ಲಿ ನೋಡಲಾರದ ನಾವು ಸಾವಿರಸೂರ್ಯರನ್ನು ಮೀರಿದ ಪ್ರಕಾಶವುಳ್ಳ ದೇವನನ್ನು ನೋಡುವದೆಂತು? ನಮ್ಮ ಇಂದ್ರಿಯಗಳಲ್ಲಿ ಕಣ್ಣುಗಳು ಆ ದೇವನ ಸೇವೆಗೆ ಬಾರದಾಗಿ ಬಿಟ್ಟವು. ಆದ್ದರಿಂದ ಉಳಿದ ವಾಗಿಂದ್ರಿಯವನ್ನಾದರೂ ಆತನ ಸ್ತುತಿಗಳಲ್ಲಿ ತೊಡಗಿಸುವ ಮೂಲಕ ಸಾರ್ಥಕಗೊಳಿಸಿಕೊಳ್ಳಬೇಕು. ಹೀಗೆ ಸ್ತುತಿಮಾಡುವ ಸಾಧಕನು 'ಪ್ರಭುವೆ, ನೀನು ರಜೋದೋಷಗಳಿಲ್ಲದ ಪರಿಶುದ್ಧಲೋಕದಲ್ಲಿರುವೆ; ನೀನು ಪ್ರವೃದ್ಧನು. ನಾನಾದರೊ, ಇನ್ನೂ ಅಪ್ರಬುದ್ಧನು. ಆದರೂ ಈ ತಾರತಮ್ಯವನ್ನೆಣಿಸದೆ ನನ್ನ ಸ್ತುತಿಗಳನ್ನು ಕೇಳುವವನಾಗು ; ಹಾಗೂ ಅನುಗ್ರಹಿಸುವವನಾಗು' ಎಂದು ಬೇಡಿಕೊಳ್ಳುತ್ತಿದ್ದಾನೆ. ಮಂತ್ರದಲ್ಲಿರುವ 'ತವಸಮತವ್ಯಾನ್' ಎಂಬಿದನ್ನು ತವಸಂ-ಪ್ರವೃದ್ಧನಾಗಿರುವ ನಿನ್ನನ್ನು ಅತವ್ಯಾನ್-ಯವೀಯನಾದ ನಾನು- ಎಂಬಿದಾಗಿ ಬಿಡಿಸಿ ಭಾಷ್ಯಕಾರರು ಅರ್ಥಮಾಡಿರುತ್ತಾರೆ.

**ಕಿಮಿತ್ತೇ ವಿಷ್ಣೋ ಪರಿಚಕ್ಷ್ಯಂ ಭೂತ್ ಪ್ರಯದ್ವವಕ್ಷೇ ಶಿಪಿ ವಿಷ್ಟೋ ಅಸ್ಮಿ ।**
**ಮಾ ವರ್ಪೋ ಅಸ್ಮದಪಗೂಹ ಏತದ್ಯದನ್ಯ ರೂಪಃ ಸಮಿಥೇ ಬಭೂಥ ॥ ೪೪ ॥**

'ಎಲೈ ವಿಷ್ಣುವೆ, ನಿನ್ನ (ಹೆಸರು) ಪ್ರಸಿದ್ಧವಲ್ಲವೆಂದು ಬಚ್ಚಿಡುವೆಯಾದರೂ ಅದು ಆವರಣವಿಲ್ಲದ್ದಾಗಿರುವದರಿಂದ ಪ್ರಸಿದ್ಧವೇ ಆಗಿರುವದು. ಆದ್ದರಿಂದ

ನೀನು ವ್ಯರ್ಥವಾಗಿ ಉಪಗೂಹನಮಾಡಬೇಡ. ಬೇರೊಂದು ರೂಪದಿಂದ ತೋರಿಕೊಂಡಾಗಲೂ ಯುದ್ಧದಲ್ಲಿ ನಿನ್ನ ಶೌರ್ಯಾದಿಗಳ ನಿಮಿತ್ತವಾಗಿ ಅದು ತಿಳಿದುಬಂದೇಬಿಟ್ಟಿತಲ್ಲವೆ ? ಆದ್ದರಿಂದ ನಿಜರೂಪವನ್ನೇ ಪ್ರಕಟಿಸುವವನಾಗು' ಎಂದಭಿಪ್ರಾಯ.

ಹಿಂದೊಮ್ಮೆ ಮಹಾವಿಷ್ಣುವು ತನ್ನ ರೂಪವನ್ನು ಮರೆಸಿಕೊಂಡವನಾಗಿ ಕೃತ್ರಿಮರೂಪದಿಂದ ಯುದ್ಧದಲ್ಲಿ ವಸಿಷ್ಠರಿಗೆ ಸಹಾಯಮಾಡಿದನಂತೆ. ಆಗ ವಸಿಷ್ಠರು ತನಗೆ ಸಹಾಯಮಾಡಿದವನು ವಿಷ್ಣುವೇ ಎಂಬುದನ್ನು ಪತ್ತೆ ಹಚ್ಚಿದವರಾಗಿ ಹೀಗೆ ಸ್ತೋತ್ರಮಾಡಿದರಂತೆ. ಶಿಪಿವಿಷ್ಟನೆಂಬ ನಾಮವು ರಶ್ಮಿಗಳಿಂದ ಕೂಡಿದವನೆಂಬುದನ್ನು ಸೂಚಿಸುತ್ತದೆ. ಕೃತ್ರಿಮವೇಷದಲ್ಲಿರುವಾಗಲೂ 'ನಿನ್ನ ಹೆಸರೇನು ?' ಎಂದು ಕೇಳಿದ ವಸಿಷ್ಠರಿಗೆ ವಿಷ್ಣುವು ಶಿಪಿವಿಷ್ಟನೆಂದು ಹೇಳಿದ್ದರಿಂದ ಈತನು ನಿಜವಾಗಿ ಮಹಾವಿಷ್ಣುವೇ ಎಂದು ತಿಳಿಯಿತು. ಯಾವನು ತೇಜೋಮಯನೋ ಅವನು ತನ್ನನ್ನು ತಾನು ಬಚ್ಚಿಟ್ಟುಕೊಳ್ಳಲಾದೀತೆ ? ಹೀಗಿರುವದರಿಂದ ಋಷಿಗಳು ಆತನನ್ನು ಸ್ವರೂಪದಿಂದಲೇ ಗುರಿತಿಸಿದವರಾಗಿ ಸ್ತೋತ್ರಮಾಡಿದ್ದಾರೆ. 'ಹೇ ದೇವ, ನೀನು ನನ್ನ ವಿಷಯದಲ್ಲಿ ನಿನ್ನ ರೂಪವನ್ನು ಮರೆಯಿಸಿಕೊಳ್ಳಬೇಡ. ನಿಜರೂಪದಿಂದಲೇ ತೋರಿಕೊಳ್ಳುವವನಾಗು. ನಿನ್ನ ಮಹಿಮೆಯು ಯಾವಾಗಲೂ ಪ್ರಕಟವಾಗಿಯೇ ಇರುವದು. ಇನ್ನು ನೀನು ಆಕಾರದಿಂದ ಮರೆಯಾದರೆ ಫಲವೇನು ? ನಮಗೆಲ್ಲ ನಿನ್ನ ನಿಜರೂಪದಿಂದಲೇ ದರ್ಶನವನ್ನು ಕರುಣಿಸು' ಎಂಬಿದೇ ಈ ಸ್ತೋತ್ರದ ಅಭಿಪ್ರಾಯವು.

**ವಷಟ್ ತೇ ವಿಷ್ಣವಾಸ ಆಕೃಣೋಮಿ ತನ್ಮೇ ಜುಷಸ್ವ ಶಿಪಿವಿಷ್ಟ ಹವ್ಯಮ್ ।**
**ವರ್ಧಂತು ತ್ವಾ ಸುಷ್ಟುತಯೋ ಗಿರೋ ಮೇ ಯೂಯಂ ಪಾತ ಸ್ವಸ್ತಿಭಿಃ ಸದಾ ನಃ ॥ ೪೫ ॥**

ಈ ಮಂತ್ರವು ೩೮ನೆಯ ಮಂತ್ರವಾಗಿ ಹಿಂದೆ ಬಂದಿದೆ. ೯೦,೯೧ನೆಯ ಮಂತ್ರವಾಗಿ ಇದನ್ನು ವ್ಯಾಖ್ಯಾನ ಮಾಡಲಾಗಿದೆ. ಇಲ್ಲಿಗೆ ವಿಷ್ಣುಸೂಕ್ತವು ಪೂರೈಸುತ್ತದೆ.

॥ ಹರಿಃ ಓಮ್ ತತ್ಸತ್ ॥

15. **ಪ್ರಬೋಧಸುಧಾಕರ** (ಪ್ರಕರಣಗಳು ಸಂಪುಟ 8) : (ಪ್ರಬೋಧ ಸುಧಾಕರ, ಪ್ರಶ್ನೋತ್ತರ ರತ್ನ ಮಾಲಿಕಾ, ಶ್ರೀರಾಮ ಭುಜಂಗ ಪ್ರಯಾತ, ದತ್ತಲಹರೀ ಸಹಿತ) 118

16. **ದೇವೀಮಾಹಾತ್ಮ್ಯ** : ದುರ್ಗಾಸಪ್ತಶತೀ - ಮೂಲ, ಭಾವಾರ್ಥ ಸಹಿತ 116

17. **ಗೀತಾಮನನ** : (101 ಶ್ಲೋಕಗಳಲ್ಲಿ ಗೀತೆಯ ಸಂಗ್ರಹ - ವಿವರಣೆ) 48

18. **ಗೃಹಪ್ರವೇಶ** : (ಹೊಸದಾಗಿ ಮನೆಯನ್ನು ಕಟ್ಟಿದವರು ಅನುಸರಿಸಬೇಕಾದ ಕ್ರಮಗಳ ಅರ್ಥವಿವರಣೆ, ಗೃಹಸ್ಥಧರ್ಮದ ಪ್ರಾಶಸ್ತ್ಯದೊಡನೆ - ಅಧ್ಯಾತ್ಮ ತತ್ತ್ವವಿಚಾರ ಸಹಿತ) 42

19. **ಸ್ತುತಿಪುಷ್ಪಾಂಜಲಿ** : (ಭಕ್ತರೆಲ್ಲರೂ ಕಂಠಪಾಠಮಾಡಲು ಯೋಗ್ಯವಾದ-ಶ್ಲೋಕಗಳು, ಪ್ರತಿಪದಾರ್ಥಸಹಿತ) 72

## III. ಅಧ್ಯಾತ್ಮ ಜಿಜ್ಞಾಸುಗಳಿಗೆ (ತತ್ತ್ವಪ್ರಧಾನರಾದ ಮುಮುಕ್ಷುಗಳಿಗೆ)

20. **ಮಹಾನಾರಾಯಣೋಪನಿಷತ್ತು** : (ಕನ್ನಡದಲ್ಲಿ ವಿಸ್ತಾರವಾದ - ಅರ್ಥವಿವರಣೆ) 220

21. **ತೈತ್ತಿರೀಯೋಪನಿಷದ್ಭಾಷ್ಯವಾರ್ತಿಕ** : (ಮೂಲ - ಅನುವಾದ ಸಹಿತ) 200

22. **ಆತ್ಮಪ್ರತಿಬೋಧ** : (ಕೇನೋಪನಿಷತ್ತನ್ನು ಕುರಿತ ಪ್ರಬಂಧ) 48

23. **ಸರಸ್ವತೀರಹಸ್ಯೋಪನಿಷಚ್ಚಂದ್ರಿಕೆ** : ( ಈ ಹೆಸರಿನ ಉಪನಿಷತ್ತಿನ ಮೇಲೆ - ಬರೆದಿರುವ ವಿವರಣೆ) 58

24. **ಬೃಹದಾರಣ್ಯಕೋಪನ್ಯಾಸಮಂಜರಿ** : (ಶಾಂಕರ ಭಾಷ್ಯಾನುಸಾರವಾದ ಲಘು ವಿವರಣೆ) 340

25. **ಛಾಂದೋಗ್ಯೋಪನ್ಯಾಸಮಂಜರಿ** : (ಶಾಂಕರಭಾಷ್ಯಾನುಸಾರವಾದ ಲಘು ವಿವರಣೆ) 338

26. **ಶ್ವೇತಾಶ್ವತರೋಪನ್ಯಾಸಮಂಜರಿ** : (ಈ ಉಪನಿಷತ್ತಿನ ಲಘು ವಿವರಣೆ) 354

## IV. ಹೊರ ಬರಲಿರುವ ಗ್ರಂಥಗಳು

1) ತೈತ್ತಿರೀಯೋಪನ್ಯಾಸಮಂಜರಿ 2) ಐತರೇಯೋಪನ್ಯಾಸಮಂಜರಿ
3) ಗೀತಾಶಾಸ್ತ್ರಾರ್ಥ ವಿವೇಕ (ಶ್ರೀಶ್ರೀಗಳವರ ಸಂಸ್ಕೃತ ಗ್ರಂಥದ ಅನುವಾದ)

(ಈ ಗ್ರಂಥಗಳ ಮುದ್ರಣಕ್ಕೆ ಧನಸಹಾಯವನ್ನು ನೀಡಿ ಋಷಿಋಣವನ್ನು ಸಲ್ಲಿಸಿ ಕೃತಾರ್ಥರಾಗಿರಿ)

**ಹೆಚ್ಚಿನ ವಿವರಗಳಿಗೆ ಕಾರ್ಯಾಲಯಕ್ಕೆ ಬರೆಯಿರಿ**

## ವೇ|| ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳ ಕಿರುಪರಿಚಯ



ಶ್ರೀ ಕೃಷ್ಣಯಜುರ್ವೇದ ಸಲಕ್ಷಣ ಘನಾಂತ ಸ್ಮಾರ್ತಪ್ರಯೋಗ ಉಭಯ ವಿದ್ವಾನ್ ದಿ|| ಶೃಂಗೇರಿ ಶ್ರೀಕಂಠಘನಪಾಠಿಗಳವರು ಮತ್ತು ಕಮಲಮ್ಮನವರ ಸೀಮಂತ ಪುತ್ರರಾದ ಶ್ರೀ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳು ತಾ|| 2-6-1928 ರಲ್ಲಿ ಜನಿಸಿದರು. ಒಂಭತ್ತನೆಯ ವಯಸ್ಸಿನಲ್ಲಿಯೇ ಬ್ರಹ್ಮಚರ್ಯಾಶ್ರಮವನ್ನು ಸ್ವೀಕರಿಸಿ ತಂದೆಯವರಿಂದಲೇ ವೇದಾಧ್ಯಯನ ಕಾಲೋಚಿತಭಾಗಗಳನ್ನು ಅಭ್ಯಾಸ ಮಾಡಿದರು. 14ನೆಯ ವಯಸ್ಸಿನಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಅದೇ ಸಂದರ್ಭದಲ್ಲಿ ಪಿತೃವಿಯೋಗವಾದ್ದರಿಂದ ಆಂಗ್ಲವಿದ್ಯಾಭ್ಯಾಸದಿಂದ ನಿವೃತ್ತರಾಗಿ ಬೇಲೂರಿನಲ್ಲಿ ಸಂಸ್ಕೃತಪಾಠಶಾಲೆಗೆ ಸೇರಿ ನಾಲ್ಕು ವರ್ಷಗಳ ಕಾಲ ಸಂಸ್ಕೃತಾಭ್ಯಾಸ ಮಾಡಿ ಚಂಪೂ ನಾಟಕ (ಸಾಹಿತ್ಯ) ಪರೀಕ್ಷೆಯಲ್ಲಿ ಪ್ರಥಮದರ್ಜೆಯಲ್ಲಿ ಉತ್ತೀರ್ಣರಾದರು. ಅನಂತರ 1947ರಲ್ಲಿ ಹೊಳೆನರಸೀಪುರಕ್ಕೆ ಬಂದು ಅಧ್ಯಾತ್ಮವಿದ್ಯಾನಿಲಯಕ್ಕೆ ಸೇರಿ ಐದು ವರ್ಷಗಳ ಕಾಲ ಶಾಂಕರವೇದಾಂತಾಧ್ಯಯನವನ್ನು ಶ್ರೀಶ್ರೀ ಸಚ್ಚಿದಾ-ನಂದೇಂದ್ರಸರಸ್ವತೀಸ್ವಾಮಿಗಳವರ ಸನ್ನಿಧಿಯಲ್ಲಿ ಅಭ್ಯಾಸಮಾಡಿ 1952 ರಲ್ಲಿ ''ಅಧ್ಯಾತ್ಮವಿದ್ಯಾಪ್ರವೀಣ'' ಎಂಬ ಪ್ರಶಸ್ತಿಯನ್ನು ಪಡೆದರು. ಅನಂತರ ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿಯೇ ಪಂಡಿತರಾಗಿ ನೇಮಿಸಲ್ಪಟ್ಟು ಪಾಠ ಪ್ರವಚನಗಳು ಉಪನ್ಯಾಸಗಳು ಹಾಗೂ ಸಂಸ್ಥೆಯ ಆಡಳಿತ ವಿಭಾಗದಲ್ಲಿಯೂ ಸೇವೆಯನ್ನು ಸಲ್ಲಿಸುತ್ತಾ ಈಗಲೂ ಸಂಸ್ಥೆಯಲ್ಲಿ ಸೇವಾತತ್ಪರರಾಗಿದ್ದಾರೆ.

ಅಧ್ಯಾತ್ಮಪ್ರಕಾಶಕಾರ್ಯಾಲಯದ ಸಂಸ್ಥಾಪಕರಾದ ಪೂಜ್ಯ ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು 1975ರಲ್ಲಿ ಬ್ರಹ್ಮೀಭೂತರಾದ ಮೇಲೆ ಇವರು 'ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆಯ ಸಂಪಾದಕರೂ, ಲೇಖಕರೂ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಜೊತೆಗೆ ಅಧ್ಯಾತ್ಮಗ್ರಂಥಗಳ ಬರಹಗಾರರೂ ಪ್ರಕಾಶಕರೂ ಆಗಿ ಸೇವೆ ಸಲ್ಲಿಸುತ್ತಾ ಪ್ರಧಾನಕಾರ್ಯಾಲಯದಲ್ಲಿಯೇ ಕಳೆದ 48 ವರ್ಷಗಳಿಂದಲೂ ಸೇವಾನಿರತರಾಗಿದ್ದಾರೆ. ಶ್ರೀಶ್ರೀಗಳವರ ಕಾಲಾನಂತರ ಈವರೆಗೆ 26 ಅಧ್ಯಾತ್ಮ ಗ್ರಂಥಗಳನ್ನು ಹೊರತಂದಿದ್ದಾರೆ. ನಾಲ್ಕು ಪರ್ಯಾಯಗಳಲ್ಲಿ ಬ್ರಹ್ಮಸೂತ್ರ ಶಾಂಕರಭಾಷ್ಯದ ಮೇಲೆ 120 ಪ್ರವಚನಗಳನ್ನು ನೀಡಿದ್ದಾರೆ. ಇವು 108 ಕ್ಯಾಸೆಟ್ ಗಳಲ್ಲಿ ಅಡಕವಾಗಿದ್ದು ಜನಪ್ರಿಯವಾಗಿವೆ. ಹೀಗೆ ಪೂಜ್ಯ ಶ್ರೀಶ್ರೀಗಳವರ ಶಿಷ್ಯರಲ್ಲಿ ಗಣ್ಯರಾಗಿದ್ದು ಈಗಲೂ ತಮ್ಮ ಅಮೋಘಸೇವೆಯಿಂದ ಸಂಸ್ಥೆಯ ಅಭಿವೃದ್ಧಿಗೆ ಕಾರಣರಾಗಿದ್ದಾರೆ - ಎಂದು ತಿಳಿಸಲು ಸಂತೋಷಪಡುತ್ತೇವೆ.

**15-2-2000** **ಅಧ್ಯಕ್ಷರು**